www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕೋವಿಡ್: ಭೀತಿ ಬೇಡ, ಎಚ್ಚರ ಇರಲಿ

ಇಂದು
ತಂತ್ರಜ್ಞಾನ 8

ಜಿಎಸ್‌ಟಿ ವಂಚನೆ: 37 ಕಡೆ ಲೋಕಾಯುಕ್ತ ಶೋಧ 5

ಬೆಂಗಳೂರು ಸಂಚಾರ ನಿರ್ವಹಣೆಗೆ ಪ್ರಾಧಿಕಾರ 3

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,927	18,132	₹56,150 (ಬೆಂಗಳೂರು)	₹69,900 (ಬೆಂಗಳೂರು)	82.90

865 ಗ್ರಾಮಗಳನ್ನು ಸೇರಿಸಿಕೊಳ್ಳಲು ಬದ್ಧ ಎಂಬ ನಿರ್ಣಯ ಅಂಗೀಕರಿಸಿದ ಮಹಾರಾಷ್ಟ್ರ

ಗಡಿ ತಂಟೆ: ನಿಲ್ಲದ ಜಟಾಪಟಿ

ಪ್ರಜಾವಾಣಿ ವಾರ್ತೆ

ಮುಂಬೈ: ಗಡಿಗೆ ಸಂಬಂಧಿಸಿ ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಣ ಜಟಾಪಟಿ ಇನ್ನಷ್ಟು ಬಿರುಸು ಪಡೆದುಕೊಂಡಿದೆ. ಕರ್ನಾಟಕದ ಗಡಿಯಲ್ಲಿರುವ ಬೆಳಗಾವಿ, ಕಾರವಾರ, ನಿಪ್ಪಾಣಿ, ಬೀದರ್ ಮತ್ತು ಭಾಲ್ಕಿಯಲ್ಲಿರುವ ಮರಾಠಿ ಭಾಷಿಕರು ಹೆಚ್ಚಾಗಿರುವ 865 ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳುವ ಬದ್ಧತೆಯನ್ನು ತೋರುವ ನಿರ್ಣಯವನ್ನು ಅಲ್ಲಿನ ವಿಧಾನಮಂಡಲವು ಮಂಗಳವಾರ ಅಂಗೀಕರಿಸಿದೆ. ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟಕ್ಕೆ ಬಲ ತುಂಬುವ ಪ್ರಸ್ತಾವವೂ ನಿರ್ಣಯದಲ್ಲಿ ಸೇರಿದೆ.


ಕರ್ನಾಟಕ ಸರ್ಕಾರದ ಮರಾಠಿ ವಿರೋಧಿ ನೀತಿಯ ಬಗೆಗೂ ನಿರ್ಣಯದಲ್ಲಿ ಅತೃಪ್ತಿ ಸೂಚಿಸಲಾಗಿದೆ. ಕರ್ನಾಟಕ ಸರ್ಕಾರವು ವಿವಾದಾತ್ಮಕ ಪ್ರದೇಶಗಳಲ್ಲಿ ದರ್ಪ ತೋರುತ್ತಿದೆ ಎಂದೂ ಕಳವಳ ವ್ಯಕ್ತಪಡಿಸಲಾಗಿದೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ಎರಡು ಪುಟಗಳ ನಿರ್ಣಯವನ್ನು ಮಂಡಿಸಿದರು. ಎರಡೂ ಸದನಗಳಲ್ಲಿಯೂ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು. ನಾಗ್ಪುರದಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ ಆಘಾಡಿ ಕೂಡ ನಿರ್ಣಯವನ್ನು ಬೆಂಬಲಿಸಿತು.

ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಣ ಗಡಿ ವಿವಾದಕ್ಕೆ ಆರು ದಶಕಗಳ ಇತಿಹಾಸ ಇದೆ. ಕಳೆದ ಒಂದು ತಿಂಗಳಲ್ಲಿ ಜಟಾಪಟಿ ತೀವ್ರಗೊಂಡಿದೆ.

ಯಥಾಸ್ಥಿತಿಯ ನಿರ್ಧಾರಕ್ಕೆ ಬೆಲೆ ಇಲ್ಲ: ಶಿಂದೆ ಮತ್ತು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಈ ತಿಂಗಳ ಆರಂಭದಲ್ಲಿ ದೆಹಲಿಗೆ ಹೋಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಸಭೆಯಲ್ಲಿ ಭಾಗಿಯಾಗಿದ್ದರು. ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಅವರೂ ಈ ಸಭೆಯಲ್ಲಿ ಇದ್ದರು. ಗಡಿಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಈ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೆ, ಎರಡೂ ರಾಜ್ಯಗಳು ಗಡಿಯ ವಿಚಾರದಲ್ಲಿ ದಿನಕ್ಕೊಂದು ನಿರ್ಧಾರಕ್ಕೆ ಬರುತ್ತಿವೆ.

‘ಮಹಾರಾಷ್ಟ್ರ ನಿರ್ಣಯ ಖಂಡನಾರ್ಹ’



ಬಸವರಾಜ ಬೊಮ್ಮಾಯಿ

ಬೆಳಗಾವಿ: ‘ಬೆಳಗಾವಿ, ಬೀದರ್, ಭಾಲ್ಕಿ, ನಿಪ್ಪಾಣಿ, ಕಾರವಾರ ನಗರ ಸೇರಿದಂತೆ ಮರಾಠಿ ಭಾಷಿಕ 865 ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅಂಗೀಕರಿಸಿದ ನಿರ್ಣಯ ಖಂಡನಾರ್ಹ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಂಗಳವಾರ ಇಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ಭಾಷಾವಾರು ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆಗೆ ನಾವು ಗೌರವ ಕೊಟ್ಟೆವು. 1956ರಲ್ಲಿ ಅದು ಜಾರಿಯಾಗಿದ್ದು ಜನ ನೆಮ್ಮದಿಯಿಂದ ಇದ್ದಾರೆ. ಮಹಾರಾಷ್ಟ್ರದ ರಾಜಕಾರಣಿಗಳ ಒತ್ತಡದ ಮೇರೆಗೆ ‘ಮಹಾಜನ್ ಆಯೋಗ’ ರಚನೆಯಾಯಿತು. ಆ ವರದಿಯನ್ನೂ ನಾವು ಒಪ್ಪಿಕೊಂಡೆವು. ಮಹಾರಾಷ್ಟ್ರದ ರಾಜಕಾರಣಿಗಳೇ ವಿವಾದವನ್ನು ಸುಪ್ರೀಂಕೋರ್ಟ್‌ಗೆ ತೆಗೆದುಕೊಂಡು ಹೋದರು. ನ್ಯಾಯಾಲಯಕ್ಕೂ ಗೌರವ ಕೊಟ್ಟೆವು. ನ್ಯಾಯಾಲಯದ ತೀರ್ಪು ಬರುವ ಮುನ್ನವೇ ಸದನದಲ್ಲಿ ನಿರ್ಣಯ ಅಂಗೀಕಾರ ಮಾಡಿದ ಮಹಾರಾಷ್ಟ್ರದ ನಡೆ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತಂದಿದೆ’ ಎಂದು ಆಕ್ಷೇಪಿಸಿದರು.

‘ನಮ್ಮ ಭೂಮಿ ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದೇವೆಯೇ ಹೊರತು, ಅವರ ಭೂಮಿ ಕೇಳಿಲ್ಲ. ಆದರೆ, ಕರ್ನಾಟಕ ಗಡಿ ಭೂಮಿಯನ್ನೇ ಅವರು ಕೇಳುತ್ತಿದ್ದಾರೆ. ನಮ್ಮ ನಡೆಗೂ ಅವರ ನಡೆಗೂ ಇದೇ ವ್ಯತ್ಯಾಸ. ನ್ಯಾಯ ನಮ್ಮ ಪರವಾಗಿದೆ. ಮಹಾರಾಷ್ಟ್ರದವರು ರಾಜಕಾರಣಕ್ಕಾಗಿ ಹೀಗೆ ಮಾಡುತ್ತಿದ್ದಾರೆ. ಯಾರು ಏನೇ ಮಾಡಿದರೂ ಒಂದಿಂಚು ಜಾಗವನ್ನೂ ಬಿಟ್ಟುಕೊಡುವುದಿಲ್ಲ’ ಎಂದರು.

‘ನೆಲ, ಜಲ ರಕ್ಷಣೆಯಲ್ಲಿ ರಾಜಿ ಇಲ್ಲ’

ಬೆಳಗಾವಿ: ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆಯಲ್ಲಿ ನಿಗದಿಯಾದಂತೆ ರಾಜ್ಯದ ಗಡಿ, ನೆಲ ಹಾಗೂ ಜಲವನ್ನು ರಕ್ಷಿಸಿಕೊಳ್ಳುವ ಸರ್ವಾನುಮತದ ನಿರ್ಣಯವನ್ನು ವಿಧಾನ ಪರಿಷತ್‌ನಲ್ಲಿ ಮಂಗಳವಾರ ಅಂಗೀಕರಿಸಲಾಯಿತು.

ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುವಂತೆ ಒತ್ತಾಯಿಸಿ ಅಲ್ಲಿನ ಕೆಲವು ರಾಜಕಾರಣಿಗಳು ಹಾಗೂ ಕೆಲವು ಸಂಘಟನೆಗಳು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಿರುವುದು ಹಾಗೂ ಗಡಿ ಭಾಗದಲ್ಲಿ ಉಂಟಾಗಿದ್ದ ತ್ವೇಷಮಯ ವಾತಾವರಣದ ಕುರಿತು ನಿಯಮ 68ರ ಅಡಿಯಲ್ಲಿ ಸದನದಲ್ಲಿ ಸುದೀರ್ಘ ಚರ್ಚೆ ನಡೆಯಿತು.

ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮೂರೂ ಪಕ್ಷಗಳ ಸದಸ್ಯರು, ಮಹಾರಾಷ್ಟ್ರದ ಕೆಲವು ರಾಜಕೀಯ ಮುಖಂಡರು ಹಾಗೂ ಕೆಲವು ಸಂಘಟನೆಗಳ ನಾಯಕರ ಪ್ರಚೋದನಕಾರಿ ಹೇಳಿಕೆಗಳನ್ನು ಒಕ್ಕೊರಲಿನಿಂದ ಖಂಡಿಸಿದರು.

ಚರ್ಚೆಗೆ ಉತ್ತರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ರಾಜ್ಯಗಳ ಪುನರ್‌ವಿಂಗಡಣಾ ಕಾಯ್ದೆಯ ಪ್ರಕಾರ ನಿಗದಿಯಾಗಿರುವ ರಾಜ್ಯದ ಗಡಿಯೇ ನಮಗೆ ಅಂತಿಮ. ಸ್ಥಳೀಯ ಸಂಸ್ಥೆಗಳ ಚುನಾವಣೆ ಮೇಲೆ ಕಣ್ಣಿಟ್ಟು ಮಹಾರಾಷ್ಟ್ರದ ಕೆಲವರು ಈ ರೀತಿ ಕಿಡಿಗೇಡಿತನ ಮಾಡಿದ್ದಾರೆ. ಇಂತಹ ಅತಿರೇಕಗಳನ್ನು ಸಹಿಸಲು ಸಾಧ್ಯವಿಲ್ಲ’ ಎಂದರು.

‘ಮಹಾರಾಷ್ಟ್ರದ ನಾಯಕರು ಕರ್ನಾಟಕದ ಮುಖ್ಯಮಂತ್ರಿ ಸೇರಿದಂತೆ ಇಲ್ಲಿನ ನಾಯಕರ ವಿರುದ್ಧ ವೈಯಕ್ತಿಕವಾಗಿ ನಿಂದನೆಗೆ ಇಳಿದಿರುವುದು ಖಂಡನೀಯ. ಸುಪ್ರೀಂ ಕೋರ್ಟ್ ಕೂಡ ಅಂತರರಾಜ್ಯ ಗಡಿ ಕುರಿತು ವಿಚಾರಣೆ ನಡೆಸುವಂತಿಲ್ಲ. ಸಂಸತ್ತಿನ ನಿರ್ಣಯವೇ ಅಂತಿಮ’ ಎಂದು ಹೇಳಿದರು.

ಉದ್ಧವ್ ಸ್ವಾಗತ (ನಾಗ್ಪುರ ವರದಿ–ಪಿಟಿಐ): ಮಹಾರಾಷ್ಟ್ರ ವಿಧಾನಮಂಡಲದ ಎರಡೂ ಸದನಗಳು ಗಡಿ ವಿವಾದದ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿದ್ದನ್ನು ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಸ್ವಾಗತಿಸಿದ್ದಾರೆ.

ಸುಪ್ರೀಂ ಕೋರ್ಟ್ ಮುಂದಿರುವ ಗಡಿ ವಿವಾದವು ಇತ್ಯರ್ಥಗೊಳ್ಳುವವರೆಗೆ ಎಲ್ಲಾ ವಿವಾದಿತ ಪ್ರದೇಶಗಳನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸುವಂತೆ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಬೇಕು, ಮಹಾರಾಷ್ಟ್ರ ಸರ್ಕಾರ ಇದಕ್ಕಾಗಿ ಹೊಸದಾಗಿ ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಬೇಕು ಎಂದು ಅವರು ಮಂಗಳವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಇನ್ನೊಂದು ಸುದ್ದಿ 6



ವಕೀಲರ ಪ್ರತಿಭಟನೆ

ವಕೀಲರ ಸಂರಕ್ಷಣಾ ಕಾಯ್ದೆ ರೂಪಿಸಲು ಆಗ್ರಹಿಸಿ ಬೆಳಗಾವಿಯ ಸುವರ್ಣ ವಿಧಾನಸೌಧ ಸಮೀಪ, ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಪ್ರತಿಭಟಿಸಿದ ವಕೀಲರು, ಪೊಲೀಸರು ಹಿಡಿದಿದ್ದ ತಡೆಹಗ್ಗ ಭೇದಿಸಿ ಮುನ್ನುಗ್ಗಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಸುದ್ದಿ 5

ಗುಂಡುಹಾರಿಸದೆ ಅನ್ಯ ಮಾರ್ಗ ಇರಲಿಲ್ಲ: ಉಲ್ಲೇಖ

ಡಿ.ಜೆ.ಹಳ್ಳಿ ಗಲಭೆ ಪ್ರಕರಣ ಎಸ್‌ಡಿಪಿಐ ಸಂಚು: ವರದಿ

• ರಾಜೇಶ್ ರೈ ಚಟ್ಲ

ಬೆಳಗಾವಿ: ‘ಬೆಂಗಳೂರು ನಗರ ವ್ಯಾಪ್ತಿಯ ಕೆ.ಜಿ. ಹಳ್ಳಿ ಮತ್ತು ಡಿ.ಜೆ. ಹಳ್ಳಿಯಲ್ಲಿ 2020ರ ಆಗಸ್ಟ್ 11ರಂದು ನಡೆದ ಅಹಿತಕರ ಘಟನೆಗೆ ಎಸ್‌ಡಿಪಿಐ (ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ಸದಸ್ಯರ ಸಂಚು ಕಾರಣ’ ಎಂದು ಈ ಪ್ರಕರಣದ ಬಗ್ಗೆ ವಿಚಾರಣೆಗೆ ನೇಮಿಸಿದ್ದ ಮ್ಯಾಜಿಸ್ಟೀರಿಯಲ್ ವರದಿ ಹೇಳಿದೆ.

‘ಗನ್ ಕಿತ್ತುಕೊಂಡು ದಾಳಿ ನಡೆಸಲು ಗಲಭೆಕೋರರು ಪ್ರಯತ್ನಿಸಿದ್ದರಿಂದ ಆತ್ಮರಕ್ಷಣೆ, ಸಾರ್ವಜನಿಕರ ಆಸ್ತಿ ರಕ್ಷಣೆ, ಕಾನೂನು ಮತ್ತು ಸುವ್ಯವಸ್ಥೆ ಪಾಲನೆಗಾಗಿ ನೇರ ಗುಂಡಿನ ದಾಳಿ ನಡೆಸುವುದಲ್ಲದೆ ಪೊಲೀಸರಿಗೆ ಅನ್ಯಮಾರ್ಗ ಇರಲಿಲ್ಲ. ಈ ಕ್ರಮ ನ್ಯಾಯೋಚಿತವಾಗಿದೆ’ ಎಂದು ಪ್ರತಿಪಾದಿಸಿರುವ ವರದಿಯು, ‘ಎಸ್‌ಡಿಪಿಐ ಸದಸ್ಯರು ಭಯೋತ್ಪಾದನಾ ಸಂಘಟನೆಗಳ ಸದಸ್ಯರಂತೆ ವರ್ತಿಸಿ, ಸಾರ್ವಜನಿಕರ ಹಾಗೂ ಪೊಲೀಸ್ ಅಧಿಕಾರಿ, ಸಿಬ್ಬಂದಿಯಲ್ಲಿ ಭಯ ಹುಟ್ಟಿಸಲು ಸಂಚು ಹೂಡಿದ್ದರು’ ಎಂದೂ ವರದಿ ಉಲ್ಲೇಖಿಸಿದೆ.

ಈ ಘಟನೆಯಲ್ಲಿ, ಡಿ.ಜೆ. ಹಳ್ಳಿ ನಿವಾಸಿಗಳಾದ ಯಾಸಿನ್ ಪಾಷಾ (21), ವಾಜೀದ್ ಖಾನ್ (21), ಕೆ.ಜಿ. ಹಳ್ಳಿ ನಿವಾಸಿ ಶೇಕ್ ಸಿದ್ದಿಕ್ (25) ಮೃತಪಟ್ಟಿದ್ದರು. ಮೃತರ ಸಾವಿಗೆ ಕಾರಣಗಳು, ಘಟನಾವಳಿಗಳ ಸರಣಿ ಮತ್ತು ಸನ್ನಿವೇಶಗಳ ಬಗ್ಗೆ ಮ್ಯಾಜಿಸ್ಟೀರಿಯಲ್ ವಿಚಾರಣೆ ನಡೆಸಲು ಬೆಂಗಳೂರು ಜಿಲ್ಲಾಧಿಕಾರಿಯನ್ನು ನೇಮಿಸಿ ರಾಜ್ಯ ಸರ್ಕಾರ 2020ರ ಆಗಸ್ಟ್ 13ರಂದು ಆದೇಶಿಸಿತ್ತು.

ಇದೇ 22ರಂದು ನಡೆದ ಸಚಿವ ಸಂಪುಟಯಲ್ಲಿ ಮ್ಯಾಜಿಸ್ಟೀರಿಯಲ್ ವಿಚಾರಣಾ ವರದಿಗೆ ಅನುಮೋದನೆ ನೀಡಲಾಗಿದೆ. ವರದಿಯ ಟಿಪ್ಪಣಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ನವೀನ್ ಎಂಬಾತನ ಫೇಸ್‌ಬುಕ್ ಸಂದೇಶದಿಂದ ಕೆ.ಜಿ. ಹಳ್ಳಿ ಮತ್ತು ಡಿ.ಜೆ. ಹಳ್ಳಿಯಲ್ಲಿ ಆರಂಭವಾದ ಗಲಭೆಯು ಎಲ್ಲ ರೀತಿಯ ಮುನ್ನೆಚ್ಚರಿಕಾ ಕ್ರಮಗಳ ಹೊರತಾಗಿಯೂ ನಗರದ ಇತರ ಮತೀಯ ಸೂಕ್ಷ್ಮ ಪ್ರದೇಶಗಳಿಗೆ ಹರಡುವ ಸಾಧ್ಯತೆಗಳು ಹೆಚ್ಚಾಗಿತ್ತು. ಇನ್ನೂ ಹೆಚ್ಚಿನ ಪ್ರಾಣಹಾನಿ, ಆಸ್ತಿಪಾಸ್ತಿಗಳ ಹಾನಿಗಳನ್ನು ತಡೆಯುವುದು ಅನಿವಾರ್ಯವಾಗಿತ್ತು. ಸಾರ್ವಜನಿಕರ ಹಾಗೂ ಪೊಲೀಸರ ಪ್ರಾಣ ರಕ್ಷಣೆ, ಕಾನೂನು – ಸುವ್ಯವಸ್ಥೆ ಕಾಪಾಡಲು ಪೊಲೀಸರು ಗುಂಡು ಹಾರಿಸಿದ್ದರಿಂದ ಮೂವರು ಮೃತಪಟ್ಟಿದ್ದರು.

ತ್ರಿವಳಿ ತಲಾಖ್, ಗೋ ಹತ್ಯೆ ನಿಷೇಧ ಮತ್ತು ರಾಮ ಜನ್ಮಭೂಮಿಗೆ ಸಂಬಂಧಿಸಿದ ನ್ಯಾಯಾಲಯದ ಆದೇಶಗಳು ಹಾಗೂ ಸರ್ಕಾರದ ನಿಲುವುಗಳ ವಿರುದ್ಧ ಪ್ರತಿಭಟನೆ ನಡೆಸಲು ದುಷ್ಕರ್ಮಿಗಳು ಪೂರ್ವನಿಯೋಜಿತ ಪಿತೂರಿ ನಡೆಸಿದ್ದರು.

12ನೇ ಪುಟ ನೋಡಿ

ಶಾಸಕರ ಮನೆಗೆ ದಾಳಿ ಪ್ರಸ್ತಾಪವೇ ಇಲ್ಲ!

ನವೀನ್ ಎಂಬಾತ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಸಂಬಂಧಿ ಎಂಬ ಕಾರಣಕ್ಕೆ ಶಾಸಕರ ಮನೆ ಮೇಲೆ ಗಲಭೆಕೋರರು ದಾಳಿ ನಡೆಸಿ, ಧ್ವಂಸ ಮಾಡಿದ್ದರು. ಈ ಘಟನೆಗೆ ಸ್ಥಳೀಯ ಕಾಂಗ್ರೆಸ್ ಮುಖಂಡ, ಮಾಜಿ ಮೇಯರ್ ಸಂಪತ್‌ರಾಜ್ ಅವರ ಕುಮ್ಮಕ್ಕೂ ಕಾರಣ ಎಂದೂ ಆರೋಪಿಸಲಾಗಿತ್ತಲ್ಲದೇ, ಸಂಪತ್ ರಾಜ್ ಅವರನ್ನು ಬಂಧಿಸಲಾಗಿತ್ತು. ದಲಿತ ಸಮುದಾಯಕ್ಕೆ ಸೇರಿದ ಅಖಂಡ ಶ್ರೀನಿವಾಸಮೂರ್ತಿ ಮನೆ ಮೇಲೆ ದಾಳಿ ನಡೆದರೂ ಕಾಂಗ್ರೆಸ್ ವಿರೋಧಿಸಲಿಲ್ಲ ಎಂಬ ವಿಷಯ ಮುಂದಿಟ್ಟು ಬಿಜೆಪಿ ನಾಯಕರು ದೊಡ್ಡ ಹೋರಾಟವನ್ನೇ ನಡೆಸಿದ್ದರು.

ಆದರೆ, ಸಚಿವ ಸಂಪುಟದ ಮುಂದೆ ಮಂಡಿಸಿದ ಮ್ಯಾಜಿಸ್ಟೀರಿಯಲ್ ವಿಚಾರಣಾ ವರದಿಯ ಅಂತಿಮ ನಿರ್ಣಯದ ಸಾರಾಂಶದಲ್ಲಿ ಈ ಯಾವುದೇ ವಿಷಯದ ಉಲ್ಲೇಖವೇ ಇಲ್ಲ!

ಕಾರು ಅಪಘಾತ: ಪ್ರಧಾನಿ ಮೋದಿ ತಮ್ಮನಿಗೆ ಗಾಯ

ಮೈಸೂರು: ಪ್ರಧಾನಿ ನರೇಂದ್ರ ಮೋದಿ ಅವರ ತಮ್ಮ ಪ್ರಹ್ಲಾದ ಮೋದಿ ಕುಟುಂಬ ಪ್ರಯಾಣಿಸುತ್ತಿದ್ದ ಬೆಂಜ್ ಕಾರು, ತಾಲ್ಲೂಕಿನ ಕಡಕೊಳ ಬಳಿ ಮಂಗಳವಾರ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾಗಿದ್ದು, ಐವರು ಗಾಯಗೊಂಡಿದ್ದಾರೆ.

ಪ್ರಹ್ಲಾದ್ ಮೋದಿ, ಅವರ ಪುತ್ರ ಮೆಹುಲ್ ಮೋದಿ, ಸೊಸೆ ಜಿನಾಲ್ ಮೋದಿ, ಮೊಮ್ಮಗ ಮಹಾರ್ಥ್ ಮೆಹುಲ್ ಮೋದಿ, ಚಾಲಕ ಕೆ.ಎನ್.ಸತ್ಯನಾರಾಯಣ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಪ್ರಹ್ಲಾದ್ ಅವರಿಗೆ ಮುಖದಲ್ಲಿ ತರಚಿದ ಗಾಯವಾಗಿದೆ. ಮೊಮ್ಮಗ ಮಹಾರ್ಥ್ ಮೋದಿ ಅವರ ಎಡಗಾಲಿನ ಮೂಳೆ ಮುರಿದಿದೆ. ಸೊಸೆ ಜಿನಾಲ್ ಮೋದಿ ಅವರ ತಲೆಗೆ ಸ್ವಲ್ಪ ಪೆಟ್ಟಾಗಿದೆ. ಉಳಿದವರಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ’ ಎಂದು ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಮಧು ಹೇಳಿದರು. ಬೆಂಗಳೂರಿನಿಂದ ಬಂಡೀಪುರ ರಾಷ್ಟ್ರೀಯ ಉದ್ಯಾನಕ್ಕೆ ಕುಟುಂಬ ಪ್ರಯಾಣ ಬೆಳೆಸಿತ್ತು. ಚಾಲಕ ನಿದ್ರೆ ಮಂಪರಿನಲ್ಲಿ ಇದ್ದ ಕಾರಣ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ.

108 ಸೇವೆ: ಆರೋಗ್ಯ ಇಲಾಖೆ ವಿಫಲ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆರೋಗ್ಯ ಕವಚ–108ರ ಸೇವೆಯನ್ನು ಸಮರ್ಪಕವಾಗಿ ಒದಗಿಸಲು ಆರೋಗ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಆಕ್ರೋಶದಿಂದ ಹೇಳಿದೆ.



ಕೃಷ್ಣಬೈರೇಗೌಡ ಅಧ್ಯಕ್ಷತೆಯ ಪಿಎಸಿಯು ಭಾರತೀಯ ಮಹಾಲೇಖಪಾಲರ ವರದಿಯಲ್ಲಿನ ಆರೋಗ್ಯ ಇಲಾಖೆಯ ಆರೋಗ್ಯ ಕವಚ–108ರ ಯೋಜನೆಯ ಕುರಿತು ಪರಿಶೀಲನೆ ನಡೆಸಿತ್ತು. ಈ ವರದಿಯನ್ನು ಮಂಗಳವಾರ ಸದನದಲ್ಲಿ ಮಂಡಿಸಲಾಯಿತು.

2017ರಲ್ಲೇ ಮರು ಟೆಂಡರ್‌ಗೆ ಆದೇಶವಾಗಿದೆ. ಹಾಗಿದ್ದರೂ, ಟೆಂಡರ್ ಪ್ರಕ್ರಿಯೆಗಳ ಅಂಶಗಳ ಪರಿಶೀಲನೆಗೆ ಹಲವಾರು ಸಮಿತಿ ರಚನೆ ಮಾಡಿದ್ದಲ್ಲದೇ, ಕ್ಷುಲ್ಲಕ ಕಾರಣ ನೀಡಿ ಟೆಂಡರ್ ರದ್ದುಗೊಳಿಸಿರುವುದು ಹಾಗೂ ಹೊಸ ಟೆಂಡರ್ ಕರೆಯದೇ ಇರುವುದಕ್ಕೆ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ.

ಇಲಾಖೆಯು ಪಿಎಸಿಗೆ ಸಲ್ಲಿಸಿದ ಉತ್ತರದಲ್ಲಿ, ಪರಿಣಿತರ ಸಮಿತಿ ಶಿಫಾರಸಿನಂತೆ ಟೆಂಡರ್ ರದ್ದುಗೊಳಿಸಿರುವುದಾಗಿ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿದೆ ಎಂದು ಹೇಳಿದೆ. ಆದರೆ, ಯಾವುದೇ ಶಿಫಾರಸನ್ನು ಪರಿಣಿತರ ಸಮಿತಿ ನೀಡದಿರುವುದನ್ನು ನ್ಯಾಯಾಲಯವು ಗಮನಿಸಿ, ಇಲಾಖೆಯಿಂದ ಸ್ಪಷ್ಟೀಕರಣ ಕೋರಿದ್ದನ್ನು ಸಮಿತಿ ಗಮನಿಸಿದೆ. ಪಿಎಸಿಯನ್ನೇ ತಪ್ಪುದಾರಿಗೆ ಎಳೆದಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದೆ.

ಪಿಎಸಿ ಮಾಡಿರುವ ಆಕ್ಷೇಪಗಳೇನು?

- 108 ಸೇವೆ ಒದಗಿಸುತ್ತಿರುವ ಜಿವಿಕೆ–ಇಎಂಆರ್‌ಐ ಸಂಸ್ಥೆಯು ಕಳಪೆ ಗುಣಮಟ್ಟದ ಸೇವೆಗಳನ್ನು ಒದಗಿಸುತ್ತಿದ್ದು, ಆಂಬುಲೆನ್ಸ್‌ಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡಿಲ್ಲ ಎಂದು ಇಲಾಖೆಯೇ ಹೇಳಿದೆ. ಹೀಗಿದ್ದರೂ ಇಲ್ಲಿಯವರೆಗೂ ಸಂಸ್ಥೆಯ ಸೇವೆಯನ್ನು ಮುಂದುವರಿಸಿರುವುದು ತೀವ್ರ ಕಳವಳಕಾರಿ
- ಸೇವೆ ಒದಗಿಸುತ್ತಿರುವ ಸಂಸ್ಥೆ ಉತ್ತಮ ಮೈಲೇಜ್ ಖಾತರಿಪಡಿಸಿಕೊಳ್ಳಲು ಆಂಬುಲೆನ್ಸ್‌ನಲ್ಲಿ ಹವಾನಿಯಂತ್ರಣ ವ್ಯವಸ್ಥೆ ಕಿತ್ತುಹಾಕಿ ಅನುದಾನ ಉಳಿತಾಯ ಮಾಡಿಕೊಂಡಿದೆ ಎಂಬುದು ಇಲಾಖೆಯ ಗಮನಕ್ಕೆ ಬಂದಿದೆ. ಇದನ್ನು ಸಿಎಜಿ ವರದಿಯಲ್ಲಿ ಇಲಾಖೆಯ ಗಮನಕ್ಕೆ ತಂದಿದ್ದರೂ ಸೇವಾದಾರರಿಗೆ ನೋಟಿಸ್ ನೀಡಲಾಗಿದೆ ಎಂದು ಹಾರಿಕೆ ಉತ್ತರ ನೀಡಿರುವ ಇಲಾಖೆ ಧೋರಣೆ ಸರಿಯಲ್ಲ
- ಎರಡು ಪ್ರಕರಣಗಳಲ್ಲಿ 18–23 ಕರೆಗಳನ್ನು ಮಾಡಿದ್ದರೂ ಆಂಬುಲೆನ್ಸ್ ಬರಲೇ ಇಲ್ಲ. ಹೀಗಾಗಿ, ಒಂದು ಪ್ರಕರಣದಲ್ಲಿ ಗರ್ಭಿಣಿ, ಮತ್ತೊಂದು ಪ್ರಕರಣದಲ್ಲಿ ಮಗುವಿನ ಪ್ರಾಣ ಹೋಯಿತು. ರೋಗಿಗಳಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಗಮನಕ್ಕೆ ಬಂದಿದ್ದರೂ ಇಲಾಖೆಯು ಯಾವುದೇ ಕ್ರಮವನ್ನೂ ಕೈಗೊಳ್ಳದೇ ಇರುವುದು ಆಕ್ಷೇಪಾರ್ಹ
- ಬಳಕೆಯಲ್ಲಿರುವ ಆಂಬ್ಯುಲೆನ್ಸ್‌ಗಳು 12ರಿಂದ 15 ವರ್ಷ ಹಳೆಯದಾಗಿವೆ. ಇದನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ ಟೆಂಡರ್‌ನಲ್ಲಿ ಆಂಬುಲೆನ್ಸ್‌ಗಳು ಹಾಗೂ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಲು ಸೂಕ್ತ ಕ್ರಮವಹಿಸಬೇಕು

ಸೆಪ್ಟೆಂಬರ್ ತ್ರೈಮಾಸಿಕ ಸರ್ಕಾರದ ಸಾಲ ಏರಿಕೆ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಸಾಲಗಳ ಒಟ್ಟು ಮೊತ್ತವು ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ₹ 147.19 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇದು ಜೂನ್ ತ್ರೈಮಾಸಿಕದ ಕೊನೆಯಲ್ಲಿ ₹ 145.72 ಲಕ್ಷ ಕೋಟಿಯಷ್ಟು ಇತ್ತು.

ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಸೆಪ್ಟೆಂಬರ್ ತ್ರೈಮಾಸಿಕದ ಕೊನೆಯಲ್ಲಿ ಆಗಿರುವ ಸಾಲದ ಹೆಚ್ಚಳವು ಶೇಕಡ 1ರಷ್ಟು ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿ ಹೇಳಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕೇಂದ್ರ ಸರ್ಕಾರವು ಸಾಲಪತ್ರಗಳ ಮೂಲಕ ಒಟ್ಟು ₹ 4.06 ಲಕ್ಷ ಕೋಟಿ ಸಂಗ್ರಹಿಸಿದೆ. ಇದೇ ಅವಧಿಯಲ್ಲಿ ಸಾಲ ಮರುಪಾವತಿಗೆ ₹ 92 ಸಾವಿರ ಕೋಟಿ ವಿನಿಯೋಗಿಸಿದೆ.

2021ರ ಸೆಪ್ಟೆಂಬರ್ 24ರಂದು ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು 638.64 ಬಿಲಿಯನ್ ಡಾಲರ್ (₹ 52.95 ಲಕ್ಷ ಕೋಟಿ) ಇತ್ತು. ಆದರೆ ಅದು ಈ ವರ್ಷದ ಸೆಪ್ಟೆಂಬರ್ 30ಕ್ಕೆ 532.66 ಬಿಲಿಯನ್ ಡಾಲರ್‌ಗೆ (₹ 44.16 ಲಕ್ಷ ಕೋಟಿ) ಇಳಿಕೆಯಾಗಿದೆ.

ಈ ವರ್ಷದ ಜುಲೈ 1ರಿಂದ ಸೆಪ್ಟೆಂಬರ್ 30ರ ನಡುವಿನ ಅವಧಿಯಲ್ಲಿ ರೂಪಾಯಿ ಮೌಲ್ಯವು ಶೇ 3.11ರಷ್ಟು ಇಳಿಕೆಯಾಗಿದೆ. ಜುಲೈ 1ರಂದು ರೂಪಾಯಿ ಮೌಲ್ಯ ₹ 79.09 ಆಗಿತ್ತು. ಅದು ಸೆಪ್ಟೆಂಬರ್ 30ಕ್ಕೆ ₹ 81.55ಕ್ಕೆ ಕುಸಿದಿದೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿಯಲ್ಲಿ ಎಂಟು ಎಕರೆಯಲ್ಲಿ ಬೆಳೆ

ಮಲ್ಲಿಗೆ ನಾಡಿನಲ್ಲಿ ಕಾಫಿ ಘಮಲು

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಮಲೆನಾಡು ಜಿಲ್ಲೆಗಳಲ್ಲಿ ಬೆಳೆಯುವ ಕಾಫಿ ಘಮಲು ಈಗ ‘ಬಿಸಿಲೂರಿನ ಮಲ್ಲಿಗೆ ನಾಡು’ ವಿಜಯನಗರ ಜಿಲ್ಲೆಯ ಹೂವಿನಹಡಗಲಿಗೂ ಹಬ್ಬಿದೆ.

ಹಡಗಲಿ ತಾಲ್ಲೂಕಿನ ಕೊಂಬಳಿ ಗ್ರಾಮದ ಗಡ್ಡಿ ಗುಡ್ಡಪ್ಪ ಅವರು, ತೋಟದಲ್ಲಿ ಕಾಫಿ ಬೆಳೆಯುತ್ತಿದ್ದಾರೆ.

ಎಂಟು ಎಕರೆ ಪ್ರದೇಶದಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಅಡಿಕೆಯೊಂದಿಗೆ ಅಂತರ ಬೆಳೆಯಾಗಿ ನಾಲ್ಕು ವರ್ಷಗಳಿಂದ ಕಾಫಿ ಬೆಳೆಸಿದ್ದಾರೆ.

ಎಂಟರಿಂದ ಹತ್ತು ಕಾರ್ಮಿಕರೊಂದಿಗೆ ಗುಡ್ಡಪ್ಪ ಹಾಗೂ ಅವರ ನಾಲ್ವರು ಸಹೋದರರು ನಿತ್ಯ ತೋಟದಲ್ಲಿ ಕೆಲಸ ಮಾಡುತ್ತಾರೆ. ಎಕರೆಗೆ 3ರಿಂದ 4 ಕ್ವಿಂಟಲ್‌ನಷ್ಟು ಕಾಫಿ ಫಸಲು ಬರುತ್ತಿದೆ.

ಪ್ರಜಾವಾಣಿ ವಿಶೇಷ

ತೋಟದ ಮನೆಯಲ್ಲಿಯೇ ಕಾಫಿ ಬೀಜಗಳನ್ನು ಒಣಗಿಸಿ, ಚೀಲಗಳಲ್ಲಿ ತುಂಬಲಾಗುತ್ತದೆ. ಬೆಳೆಯನ್ನು ನೇರ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯ ಮಾರುಕಟ್ಟೆಗೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದಾರೆ. ಇವರು ಕಾವೇರಿ ತಳಿಯ ಗಿಡಗಳನ್ನು ಬೆಳೆಯುತ್ತಿದ್ದಾರೆ. ಚೆರಿ ಕಾಫಿಯ ತಲಾ 50 ಕೆ.ಜಿ ಚೀಲಕ್ಕೆ ಮಾರುಕಟ್ಟೆಯಲ್ಲಿ ಪ್ರಸ್ತುತ ₹ 7 ಸಾವಿರ ಬೆಲೆಯಿದೆ.

‘ಕಾಫಿ ಬೆಳೆಸುವ ಯೋಚನೆ ಹೇಗೆ ಬಂತು’ ಎಂದು ಗುಡ್ಡಪ್ಪ ಅವರನ್ನು ಪ್ರಶ್ನಿಸಿದರೆ, ‘ಉತ್ತರ ಕರ್ನಾಟಕದಲ್ಲಿ ಕಾಫಿ ಬೆಳೆಯಬಹುದೇ ಎಂದು ಪ್ರಯೋಗ ಮಾಡುವ ಮನಸ್ಸಾಯಿತು. ಲಾಭ ಬರದಿದ್ದರೂ ಪರವಾಗಿಲ್ಲ. ಒಮ್ಮೆ ಬೆಳೆದು ನೋಡಲು ಮುಂದಾದೆ. ಪ್ರತಿ ಎಕರೆಗೆ 450 ಸಸಿ ಹಚ್ಚಿದೆ. ಜೊತೆಗೆ ಅಂತರ ಬೆಳೆಯಾಗಿ ಅಡಿಕೆ ಸಸಿಗಳನ್ನು ಬೆಳೆಸಿದೆ. ಎರಡು ವರ್ಷ ಬೆಳೆ ತೆಗೆಯದೆ ಹಾಗೆ ಬಿಟ್ಟೆ. ಉತ್ತಮ ಫಸಲು ಬರಲಾರಂಭಿಸಿತು. ಉತ್ತಮ ಬೆಲೆಯೂ ಸಿಕ್ಕಿತು. ಎರಡು ವರ್ಷಗಳಿಂದ ನೇರ ಮಾರುಕಟ್ಟೆಯಲ್ಲೇ ಮಾರುತ್ತಿರುವೆ’ ಎಂದರು.



ಕೃಷಿ ಕಾರ್ಮಿಕರೊಂದಿಗೆ ಕಾಫಿ ಕೊಯ್ಲು ಮಾಡುತ್ತಿರುವ ರೈತ ಗಡ್ಡಿ ಗುಡ್ಡಪ್ಪ – ಪ್ರಜಾವಾಣಿ ಚಿತ್ರ

> **ಬೇರೆ ಬೆಳೆಗಳಿಗೆ ಹೋಲಿಸಿದರೆ ಕಾಫಿ ಲಾಭ ತಂದುಕೊಡುತ್ತಿದೆ. ಈ ಬೆಳೆಯ ನಿರ್ವಹಣೆಯೂ ಬಹಳ ಸುಲಭ.**
> **ಗಡ್ಡಿ ಗುಡ್ಡಪ್ಪ,** ಕಾಫಿ ಬೆಳೆಗಾರ, ಕೊಂಬಳಿ

> **ಮಲೆನಾಡಿಗೆ ಹೋಲಿಸಿದರೆ ಬಯಲುಸೀಮೆಯಲ್ಲಿ ಕಾಫಿ ಇಳುವರಿ ಹೆಚ್ಚಿಲ್ಲ. ಅಂತರ ಬೆಳೆಯಾಗಿ ಬೆಳೆದರೆ ಉತ್ತಮ ಫಸಲು ಬರುತ್ತದೆ.**
> **ಶರಣಪ್ಪ ಭೋಗಿ,** ಉಪನಿರ್ದೇಶಕ, ತೋಟಗಾರಿಕೆ ಇಲಾಖೆ, ವಿಜಯನಗರ–ಬಳ್ಳಾರಿ ಜಿಲ್ಲೆ

‘ಬಯಲು ಸೀಮೆಯಲ್ಲಿ ಈಗ ಯಥೇಚ್ಛವಾಗಿ ಸೇಬು ಬೆಳೆಸಲಾಗುತ್ತಿದೆ. ಜಿಲ್ಲೆಯಲ್ಲಿ ಈಗ ರೈತರೊಬ್ಬರು ಕಾಫಿ ಕೂಡ ಬೆಳೆದಿದ್ದಾರೆ. ಈ ಪ್ರದೇಶ ಈ ಎರಡೂ ಬೆಳೆಗಳಿಗೆ ಸೂಕ್ತವಾಗಿಲ್ಲ. ಆದರೆ, ಅಂತರ ಬೆಳೆಯಾಗಿ ಬೆಳೆಸಿದರೆ ಉತ್ತಮ ಫಸಲು ಬರುತ್ತದೆ’ ಎಂದು ವಿಜಯನಗರ–ಬಳ್ಳಾರಿ ಜಿಲ್ಲಾ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶರಣಪ್ಪ ಭೋಗಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಗಿಗ್ ಕೆಲಸಗಾರರಿಗೆ ಪಿಂಚಣಿ: ಶಿಫಾರಸು

ರಾಯಿಟರ್ಸ್: ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ದೇಶದ ಗಿಗ್ ಕೆಲಸಗಾರರಿಗೆ ಬ್ರಿಟನ್ ಮಾದರಿಯಲ್ಲಿ ಪಿಂಚಣಿ ಯೋಜನೆ ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಕಂಪನಿಗಳಿಗೆ ಗುತ್ತಿಗೆ ಆಧಾರದಲ್ಲಿ, ಬೇಡಿಕೆ ಆಧರಿಸಿ, ಫ್ರೀಲಾನ್ಸ್ ಮಾದರಿಯಲ್ಲಿ ಕೆಲಸ ಮಾಡುವವರನ್ನು ‘ಗಿಗ್ ಕಾರ್ಮಿಕರು’ ಎಂದು ಗುರುತಿಸಲಾಗುತ್ತಿದೆ.

ಆಹಾರ ವಸ್ತುಗಳನ್ನು ಮನೆ ಮನೆಗೆ ತಲುಪಿಸುವ ಹಾಗೂ ಕ್ಯಾಬ್ ಸೇವೆ ಒದಗಿಸುವ ಕಂಪನಿಗಳ ಜೊತೆ ಕೆಲಸ ಮಾಡುವ ಗಿಗ್ ಕೆಲಸಗಾರರು ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ವ್ಯಾಪ್ತಿಗೆ ಬರುವಂತೆ ಮಾಡಬೇಕು ಎಂದು ಪಿಎಫ್‌ಆರ್‌ಡಿಎ ಕೇಂದ್ರಕ್ಕೆ ಶಿಫಾರಸು ಮಾಡಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಸುಪ್ರತಿಮ್ ಬಂದ್ಯೋಪಾಧ್ಯಾಯ ಅವರು ತಿಳಿಸಿದ್ದಾರೆ.


ಗಿಗ್ ಕೆಲಸಗಾರರಿಗೆ ನೀಡುವ ಪಾವತಿಯಲ್ಲಿ ಒಂದು ಪಾಲನ್ನು ಕಂಪನಿಗಳು ಮುರಿದುಕೊಂಡು ಆ ಮೊತ್ತವನ್ನು ಎನ್‌ಪಿಎಸ್ ಯೋಜನೆಗೆ ಕೊಡುವಂತೆ ಆಗಬೇಕು ಎಂಬುದು ಪ್ರಾಧಿಕಾರದ ಶಿಫಾರಸು.

ಅಸಂಘಟಿತ ವಲಯವು ದೇಶದ ಸುಮಾರು ಶೇಕಡ 90ರಷ್ಟು ಕಾರ್ಮಿಕರಿಗೆ ಉದ್ಯೋಗ ಕಲ್ಪಿಸಿದೆ. ಈ ವಲಯದಲ್ಲಿ ಕೆಲಸ ಮಾಡುವ ಹೆಚ್ಚಿನವರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಸಿಗುತ್ತಿಲ್ಲ.

12ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಕ್ರಿಯ ಪ್ರಕರಣಗಳಿದ್ದರೂ ಆಸ್ಪತ್ರೆಗೆ ದಾಖಲಾತಿ ಇಲ್ಲ

ಆಸ್ಪತ್ರೆಗಳು ಕೋವಿಡ್‌ಮುಕ್ತ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುತ್ತಿರುವ ಬೆನ್ನಲ್ಲಿಯೇ ನಗರದ ಆಸ್ಪತ್ರೆಗಳು ಕೋವಿಡ್‌ಮುಕ್ತವಾಗಿವೆ. ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದರೂ ಸೋಂಕಿತರೆಲ್ಲರೂ ಮನೆ ಆರೈಕೆಗೆ ಒಳಗಾಗಿದ್ದಾರೆ.

ಚೀನಾ ಸೇರಿ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ ಹಾಗೂ ರೂಪಾಂತರಿ ವೈರಾಣುವಿನ ಆತಂಕದಿಂದ ಕೆಲವೆಡೆ ಕಡ್ಡಾಯವಾಗಿ ಮುಖಗವಸು ಧರಿಸುವಿಕೆ ಸೇರಿ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಸೋಂಕಿತರ ಚಿಕಿತ್ಸೆಗೆ ಸಂಬಂಧಿಸಿದಂತೆ ಆಸ್ಪತ್ರೆಗಳಲ್ಲಿಯೂ ಸಿದ್ಧತಾ ತಾಲೀಮು ನಡೆದಿದೆ. ಸದ್ಯ ಸೋಂಕಿನ ತೀವ್ರತೆ ಅಷ್ಟಾಗಿ ಇರದಿದ್ದರಿಂದ ಕೋವಿಡ್ ಪೀಡಿತರು ಮನೆ ಆರೈಕೆಯ ಮೂಲಕವೇ ಚೇತರಿಸಿಕೊಳ್ಳುತ್ತಿದ್ದಾರೆ. ವಾರದಿಂದ ಯಾವುದೇ ವ್ಯಕ್ತಿ ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿಲ್ಲ. ಚಿಕಿತ್ಸೆ ಪಡೆಯುತ್ತಿದ್ದವರೂ ಗುಣಮುಖರಾಗಿ, ತೆರಳಿದ್ದಾರೆ. ಇದರಿಂದಾಗಿ ಆಸ್ಪತ್ರೆಗಳಲ್ಲಿ ಕೋವಿಡ್ ಪ್ರಕರಣಗಳಿಲ್ಲ.

ಕೋವಿಡ್ ಎರಡನೇ ಅಲೆಯ ಬಳಿಕ ಸರ್ಕಾರವು ವೈದ್ಯಕೀಯ ಆಮ್ಲಜನಕ ತಯಾರಿಕಾ ಘಟಕಗಳ ನಿರ್ಮಾಣಕ್ಕೆ ಆದ್ಯತೆ ನೀಡಿತ್ತು. ಕೋವಿಡ್ ಪ್ರಕರಣಗಳ ಸಂಖ್ಯೆ 2022ರ ಜನವರಿ ಮೊದಲ ವಾರದ ಬಳಿಕ ಏರಿಕೆ ಕಂಡು, ಮೂರನೇ ಅಲೆ ಕಾಣಿಸಿಕೊಂಡಿದ್ದರಿಂದ ಸರ್ಕಾರವು ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆ ರೂಪಿಸಿತ್ತು.

ತೀವ್ರತೆ ಕಡಿಮೆ: ಮೂರನೇ ಅಲೆಯಲ್ಲಿ ದಿನವೊಂದಕ್ಕೆ 30 ಸಾವಿರಕ್ಕೂ ಅಧಿಕ ಪ್ರಕರಣ ಪತ್ತೆಯಾದರೂ, ಸೋಂಕಿನ ತೀವ್ರತೆ ಕಡಿಮೆ ಇದ್ದಿದ್ದರಿಂದ ಆಸ್ಪತ್ರೆ ದಾಖಲಾತಿ ಕಡಿಮೆಯಿತ್ತು. ಎರಡು ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದಾಗ ಆಸ್ಪತ್ರೆಗಳ ದಾಖಲಾತಿ 500ರ ಗಡಿಯ ಆಸುಪಾಸಿನಲ್ಲಿತ್ತು. ಸೋಂಕಿನ ತೀವ್ರತೆ ಕಡಿಮೆ ಇದ್ದಿದ್ದರಿಂದ ಆಸ್ಪತ್ರೆಗೆ ದಾಖಲಾದ ಬಹುತೇಕರಿಗೆ ಸಾಮಾನ್ಯ ಹಾಸಿಗೆಯಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿತ್ತು.

ನಗರದಲ್ಲಿ ಕಳೆದೊಂದು ವಾರದಲ್ಲಿ 9 ಸಾವಿರಕ್ಕೂ ಅಧಿಕ ಕೋವಿಡ್ ಪರೀಕ್ಷೆ ನಡೆಸಲಾಗಿದೆ. 112 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಆದರೆ, ಯಾರೂ ಆಸ್ಪತ್ರೆಗೆ ದಾಖಲಾಗಿಲ್ಲ. ನಗರದಲ್ಲಿ ಸದ್ಯ ಸೋಂಕು ದೃಢ ಪ್ರಮಾಣ ಶೇ 1.19ರಷ್ಟಿದೆ. ಕೋವಿಡ್ ಚೇತರಿಕೆ ಪ್ರಮಾಣ ಶೇ 99.03 ರಷ್ಟಿದೆ.

ಮಹಾನಗರಗಳಲ್ಲಿ ಬೆಂಗಳೂರು ಅಗ್ರ

ದೇಶದ ಪ್ರಮುಖ ಮಹಾನಗರಗಳಿಗೆ ಹೋಲಿಸಿದರೆ ಅಧಿಕ ಕೋವಿಡ್ ಸಕ್ರಿಯ ಪ್ರಕರಣಗಳನ್ನು ಹೊಂದಿರುವ ಮಹಾನಗರಗಳಲ್ಲಿ ಬೆಂಗಳೂರು ಅಗ್ರ ಸ್ಥಾನದಲ್ಲಿದೆ. ನಗರದಲ್ಲಿ 1,194 (ಡಿ.26) ಸಕ್ರಿಯ ಪ್ರಕರಣಗಳಿವೆ. ಮುಂಬೈನಲ್ಲಿ 44, ನವದೆಹಲಿಯಲ್ಲಿ 37 ಹಾಗೂ ಚೆನ್ನೈನಲ್ಲಿ 11 ಪ್ರಕರಣಗಳು ಇವೆ.



ಕೊರೊನಾ ಸೋಂಕಿನ ತೀವ್ರತೆ ಕಡಿಮೆ ಇರುವುದರಿಂದ ಕೋವಿಡ್ ಪೀಡಿತರು ಆಸ್ಪತ್ರೆಗಳಿಗೆ ದಾಖಲಾಗುತ್ತಿಲ್ಲ. ಆಸ್ಪತ್ರೆಗಳು ಕೋವಿಡ್‌ಮುಕ್ತ ಆಗಿವೆ.

ಡಾ.ಕೆ.ವಿ. ತ್ರಿಲೋಕ್ ಚಂದ್ರ,
ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ)

ಬಾಲಯೇಸು ಪ್ರತಿಮೆ ಧ್ವಂಸ

ಪಿರಿಯಾಪಟ್ಟಣ: ಪಟ್ಟಣದ ಸೇಂಟ್ ಮೇರಿಸ್ ಚರ್ಚ್‌ಗೆ ಮಂಗಳವಾರ ಕೆಲವು ದುಷ್ಕರ್ಮಿಗಳು ನುಗ್ಗಿ, ಬಾಲ ಯೇಸುವಿನ ಪ್ರತಿಮೆ ಧ್ವಂಸಗೊಳಿಸಿದ್ದಾರೆ. ಸಂಜೆ 6 ಗಂಟೆಯ ವೇಳೆಗೆ ಸಿಬ್ಬಂದಿ ರಾಜಣ್ಣ ಎಂಬುವವರು ದೀಪ ಬೆಳಗಲು ಬಂದಾಗ ಘಟನೆ ನಡೆದಿದ್ದು ಗೊತ್ತಾಗಿದೆ.

‘ಚರ್ಚ್ ಹಿಂಭಾಗದ ಬಾಗಿಲು ತೆರೆದಿದ್ದು, ಹೂ ಕುಂಡಗಳು ಒಡೆದು ಬಿದ್ದಿರುವುದು ಕಂಡು ಬಂತು. ಪರಿಶೀಲಿಸಿದಾಗ ಕ್ರಿಸ್‌ಮಸ್ ಪ್ರಯುಕ್ತ ಒಳಭಾಗದಲ್ಲಿ ವಿಶೇಷವಾಗಿ ನಿರ್ಮಿಸಿದ್ದ ಬಾಲ ಯೇಸುವಿನ ತೊಟ್ಟಿಲು ಮತ್ತು ವಿಗ್ರಹವನ್ನು ಧ್ವಂಸಗೊಳಿಸಲಾಗಿತ್ತು’ ಎಂದು ಚರ್ಚಿನ ಧರ್ಮಗುರು ಜಾನ್ ಪೌಲ್ ಪೊಲೀಸರಿಗೆ ದೂರು ನೀಡಿದ್ದಾರೆ.

ಕುವೆಂಪು ಮನೆ ದುರಸ್ತಿಗೆ ₹1 ಕೋಟಿ

ಬೆಳಗಾವಿ: ಕುಪ್ಪಳಿಯ ಕುವೆಂಪು ಕವಿಮನೆ, ಹೇಮಾಂಗಣ ಮತ್ತು ಸುತ್ತಮುತ್ತಲ ಪ್ರದೇಶದ ದುರಸ್ತಿ ಹಾಗೂ ಸುಣ್ಣಬಣ್ಣ ಕಾಮಗಾರಿಗಳಿಗೆ ₹1 ಕೋಟಿ ಬಿಡುಗಡೆ ಮಾಡಲು ಸಿಎಂ ಬಸವರಾಜ ಬೊಮ್ಮಾಯಿ ಅವರು ಆದೇಶಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಪ್ರಾಧಿಕಾರದ ಸಮಕಾರ್ಯದರ್ಶಿ ಮತ್ತಿತರ ಪದಾಧಿಕಾರಿಗಳು ಮನವಿ ಮಾಡಿದ ಕಾರಣ, ಸರ್ಕಾರದ ವತಿಯಿಂದ ಹಣ ಬಿಡುಗಡೆ ಮಾಡುವಂತೆ ಸೂಚಿಸಿದ್ದಾರೆ.

ನಗರದ ಆಸ್ಪತ್ರೆಯಲ್ಲಿ ಸಿದ್ಧತಾ ತಾಲೀಮು

ಬೆಂಗಳೂರು: ವಿಕ್ಟೋರಿಯಾ ಸೇರಿ ನಗರದ ವಿವಿಧ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದ ಸಿದ್ಧತೆಯ ತಾಲೀಮನ್ನು ಮಂಗಳವಾರ ನಡೆಸಲಾಯಿತು.

ಆಮ್ಲಜನಕ ಘಟಕಗಳ ಕಾರ್ಯನಿರ್ವಹಣೆ, ಹಾಸಿಗೆಗಳ ವ್ಯವಸ್ಥೆ, ವೈದ್ಯಕೀಯ ಸಿಬ್ಬಂದಿ ಲಭ್ಯತೆ ಸೇರಿ ಆಸ್ಪತ್ರೆಯಲ್ಲಿನ ವ್ಯವಸ್ಥೆಯ ಬಗ್ಗೆ ಪರಿಶೀಲಿಸಲಾಯಿತು. ಚಿಕಿತ್ಸೆ, ಆರೈಕೆ ಬಗ್ಗೆ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಯಲ್ಲಿ ಅರಿವು ಮೂಡಿಸಲಾಯಿತು. ಕೆ.ಸಿ. ಜನರಲ್, ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಸೇರಿ ಪ್ರಮುಖ ಆಸ್ಪತ್ರೆಗಳಲ್ಲಿ ಸಿದ್ಧತಾ ತಾಲೀಮು ಯಶಸ್ವಿಯಾಗಿ ನಡೆಯಿತು.

‘ಕೋವಿಡ್ ಚಿಕಿತ್ಸೆಗೆ ಒಂದು ಬ್ಲಾಕ್ ಮೀಸಲಿಡಲಾಗಿದೆ. ಸದ್ಯ 50 ಹಾಸಿಗೆಗಳನ್ನು ಗುರುತಿಸಲಾಗಿದೆ. 8 ಎಚ್‌ಡಿಯು, 4 ಐಸಿಯು ಹಾಸಿಗೆಗಳನ್ನು ಮೀಸಲಿಡಲಾಗಿದ್ದು, ಉಳಿದವು ಸಾಮಾನ್ಯ ಹಾಸಿಗೆಗಳಾಗಿವೆ. ಕೊರೊನಾ ಸೋಂಕಿತರು ಆಸ್ಪತ್ರೆಗೆ ಬಂದಾಗ ಉಪಚರಿಸುವ ರೀತಿ, ವಿವಿಧ ಕಾಯಿಲೆಗಳಿರುವ ರೋಗಿಗಳ ಆರೈಕೆಯ ಬಗ್ಗೆಯೂ ತಿಳಿಸಲಾಗಿದೆ. ಕೋವಿಡ್ ಪರಿಸ್ಥಿತಿ ನಿಭಾಯಿಸಲು ಆಸ್ಪತ್ರೆ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಸಜ್ಜಾಗಿದೆ. ವೈದ್ಯಕೀಯ ಆಮ್ಲಜನಕ ವ್ಯವಸ್ಥೆಯೂ ಸಮರ್ಪಕವಾಗಿ ಇದೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಮೇಶ್ ಕೃಷ್ಣ ತಿಳಿಸಿದರು.



ನಗರದ ಕೆ.ಸಿ. ಜನರಲ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ಸಿದ್ಧತಾ ತಾಲೀಮು ನಡೆಸಲಾಯಿತು. – ಪ್ರಜಾವಾಣಿ ಚಿತ್ರ

ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ವೈದ್ಯಕೀಯ ಅಧೀಕ್ಷಕಿ ಡಾ. ಇಂದಿರಾ ಕಬಾಡೆ ಹಾಗೂ ಸ್ಥಾನಿಕ ವೈದ್ಯಾಧಿಕಾರಿ ಆರ್.ಎಂ. ಮೋಹನ್ ಅವರ ಸಮ್ಮುಖದಲ್ಲಿ ಸಿದ್ಧತಾ ತಾಲೀಮು ನಡೆಯಿತು. ಇಂದಿರಾನಗರದ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸೆಗೆ 90 ಹಾಸಿಗೆಗಳನ್ನು ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ನಡೆಯದ ತಾಲೀಮು: ಬೌರಿಂಗ್ ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸಾ ಕೇಂದ್ರವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಆದ್ದರಿಂದ ಅಲ್ಲಿ ಸಿದ್ಧತಾ ತಾಲೀಮು ನಡೆಯಲಿಲ್ಲ.

‘ಆಸ್ಪತ್ರೆಯು ಕಳೆದ ಮೂರು ಅಲೆಗಳಿಂದ ಕೋವಿಡ್ ಸೋಂಕಿತರಿಗೆ ನಿರಂತರ ಚಿಕಿತ್ಸೆ ನೀಡುತ್ತಿದೆ. ಇಲ್ಲಿನ ಕೋವಿಡ್ ವಾರ್ಡ್ ಮುಚ್ಚಿರಲಿಲ್ಲ. ಹಾಗಾಗಿ, ಸಿದ್ಧತಾ ತಾಲೀಮನ್ನು ನಡೆಸಲಿಲ್ಲ. ವಿಮಾನ ನಿಲ್ದಾಣದಲ್ಲಿ ಸೋಂಕು ದೃಢಪಟ್ಟವರಿಗೆ ಇಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಕೋವಿಡ್ ಚಿಕಿತ್ಸೆಗೆ ಸದ್ಯ 60 ಸಾಮಾನ್ಯ ಹಾಸಿಗೆ ಹಾಗೂ 10 ಐಸಿಯು ಹಾಸಿಗೆ ಮೀಸಲಿಡಲಾಗಿದೆ. ಸಿಬ್ಬಂದಿ ಕೂಡ ಉತ್ತಮ ತರಬೇತಿ ಹೊಂದಿದ್ದಾರೆ’ ಎಂದು ಬೌರಿಂಗ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಕೆಂಪರಾಜು ತಿಳಿಸಿದರು.

‘ಕೋವಿಡ್ ಎದುರಿಸಲು ಸರ್ಕಾರ ಸಿದ್ಧ’

ಹುಬ್ಬಳ್ಳಿ: ‘ಕೋವಿಡ್ ರೂಪಾಂತರಿ ತಳಿ ಬಗ್ಗೆ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಸೋಂಕು ಹರಡದಂತೆ ಸರ್ಕಾರ ಅಗತ್ಯ ಕ್ರಮ ತೆಗೆದುಕೊಂಡಿದೆ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿದೇಶದಿಂದ ಬರುವ ಶಂಕಿತ ಕೊರೊನಾ ಸೋಂಕಿತರನ್ನು ವಿಮಾನ ನಿಲ್ದಾಣಗಳಲ್ಲಿಯೇ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಅಗತ್ಯವಿದ್ದರೆ ಮುಂಬರುವ ದಿನಗಳಲ್ಲಿ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸುತ್ತೇವೆ. ರಾಜ್ಯದಲ್ಲಿ ಎಂಟು ಲಕ್ಷ ಕೋವಿಡ್ ಲಸಿಕೆ ದಾಸ್ತಾನು ಇದ್ದು, ಕೇಂದ್ರ ಸರ್ಕಾರದಿಂದ ಮತ್ತೆ 20 ಲಕ್ಷ ಲಸಿಕೆ ಪಡೆಯಲು ಸಿದ್ಧವಿದ್ದೇವೆ’ ಎಂದರು.



ಭೂಸಾರಿಗೆಯ ಸಮನ್ವಯಕ್ಕೆ ಪ್ರತ್ಯೇಕ ಸಂಸ್ಥೆ: ಮಸೂದೆಗೆ ವಿಧಾನಸಭೆ ಅಂಗೀಕಾರ

ಬೆಂಗಳೂರು ಸಂಚಾರ ನಿರ್ವಹಣೆಗೆ ಪ್ರಾಧಿಕಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಂಗಳೂರು ನಗರದಲ್ಲಿ ಸಾಮೂಹಿಕ ಸಾರಿಗೆ, ವಾಹನಗಳ ಸಂಚಾರದ ಅಭಿವೃದ್ಧಿ, ಕಾರ್ಯಾಚರಣೆ, ನಿರ್ವಹಣೆ, ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆಗಾಗಿ ಬೆಂಗಳೂರು ಮಹಾನಗರ ಭೂಸಾರಿಗೆ ನಿಗಮ ರಚನೆಗಾಗಿ 'ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಮಸೂದೆ-2022' ಕ್ಕೆ ವಿಧಾನಸಭೆ ಮಂಗಳವಾರ ಒಪ್ಪಿಗೆ ನೀಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪರವಾಗಿ ಕಾನೂನು ಸಂಸದೀಯ ಜೆ.ಸಿ. ಮಾಧುಸ್ವಾಮಿ ಮಸೂದೆಯನ್ನು ಮಂಡಿಸಿ, ಬೆಂಗಳೂರು ನಗರದ ಸಂಚಾರ ದಟ್ಟಣೆ ನಿವಾರಿಸುವುದಕ್ಕಾಗಿ ಪ್ರಾಧಿಕಾರವೊಂದರ ಅವಶ್ಯಕತೆ ಇದ್ದು, ಈ ಸಂಬಂಧ ಕೇಂದ್ರ ಸರ್ಕಾರ ಮಸೂದೆಯನ್ನು ರೂಪಿಸಿದೆ. ಅದಕ್ಕೆ ಪೂರಕವಾಗಿ ಈ ಮಸೂದೆ ರೂಪಿಸಲಾಗಿದೆ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ವಲಯ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಸಂಚಾರ ಪೊಲೀಸ್, ಬಿಎಂಟಿಸಿ, ಬಿಬಿಎಂಪಿ, ಮೆಟ್ರೊ ರೈಲು ನಿಗಮ ಮತ್ತು ಸಾರಿಗೆ ಇಲಾಖೆ ಸೇರಿ ವಿವಿಧ ಏಜೆನ್ಸಿಗಳನ್ನು ಈ ಪ್ರಾಧಿಕಾರದ ವ್ಯಾಪ್ತಿಗೆ ತಂದು ವಿಸ್ತೃತ ಯೋಜನೆಗಳನ್ನು ರೂಪಿಸಲಾಗುವುದು ಎಂದು ಮಾಧುಸ್ವಾಮಿ ಅವರು ತಿಳಿಸಿದರು.

ಮಸೂದೆಯ ಕುರಿತು ಹೆಚ್ಚಿನ ವಿವರಣೆ ನೀಡಿದ ಮುಖ್ಯಮಂತ್ರಿ ಬೊಮ್ಮಾಯಿ, 'ಬೆಂಗಳೂರು ನಗರ ದೊಡ್ಡ ಪ್ರಮಾಣದಲ್ಲಿ ಮತ್ತು ಅತಿವೇಗವಾಗಿ ಬೆಳೆಯುತ್ತಿದೆ. ಆದರೆ ಯೋಜನಾಬದ್ಧವಾಗಿ ಬೆಳೆದಿಲ್ಲ. ಪುರಸಭೆಗಳು ಮತ್ತು 110 ಹಳ್ಳಿಗಳು ಸೇರಿಕೊಂಡಿವೆ. ಆದರೆ ಕಳೆದ 20-25 ವರ್ಷಗಳಿಂದ ರಸ್ತೆ ಅಗಲಗೊಂಡಿಲ್ಲ. ಇವೆಲ್ಲವನ್ನೂ ಪ್ರಾಧಿಕಾರದ ವ್ಯಾಪ್ತಿಗೆ ಸೇರಿಸಲಾಗುವುದು' ಎಂದು ಹೇಳಿದರು.

ಚರ್ಚೆ ನಡೆದ ಬಳಿಕ ಮಸೂದೆಗೆ ವಿಧಾನಸಭೆ ಅನುಮೋದನೆ ನೀಡಿತು.

ಮಸೂದೆಯ ಪ್ರಮುಖ ಅಂಶಗಳು

- ವಾಹನ ನಿಲುಗಡೆ ನೀತಿ, ಮೋಟಾರು ವಾಹನೇತರ ಸಾರಿಗೆ ನೀತಿ, ಸಾಗಣೆ ಆಧಾರಿತ ಅಭಿವೃದ್ಧಿ ನೀತಿ, ಬಹುಮಾದರಿ ಸಂಯೋಜಿತ ನೀತಿ, ಸರಕು ಸಾಗಣೆ ನೀತಿ ಮತ್ತು ಇತರೆ ಸಂಚಾರ ನೀತಿ ರೂಪಿಸಲಾಗುವುದು
- ನಗರ ಸಂಚಾರ ಪ್ರದೇಶದಲ್ಲಿ ಯೋಜಿತ ಅಭಿವೃದ್ಧಿಗಾಗಿ ಒಂದು ಸಮಗ್ರ ಯೋಜನೆಯನ್ನು ಸಿದ್ಧಪಡಿಸಲಾಗುವುದು
- ವಿವಿಧ ಮಾದರಿಗಳ ಮೂಲಸೌಕರ್ಯ, ಸೌಲಭ್ಯಗಳು ಮತ್ತು ಕಾಮಗಾರಿಗಳು, ನಗರದಲ್ಲಿ ಸಂಪೂರ್ಣವಾದ ರಸ್ತೆ ಜಾಲ (ಒಂದು ಚದರ ಕಿ.ಮೀ ಗ್ರಿಡ್ ಆದ್ಯತೆಯನ್ನು ಒಳಗೊಂಡಿರಬೇಕು), ಸಾರ್ವಜನಿಕ ಸಾರಿಗೆಯ ಈಗಿನ ಮತ್ತು ಉದ್ದೇಶಿತ ಮಾರ್ಗದ ಯೋಜನೆಗಳು, ಪ್ರಯಾಣದ ಬೇಡಿಕೆ ಆಧಾರದ ಮೇಲೆ ಸ್ಥಾಪಿಸಲಾದ ರಸ್ತೆಗಳ ಶ್ರೇಣಿ, ಶ್ರೇಣಿಯ ಎಲ್ಲಾ ಮಟ್ಟಗಳ ರಸ್ತೆಗಳನ್ನು ನಿರ್ಮಿಸುವುದಕ್ಕೆ ಬೇಕಾದ ಮಾನದಂಡಗಳು
- ಪಾದಚಾರಿ ಮಾರ್ಗ, ಸೈಕಲ್ ಟ್ರ್ಯಾಕ್‌ಗಳು, ಒಳಚರಂಡಿಗಳು ಮತ್ತು ಅವುಗಳ ನಿರ್ವಹಣೆಯ ಮಾನದಂಡ
- ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ರ ಮೇರೆಗೆ ಪರಿಭಾಷಿಸಲಾದಂತೆ, ನಿರ್ದಿಷ್ಟ ಮಾನದಂಡದ ಅಂಗವಿಕಲತೆ ಇರುವ ಮತ್ತು ಅಂಗವಿಕಲ ವ್ಯಕ್ತಿಗಳಿಗಾಗಿ ಸಂಚಾರ ಮತ್ತು ಸಾರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು.

ಸಂಚಾರ ಸಮಸ್ಯೆಯಿಂದ ನಗರದ ಮೂರನೇ ಒಂದರಷ್ಟು ದುಡಿಯುವ ವರ್ಗದ ಮಾನವ ಶಕ್ತಿ ವ್ಯಯವಾಗುತ್ತಿದೆ. ಇದು ವಿಶ್ವದಲ್ಲೇ ಅತಿ ಹೆಚ್ಚು.
ಎಚ್.ಕೆ.ಪಾಟೀಲ, ಕಾಂಗ್ರೆಸ್

ನಗರದಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇನ್ನಷ್ಟು ಬಲಪಡಿಸಬೇಕಾಗಿದೆ. ಸಾರಿಗೆ ಸಮಸ್ಯೆಗಳನ್ನು ಬಗೆಹರಿಸಲು ಇಲಾಖೆಗಳ ಮಧ್ಯೆ ಸಮನ್ವಯ ಅಗತ್ಯ.
ಎನ್.ಎ.ಹ್ಯಾರೀಸ್, ಕಾಂಗ್ರೆಸ್

ಈ ಪ್ರಾಧಿಕಾರದ ವ್ಯಾಪ್ತಿಗೆ ಬೆಂಗಳೂರು ನಗರ ಜಿಲ್ಲೆಯನ್ನು ಸೇರಿಸಬೇಕು. ಕೇವಲ ಬಿಬಿಎಂಪಿಗೆ ಅನ್ವಯ ಮಾಡಿದರೆ ಹೆಚ್ಚಿನ ಪ್ರಯೋಜನ ಆಗದು
ಅರವಿಂದ ಲಿಂಬಾವಳಿ, ಬಿಜೆಪಿ

ಜನಸಂಖ್ಯೆ ಮೀರುವ ವಾಹನ ಸಂಖ್ಯೆ

ನಗರದಲ್ಲಿ 1.25 ಕೋಟಿ ಜನಸಂಖ್ಯೆ ಇದ್ದು, 103 ಲಕ್ಷ ವಾಹನಗಳಿವೆ. ಪ್ರತಿ ದಿನ 5,000 ಹೊಸ ವಾಹನಗಳು ರಸ್ತೆಗೆ ಬರುತ್ತಿವೆ. ಕೆಲವೇ ವರ್ಷಗಳಲ್ಲಿ ಜನಸಂಖ್ಯೆಯನ್ನು ವಾಹನಗಳ ಸಂಖ್ಯೆ ಮೀರಿಸಲಿದೆ. ಇದರಿಂದ ಉದ್ಭವಿಸುವ ಸಮಸ್ಯೆಗಳನ್ನು ವಿವಿಧ ಇಲಾಖೆಗಳು ಪ್ರತ್ಯೇಕವಾಗಿ ಬಗಹರಿಸಲು ಸಾಧ್ಯವಿಲ್ಲ. ಒಂದು ಪ್ರಾಧಿಕಾರದಲ್ಲಿ ಸಂಬಂಧಿಸಿದ ಇಲಾಖೆಗಳು ಇದ್ದಾಗ ಬಗೆಹರಿಸಲು ಸಾಧ್ಯ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ಬೆಂಗಳೂರಿನ ಸಂಚಾರ ಸಮಸ್ಯೆಯ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಹೊಸದಾಗಿ ವೈಜ್ಞಾನಿಕ ಅಧ್ಯಯನ ನಡೆಸಿ ವರದಿ ಪಡೆಯಲಾಗುವುದು. ಅಲ್ಲದೆ, ಬೆಂಗಳೂರಿನಷ್ಟೇ ಸಂಚಾರ ಸಮಸ್ಯೆಯನ್ನು ಹೊಂದಿರುವ ಶಾಂಘೈ, ಲಂಡನ್ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ಸಮಸ್ಯೆಯನ್ನು ಹೇಗೆ ಬಗೆಹರಿಸಿದ್ದಾರೆ ಎಂಬುದರ ವರದಿ ಪಡೆಯಲಾಗುವುದು ಎಂದು ಹೇಳಿದರು.

ನಗರದ ಸಂಚಾರ ಸಮಸ್ಯೆ ನಿವಾರಣೆ ಮಾಡುವ ದಿಸೆಯಲ್ಲಿ ಈಗಾಗಲೇ ಕೆಲವು ಕ್ರಮ ತೆಗೆದುಕೊಳ್ಳಲಾಗುವುದು. ಇದರ ಪರಿಣಾಮವಾಗಿ, ಹೆಬ್ಬಾಳ ಫ್ಲೈಓವರ್ ದಾಟಲು ಹಿಂದೆ 25 ನಿಮಿಷ ಬೇಕಾಗುತ್ತಿಲ್ಲ. ಈಗ 7-8 ನಿಮಿಷಗಳಲ್ಲಿ ದಾಟಬಹುದಾಗಿದೆ. ಅಲ್ಲಿ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿದೆ. ಸಂಚಾರ ಸುಗಮವಾಗಿದೆ ಎಂದರು.

7000 ಸಿ.ಸಿ.ಟಿ.ವಿ. ಕ್ಯಾಮೆರಾ: ನಿರ್ಭಯಾ ನಿಧಿಯಡಿ ನಗರದಲ್ಲಿ 7,000 ಕಡೆಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆ. ಎಐ ಕ್ಯಾಮೆರಾ ಮತ್ತು ಸ್ವಿರಲ್ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸಿಗ್ನಲ್ ಜಂಪ್ ಮಾಡುವವರನ್ನು ನಿಲ್ಲಿಸಿಕೊಂಡು ದಂಡ ಕಟ್ಟುವ ವ್ಯವಸ್ಥೆ ನಿಲ್ಲಿಸಲಾಗಿದ್ದು, ಕ್ಯಾಮೆರಾ ಮೂಲಕ ಸಿಗ್ನಲ್ ಜಂಪ್ ಪತ್ತೆ ಮಾಡಿ ಎಸ್‌ಎಂಎಸ್ ಮೂಲಕ ನೋಟಿಸ್ ಕಳಿಸಿ, ದಂಡ ಪಾವತಿಸಲು ಸೂಚಿಸಲಾಗುವುದು. ಇದರಿಂದ ದಂಡ ಸಂಗ್ರಹ ಪ್ರಮಾಣ ಹೆಚ್ಚಾಗಿದೆ ಎಂದರು.

ಬಿಜೆಪಿಯಿಂದ 'ಬೂತ್ ವಿಜಯ ಅಭಿಯಾನ'

ಬೆಳಗಾವಿ: ರಾಜ್ಯ ಬಿಜೆಪಿ ಜನವರಿ 2 ರಿಂದ ಜನವರಿ 12ರ ವರೆಗೆ 'ಬೂತ್ ವಿಜಯ ಅಭಿಯಾನ'ವನ್ನು ಆಯೋಜಿಸಿದೆ.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು. ಈ ಅಭಿಯಾನ 58,156 ಬೂತ್‌ಗಳು, 11,642 ಶಕ್ತಿ ಕೇಂದ್ರಗಳು, 1,445 ಮಹಾಶಕ್ತಿ ಕೇಂದ್ರಗಳು, 312 ಮಂಡಲಗಳು, 39 ಸಂಘಟನಾತ್ಮಕ ಜಿಲ್ಲೆಗಳಲ್ಲಿ ನಡೆಯಲಿದೆ. ರಾಜ್ಯ, ಜಿಲ್ಲಾ, ತಾಲ್ಲೂಕು ಮಾತ್ರವಲ್ಲದೆ ಎಲ್ಲ ಘಟಕಗಳು, ಕಾರ್ಯಕರ್ತರು ಇದರಲ್ಲಿ ಭಾಗವಹಿಸಲಿದ್ದಾರೆ ಎಂದರು.

ರಾಜ್ಯದಲ್ಲಿರುವ ಪಕ್ಷದ ಕಾರ್ಯಕರ್ತರ ಹಾಗೂ ಮತದಾರರ 50 ಲಕ್ಷ ಮನೆಗಳಲ್ಲಿ ಬಿಜೆಪಿ ಧ್ವಜ ಹಾರಿಸುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಯುವ ಅರ್ಹ ಮತದಾರರನ್ನು ಮತಪಟ್ಟಿಯಲ್ಲಿ ಸೇರಿಸಲಾಗುವುದು. ಪ್ರತಿ ಬೂತ್‌ಗಳಲ್ಲಿ ಶೇ 100 ಮತದಾನ ಆಗುವ ರೀತಿಯಲ್ಲಿ ಜಾಗೃತಿ ಮೂಡಿಸಲಾಗುತ್ತದೆ. 20 ಲಕ್ಷ ಕಾರ್ಯಕರ್ತರು ಈ ಅಭಿಯಾನದಲ್ಲಿ ಭಾಗವಹಿಸುವರು ಎಂದು ಹೇಳಿದರು.

ಪ್ರಧಾನಿಯವರ ಮನ್‌ಕೀ ಬಾತ್‌ನ ವೆಬ್ ಲಿಂಕ್ ಅನ್ನು 60 ಸಾವಿರ ಗುಂಪುಗಳು ಡೌನ್‌ಲೋಡ್ ಮಾಡಿಸುವಂತೆ ಪ್ರೇರೇಪಿಸಿ ಕಾರ್ಯಾನುಷ್ಠಾನ ಮಾಡಲಾಗುವುದು. ಪ್ರತಿ ಬೂತ್‌ನಲ್ಲಿ ಮತದಾರರಿಗೆ ಜಾಗೃತಿ ಮೂಡಿಸುವ ಸಭೆಯನ್ನು ಮಾಡಲಿದ್ದೇವೆ ಎಂದೂ ತಿಳಿಸಿದರು.

ಈ ಅಭಿಯಾನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಎಲ್ಲ ಸಚಿವರು, ಬಿಜೆಪಿಯ ಎಲ್ಲ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ರಾಜ್ಯ, ಜಿಲ್ಲೆ, ಮಂಡಲ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ಕಾಫಿ ಬೆಳೆಗಾರರ ಹಳೆ ಬಾಕಿ ಮನ್ನಾ: ಭರವಸೆ

ಬೆಳಗಾವಿ: 'ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಫಿ ಬೆಳೆಗಾರರ 10 ಎಚ್‌ಪಿ ಒಳಗಿನ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲು ಹಾಗೂ ವಿದ್ಯುತ್ ಬಿಲ್ ಬಾಕಿ ಮನ್ನಾ ಮಾಡಲು ಕ್ರಮಕೈಗೊಳ್ಳಲಾಗುವುದು' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಅಪ್ಪಚ್ಚು ರಂಜನ್ ಸೇರಿದಂತೆ ಕೊಡಗು, ಚಿಕ್ಕಮಗಳೂರು, ಹಾಸನ ಭಾಗದ ಶಾಸಕರು ಕಾಫಿ ಬೆಳೆಗಾರರ ಬೇಡಿಕೆಗಳ ಕುರಿತು ಗಮನ ಸೆಳೆದರು.

ಬಹುಜನ ಯುವ ಸಮ್ಮೇಳನದಲ್ಲಿ ಬಿಎಸ್‌ಪಿಯ ಆಕಾಶ್ ಆನಂದ್ ಕಳವಳ

'ದನಕರುಗಳಿಗಷ್ಟೇ ರಕ್ಷಣೆ; ಹೆಣ್ಣು ಮಕ್ಕಳಿಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರದಲ್ಲಿ ದನಕರುಗಳಿಗೆ ಇರುವ ರಕ್ಷಣೆ, ಹೆಣ್ಣು ಮಕ್ಕಳಿಗೆ ಇಲ್ಲ. ಇದು ಬಾಬಾ ಸಾಹೇಬ್ ಅಂಬೇಡ್ಕರ್ ಕಲ್ಪನೆಗೆ ತದ್ವಿರುದ್ಧವಾದ ಭಾರತ' ಎಂದು ಬಿಎಸ್‌ಪಿ ರಾಷ್ಟ್ರೀಯ ಸಂಯೋಜಕ ಆಕಾಶ್ ಆನಂದ್ ಕಳವಳ ವ್ಯಕ್ತಪಡಿಸಿದರು.

ಬಹುಜನ ಸಮಾಜ ಪಕ್ಷ ಆಯೋಜಿಸಿದ್ದ ಬಹುಜನ ಯುವ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, 'ಗೋವುಗಳ ರಕ್ಷಣೆಗೆ ಕಾಯ್ದೆ ಜಾರಿ ಮಾಡುವ ಬಿಜೆಪಿ, ಹೆಣ್ಣು ಮಕ್ಕಳ ರಕ್ಷಣೆಗೆ ಅಷ್ಟೇ ಆದ್ಯತೆ ನೀಡುತ್ತಿಲ್ಲ. ಅದರ ಪರಿಣಾಮವಾಗಿ ಒಂದೇ ವರ್ಷದಲ್ಲಿ 40 ಸಾವಿರಕ್ಕೂ ಹೆಚ್ಚು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆದಿರುವ ಪ್ರಕರಣಗಳು ವರದಿಯಾಗಿವೆ. ಗೋಮಾತೆಯನ್ನು ರಕ್ಷಣೆ ಮಾಡುವವರಿಗೆ ಭಾರತ ಮಾತೆಯ ರಕ್ಷಣೆ ಮಾಡಲು ಏಕೆ ಸಾಧ್ಯವಾಗುತ್ತಿಲ್ಲ' ಎಂದು ಪ್ರಶ್ನಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಕರ್ನಾಟಕ ಸರ್ಕಾರ ಹೆಚ್ಚಿಸಿದೆ. ಆದರೆ, ಅದೇ ಪಕ್ಷದ ಕೇಂದ್ರ ಸರ್ಕಾರ ಹಿಂದು-ಮುಂದು ನೋಡುತ್ತಿದೆ. 25 ಲಕ್ಷಕ್ಕೂ ಹೆಚ್ಚು ಬಗರ್ ಹುಕುಂ ಸಾಗುವಳಿದಾರಿಗೆ ಹಕ್ಕು ಪತ್ರ ಸಿಕ್ಕಿಲ್ಲ. 11 ಸಾವಿರ ಹಳ್ಳಿಗಳಲ್ಲಿ ದಲಿತರಿಗೆ ಸ್ಮಶಾನವಿಲ್ಲ. ಹೊಸ ಶಿಕ್ಷಣ ನೀತಿಯಂತೂ ಬಹುಜನ ಸಮಾಜಕ್ಕೆ ವಿರುದ್ಧವಾಗಿದೆ ಎಂದರು.

ಉತ್ತರ ಪ್ರದೇಶದಲ್ಲಿ ಮಾಯಾವತಿ ಅವರು ಮಾದರಿ ಸರ್ಕಾರವನ್ನು ಮುನ್ನಡೆಸಿದ್ದರು. ಅದೇ ರೀತಿಯ ಬದಲಾವಣೆಗಳು ಕರ್ನಾಟಕದಲ್ಲೂ ಆಗಬೇಕಿದೆ. ಕಾಂಗ್ರೆಸ್ ಅಥವಾ ಬಿಜೆಪಿಗೆ ಮತ ಹಾಕಿ ಹತಾಶರಾಗುವ ಬದಲು ಬಹುಜನ ಸಮಾಜ ಪಕ್ಷಕ್ಕೆ ಮತ ನೀಡಲು ಜನರ ಮನವೊಲಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು ಎಂದು ಹೇಳಿದರು.



ಬಹುಜನ ಯುವ ಸಮ್ಮೇಳನವನ್ನು ಆಕಾಶ್ ಆನಂದ್ ಉದ್ಘಾಟಿಸಿ ಅಂಬೇಡ್ಕರ್ ಮತ್ತು ಕಾನ್ಶಿರಾಮ್ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು. ರಾಜ್ಯಸಭೆ ಸದಸ್ಯ ರಾಮ್‌ಜೀ ಗೌತಮ್, ಬಿಎಸ್‌ಪಿ ಕೇಂದ್ರೀಯ ಸಂಯೋಜಕ ಅಶೋಕ್ ಸಿದ್ಧಾರ್ಥ, ಮಾರಸಂದ್ರ ಮುನಿಯಪ್ಪ, ರಾಜ್ಯ ಸಂಯೋಜಕ ಎಂ.ಗೋಪಿನಾಥ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ಇದ್ದರು –ಪ್ರಜಾವಾಣಿ ಚಿತ್ರ

'ಕಾಂಗ್ರೆಸ್‌ಗೆ ಮತ ಹಾಕಿಸುವವರು ಅಂಬೇಡ್ಕರ್ ವಾದಿಗಳೇ'

'ನೀಲಿ ಶಾಲು ಹೊದ್ದು ಕಾಂಗ್ರೆಸ್‌ಗೆ ಮತ ಹಾಕಿಸಲು ಹೊರಟಿರುವ ಸಾಮಾಜಿಕ ಸಂಘಟನೆಗಳ ನಾಯಕರು ಅಂಬೇಡ್ಕರ್ ವಾದಿಗಳೇ ಅಥವಾ ಸಂವಿಧಾನ ವಾದಿಗಳೇ' ಎಂದು ಬಿಎಸ್‌ಪಿ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಟೀಕಿಸಿದರು.

'ಡಿ.6ರಂದು 10 ಸಾವಿರದಿಂದ 20 ಸಾವಿರ ಜನರನ್ನು ಸೇರಿಸಿ ಐಕ್ಯತಾ ಸಮಾವೇಶ ನಡೆಸಿದ್ದೀರಿ. ದಲಿತ ಸಂಘಟನೆಗಳು ಒಂದಾಗಿರುವುದು ಸಂತಸ. ಆದರೆ, ಜಾತ್ಯಾತೀತ ಸೋಗಿನ ಕಾಂಗ್ರೆಸ್‌ಗೆ ಮತ ಕೊಡಿಸಲು ಹೊರಟಿರುವುದು ಸರಿಯೇ' ಎಂದು ಪ್ರಶ್ನಿಸಿದರು

'ಕಾಂಗ್ರೆಸ್‌ಗೆ ಮತ ಹಾಕಲೇಬೇಡಿ ಎಂದು ಅಂಬೇಡ್ಕರ್ ಹೇಳಿದ್ದರು. ಬಿಜೆಪಿಗೆ ಪರ್ಯಾಯವಾದ ಪಕ್ಷ ಕಾಂಗ್ರೆಸ್ ಅಲ್ಲ. ಬಹುಜನರ ಆಶೋತ್ತರಗಳ ಪರವಾಗಿರುವ ಪಕ್ಷ ಎಂದರೆ ಬಿಎಸ್‌ಪಿ. ಈ ಪಕ್ಷವನ್ನು ಮುನ್ನಡೆಸುವ ಹೊಣೆಯನ್ನು ಆಕಾಶ್ ಆನಂದ್ ಅವರು ಹೊತ್ತಿರುವುದು ಇಡೀ ದೇಶದ ಬಿಎಸ್‌ಪಿ ಕಾರ್ಯಕರ್ತರಲ್ಲಿ ಹೊಸ ಸಂಚಲನ ಉಂಟು ಮಾಡಿದೆ' ಎಂದು ಹೇಳಿದರು.



ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದ (ಬಿಐಸಿ) ವತಿಯಿಂದ ಮಂಗಳವಾರ ಆಯೋಜಿಸಲಾಗಿದ್ದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಜನಮನ ಸಾಂಸ್ಕೃತಿಕ ಸಂಘಟನೆಯ ಸಂಸ್ಥಾಪಕ, ಗಾಯಕ ಜನಾರ್ದನ ಅವರೊಂದಿಗೆ ತಂಡದ ಸದಸ್ಯರಾದ ದೇವೇಂದ್ರ ವರಪ್ರಸಾದ್, ಚಿಂತನ್ ವಿಕಾಸ್ ಹಾಡಿದರು. –ಪ್ರಜಾವಾಣಿ ಚಿತ್ರ

35 ಸಾವಿರ ದೇವಸ್ಥಾನಗಳ ಆಸ್ತಿ ಸಮೀಕ್ಷೆ: ಶಶಿಕಲಾ ಜೊಲ್ಲೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮುಜರಾಯಿ ಇಲಾಖೆ ಅಧೀನದ 35 ಸಾವಿರಕ್ಕೂ ಹೆಚ್ಚಿನ ದೇವಸ್ಥಾನಗಳ ಆಸ್ತಿ ಸಂರಕ್ಷಣೆಗಾಗಿ ಅವುಗಳ ಆಸ್ತಿ ವಿವರಗಳ ಸಮಗ್ರ ಸಮೀಕ್ಷೆ ಮಾಡಲು ರಾಜ್ಯ ಧಾರ್ಮಿಕ ಪರಿಷತ್ತಿನಲ್ಲಿ ನಿರ್ಧರಿಸಲಾಗಿದೆ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಇಲ್ಲಿ ನಡೆದ ಧಾರ್ಮಿಕ ಪರಿಷತ್ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ ಎ, ಬಿ ಮತ್ತು ಸಿ ದರ್ಜೆಯ 35 ಸಾವಿರಕ್ಕೂ ಹೆಚ್ಚು ದೇವಸ್ಥಾನಗಳಿವೆ. ಇವು ಗೆಜೆಟ್ ಪಟ್ಟಿಯಲ್ಲಿ ನಮೂದಾಗಿವೆ. ಆಸ್ತಿ ಸಂರಕ್ಷಣೆ, ಸಮಗ್ರ ಮಾಹಿತಿ ಕಲೆ ಹಾಕುವುದು ಹಾಗೂ ಅವುಗಳ ವಾಸ್ತವಿಕ ಸಮೀಕ್ಷೆ ನಡೆಸಲಾಗುವುದು. ಈ ನಿಟ್ಟಿನಲ್ಲಿ ಅಗತ್ಯ ವಿಶೇಷ ಅನುದಾನ ನೀಡುವಂತೆಯೂ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು ಎಂದು ಹೇಳಿದರು.

'ದೇವಸ್ಥಾನಗಳ ಸಮಗ್ರ ಸಮೀಕ್ಷೆಯನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ನಡೆಸಲಾಗುವುದು. ನಮ್ಮ ಪಟ್ಟಿಯಲ್ಲಿರುವ ದೇವಸ್ಥಾನಗಳ ಬಳಿ ತೆರಳುವುದು, ಅವುಗಳ ವಾಸ್ತವಿಕ ಚಿತ್ರಣವನ್ನು ಡಿಜಿಟಲ್ ಆಗಿ ನಮೂದಿಸುವುದು ಮತ್ತು ಅವುಗಳಲ್ಲಿರುವ ಆಸ್ತಿಗಳ ವಾಸ್ತವಿಕ ಸ್ಥಿತಿಗತಿಯ ಬಗ್ಗೆ ಮಾಹಿತಿ ಕಲೆ ಹಾಕಲಾಗುವುದು' ಎಂದರು.

ರಾಜ್ಯ ವಿವಿಧ ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿ ರಚಿಸಲು ಪರಿಷತ್ ಸಭೆಯಲ್ಲಿ ಅನುಮೋದನೆ ನೀಡಲಾಯಿತು. ಅಲ್ಲದೇ, ಬೆಳಗಾವಿ ಜಿಲ್ಲೆಯ ಸವದತ್ತಿ ಯಲಮ್ಮ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ರಚಿಸಲಾಗುತ್ತಿರುವ ಯೋಜನೆಗಳ ಬಗ್ಗೆ ವಿಸ್ತೃತ ಚರ್ಚೆಯನ್ನು ನಡೆಸಲಾಯಿತು. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ಅಂತಿಮಗೊಳಿಸಲು ನಿರ್ಧರಿಸಲಾಯಿತು ಎಂದರು.



ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ 'ಸಿದ್ಧಗಂಗಾ ಸಿರಿ' ಪ್ರಶಸ್ತಿಯನ್ನು ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಪ್ರದಾನ ಮಾಡಿದರು. ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಕಲಾವಿದ ಕೆ.ವಿ. ನಾಗರಾಜಮೂರ್ತಿ, ಪ್ರತಿಷ್ಠಾನದ ಅಧ್ಯಕ್ಷ ಎಸ್‌.ಮಹಾದೇವಯ್ಯ, ಸಾಹಿತಿ ಲೀಲಾದೇವಿ ಆರ್. ಪ್ರಸಾದ್, ವೀರಶೈವ ನಿತ್ಯಾಹ್ನ ದಾಸೋಹ ಸಮಿತಿ ಅಧ್ಯಕ್ಷ ಎಸ್. ಶಾಂತರಾಜು, ಗ್ರಾಮ ಪಂಚಾಯಿತಿ ಸದಸ್ಯ ಸಿದ್ಧಲಿಂಗಸ್ವಾಮಿ ಮತ್ತಿತರರು ಇದ್ದಾರೆ.

'ಭೀಮಾ ಕೋರೆಗಾಂವ್ ವಿಜಯೋತ್ಸವ ಜ.1ಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟದಿಂದ 2023ರ ಜ. 1ರಂದು ಭೀಮಾ ಕೋರೆಗಾಂವ್ ವಿಜಯೋತ್ಸವ ಹಮ್ಮಿಕೊಳ್ಳಲಾಗಿದೆ.

'205ನೇ ವರ್ಷದ ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ಜ.1ರಂದು 11.30ಕ್ಕೆ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ವಿವಿಧ ದಲಿತ ಸಂಘಟನೆಗಳಿಂದ ಪಥಸಂಚಲನ ಮತ್ತು ಧ್ವಜವಂದನೆ ಕಾರ್ಯಕ್ರಮ ನಡೆಯಲಿದೆ' ಎಂದು ಒಕ್ಕೂಟದ ಅಧ್ಯಕ್ಷ ಶಂಕರ್ ರಾಮಲಿಂಗಯ್ಯ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆ 30ರಿಂದ ಆರಂಭ

ಬೆಂಗಳೂರು: ಶಾಲೆಯಿಂದ ಹೊರಗುಳಿದ ರಾಜ್ಯದ ಮಕ್ಕಳ ಸಮಗ್ರ ಸಮೀಕ್ಷಾ ಕಾರ್ಯ ಡಿ.30ರಿಂದ ಜ.5ರವರೆಗೆ ನಡೆಯಲಿದೆ.

ಡಿ.28ರಂದು ವಿದ್ಯಾವಾಹಿನಿ ತಂತ್ರಾಂಶ ಬಿಡುಗಡೆ ಮಾಡಲಾಗುವುದು, 29ರಂದು ಜಿಲ್ಲಾ ಹಂತದ ಅಧಿಕಾರಿಗಳು ಸಮೀಕ್ಷಾ ಪಟ್ಟಿಯನ್ನು ನೀಡುವರು. 29ರಿಂದ ಜ.5ರವರೆಗೆ ಶಾಲಾ ಹಂತದಲ್ಲಿ ಶಿಕ್ಷಕರು ಶಾಲೆಗೆ ಸೇರಿದ ನಂತರ ಬಿಟ್ಟ ಮಕ್ಕಳು ಹಾಗೂ ದಾಖಲಾಗದ ಮಕ್ಕಳ ಸಮೀಕ್ಷೆ ಮಾಡಿ, ನಿಗದಿತ ನಮೂನೆಯಲ್ಲಿ ಭರ್ತಿ ಮಾಡಬೇಕು. ಸಿಆರ್‌ಪಿಗಳು ವಿದ್ಯಾವಾಹಿನಿ ತಂತ್ರಾಂಶದಲ್ಲಿ ದಾಖಲಿಸಬೇಕು, ಆಯಾ ಬಿಇಒಗಳು ತಮ್ಮ ವ್ಯಾಪ್ತಿಯ ಪಟ್ಟಿಗಳನ್ನು ದೃಢೀಕರಿಸಬೇಕು, 14ರ ಒಳಗೆ ಡಿಡಿಪಿಐಗಳು ಅಂಕಿ-ಅಂಶಗಳ ನಿಖರ ಪಟ್ಟಿ ನೀಡಬೇಕು ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರು ಸೂಚಿಸಿದ್ದಾರೆ.

'2022-23ನೇ ಸಾಲಿನಲ್ಲಿ 6ರಿಂದ 14 ವರ್ಷದ ಒಳಗಿನ 64 ಸಾವಿರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂದು ದಾಖಲೆಗಳು ತೋರಿಸುತ್ತಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಕೈಗೊಂಡ ಸಮೀಕ್ಷೆಯಲ್ಲಿ ಶಾಲೆಗಳ ದಾಖಲಾತಿಗೂ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿದ ಮಾಹಿತಿಗೂ ವ್ಯತ್ಯಾಸ ಕಂಡುಬಂದಿದೆ. ಹಾಗಾಗಿ, ಖಚಿತ ಮಹಿತಿ ಪಡೆಯಲು ಪುನರ್‌ಸಮೀಕ್ಷೆಗೆ ಆದೇಶಿಸಲಾಗಿದೆ. ಶಿಕ್ಷಕರು ಮಕ್ಕಳ ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸಲು, ಮಂಡಕ್ಕಿಭಟ್ಟಿ, ಕೃಷಿ, ತೋಟಗಳು, ಎಸ್ಟೇಟ್, ಗಣಿ ಪ್ರದೇಶ ಸೇರದಿಂತೆ ಮಕ್ಕಳು ಕೆಲಸ ಮಾಡುಬಹುದಾದ ಸ್ಥಳಗಳಲ್ಲಿ ಪರಿಶೀಲಿಸಲು ಸೂಚಿಸಲಾಗಿದೆ' ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಜಯದೇವ: 4 ಮಕ್ಕಳಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಇಥಿಯೋಪಿಯದ ನಾಲ್ವರು ಮಕ್ಕಳಿಗೆ ಯಶಸ್ವಿಯಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ನಾಲ್ವರಲ್ಲಿ ಒಂದು ಮಗುವಿನ ಹೃದಯದಲ್ಲಿ ರಂಧ್ರವಿತ್ತು. ಇಥಿಯೋಪಿಯಾದಲ್ಲಿ ಸೂಕ್ತ ಚಿಕಿತ್ಸಾ ಸೌಲಭ್ಯ ಇಲ್ಲದಿದ್ದರಿಂದ ಅವರನ್ನು ಇಲ್ಲಿಗೆ ಕರೆತರಲಾಗಿತ್ತು. 16 ವರ್ಷದ ಟಿಬೆಸಿಲಾಸ್ಸೆ ಕಸ್ಸಾಹುನ್, 6 ವರ್ಷದ ಕೇಜನ್ ಹೈಲ್, 12 ವರ್ಷದ ಮೆಜಿಡಾ ಅಬ್ದು ಹಾಗೂ 13 ವರ್ಷದ ಬಿಲೆನ್ ವರ್ಕಿನೆ ಶಸ್ತ್ರಚಿಕಿತ್ಸೆಗೆ ಒಳಗಾದ ಮಕ್ಕಳು.

ಇಥಿಯೋಪಿಯದ ರೋಟರಿ ಸಂಸ್ಥೆ, ಬೆಂಗಳೂರಿನ ಅಂತರರಾಷ್ಟ್ರೀಯ ರೋಟರಿ 3190, ನೀಡಿ ಹಾರ್ಟ್ ಫೌಂಡೇಷನ್‌ನ ರಾಜೇಂದ್ರ ರೈ ಅವರು ನಾಲ್ವರ ಶಸ್ತ್ರಚಿಕಿತ್ಸೆಗೆ ನೆರವಾಗಿದ್ದಾರೆ. ಡಿಸೆಂಬರ್ ಮೊದಲ ವಾರದಲ್ಲಿ ಸಂಸ್ಥೆಯ ಡಾ.ಪಿ.ಎಸ್. ಸೀತಾರಾಮ ಭಟ್, ಡಾ. ದಿವ್ಯಾ, ಡಾ. ಚಿರಾಗ್, ಡಾ. ಚಂದ್ರಸೇನ ಅವರನ್ನು ಒಳಗೊಂಡ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸಿದೆ. ನಾಲ್ವರು ಮಕ್ಕಳೂ ಚೇತರಿಸಿಕೊಂಡಿದ್ದಾರೆ.

'ಹೃದಯದಲ್ಲಿ ರಂಧ್ರ ಇರುವ ಮಕ್ಕಳಿಗೆ ಶಸ್ತ್ರಚಿಕಿತ್ಸೆ ನಡೆಸದಿದ್ದರೆ 10 ವರ್ಷದೊಳಗೆ ಮೃತಪಡುವ ಸಾಧ್ಯತೆ ಇದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಕುವೆಂಪು ಸಿರಿ ಉತ್ಸವ: ಉದ್ಘಾಟನೆ: ಟಿ. ವೆಂಕಟೇಶ್, ಅಧ್ಯಕ್ಷತೆ: ಎಂ. ಮಹಾದೇವ್, ಉಪಸ್ಥಿತಿ: ಕೆ.ಎಲ್. ಚನ್ನೇಗೌಡ, ಎಚ್.ವಿ. ಕಿರಣ್, ಸುರೇಶ್ ಗೌಡ, ಕುಬೇರ್ ಶೆಟ್ಟರು, ಅತಿಥಿಗಳು: ಬಿ.ಜಿ. ಜ್ಯೋತಿಪ್ರಕಾಶ್ ಮಿರ್ಜಿ, ಪ್ರಕಾಶಮೂರ್ತಿ, ತಲಕಾಡು ಚಿಕ್ಕರಂಗೇಗೌಡ, ಸಿ.ಜಿ. ಕೃಷ್ಣಪ್ಪ, ಎಂ. ಪರಮೇಶ್, ಆಯೋಜನೆ: ಕನ್ನಡಸೇನೆ, ಸ್ಥಳ: 'ಲೆರಾಯ್ ಗ್ರ್ಯಾಂಡ್ ಹೋಟೆಲ್', ಕನ್ನಡಸೇನೆ ಕೇಂದ್ರ ಕಚೇರಿ, ಎ.ಪಿ.ಎಂ.ಸಿ ಯಾರ್ಡ್, ತುಮಕೂರು ರಸ್ತೆ, ಬೆಳಿಗ್ಗೆ 9.30

ಶತ ಕಂಠಗಳ ಗಾಯನ ಹಾಗೂ ಸಮೂಹ ನೃತ್ಯ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ವೂಡೇ. ಪಿ. ಕೃಷ್ಣ, ಅಧ್ಯಕ್ಷತೆ: ಬಿ.ಪಿ. ಪ್ರಕಾಶ್, ಅತಿಥಿಗಳು: ಆರ್. ಚಂದ್ರಶೇಖರ್, ಎನ್.ಎ. ಚಿದಂಬರ, ಎಸ್.ಎಲ್. ಕೃಷ್ಣಮೂರ್ತಿ, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಸೇವಾ ಸದನ, 14ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10.30

ಗಜಾನನ ಶರ್ಮ ಅವರ ರಾಣಿ ಚೆನ್ನಭೈರಾದೇವಿ ಕಾದಂಬರಿಯ 'ಅವ್ವರಸಿ' ಏಕವ್ಯಕ್ತಿ ಅಭಿನಯ: ಪ್ರಸ್ತುತಿ: ಲೀಲಾ ಬಸವರಾಜು, ಅತಿಥಿಗಳು: ರಾಮಚಂದ್ರ, ಸುಚೇಂದ್ರ ಪ್ರಸಾದ್, ಕೆ.ಎಂ. ಚೈತನ್ಯ, ಆಯೋಜನೆ: ಸೆಂಟರ್ ಫಾರ್ ಡಿವೈನ್ ಆರ್ಟ್ಸ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ರವೀಂದ್ರ ಕಲಾಕ್ಷೇತ್ರ, ಸಂಜೆ 6.15



ಲೀಲಾ ಬಸವರಾಜು, ಏಕವ್ಯಕ್ತಿ ಅಭಿನಯದ ದೃಶ್ಯ

ಸಾಂಸ್ಕೃತಿಕ ಸುಗ್ಗಿ, ಚಂದ್ರಶೇಖರ ಕಂಬಾರ ಅವರ 'ಬೆಪ್ಪುತಕ್ಕಡಿ ಬೋಳೇಶಂಕರ' ನಾಟಕ ಪ್ರದರ್ಶನ: ಉದ್ಘಾಟನೆ: ನಾಗರಾಜ್ ರಾವ್, ಅಧ್ಯಕ್ಷತೆ: ಅನ್ನಪೂರ್ಣ ಬಿ.ಎಲ್., ಅತಿಥಿಗಳು: ಆರ್. ಚಂದ್ರಶೇಖರ್, ಬ್ಯಾಂಕ್ ನಾಗರಾಜ್, ಮುರಳಿ ಕುಮಾರ್ ಜಿ., ಶ್ರೀನಿವಾಸ್ ಕೆಮ್ತೂರು, ವಿಜಯ್ ಕುಮಾರ್, ಮಹೇಶ್ ಸಾಗರ್, ಬಸವರಾಜ್ ಕರಬಣ್ಣನವರ್, ವಿರೂಪಾಕ್ಷ, ಆಯೋಜನೆ: ಆದಿಶಕ್ತಿ ರಂಗ ಕಲಾಸಂಸ್ಥೆ, ಸ್ಥಳ: ಕಲಾಗ್ರಾಮ, ಮಲ್ಲತ್ತಳ್ಳಿ, ಸಂಜೆ:5.30

ಸಾಂಸ್ಕೃತಿಕ ಸೌರಭ: ಉದ್ಘಾಟನೆ: ಎಸ್. ಗಂಗಪ್ಪ, ಅತಿಥಿ: ಆರ್. ಚಂದ್ರಶೇಖರ್, ಆಯೋಜನೆ: ಶ್ರೀ ನಾದಪ್ರಿಯ ಕಲಾರಂಗ, ಸ್ಥಳ: ನಂಜುಂಡೇಶ್ವರ ಸ್ವಾಮಿ ಆವರಣ, ಕಪಿಲಾನಗರ, ಹೆಗ್ಗನಹಳ್ಳಿ, ಸಂಜೆ 4

ಸಾರಂಗಿ ವೆಂಕಟರಾಮಯ್ಯ ಪುಟ್ಟಚ್ಚಮ್ಮ ಪುಸ್ತಕ ಬಹಮಾನ ಮತ್ತು ಹಳಗನ್ನಡ ರಸಗ್ರಹಣ ತರಗತಿಗಳ ಪ್ರಮಾಣಪತ್ರ ಪ್ರದಾನ ಕಾರ್ಯಕ್ರಮ: ಪ್ರಶಸ್ತಿ ಪುರಸ್ಕೃತರು: ಜಯರಾಮ್ ರಾಯಪುರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿ: ರಾಜಪ್ಪ ದಳವಾಯಿ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ, ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ನರಸಿಂಹರಾಜ ಕಾಲೊನಿ, ಸಂಜೆ 5

'ಲೆಟ್ ಗೋ ಆ್ಯಂಡ್ ರೀಜಾಯ್ಸ್' ಉಪನಿಷತ್: ಶ್ರೀ ಎಂ, ಸ್ಥಳ: ಚೌಡಯ್ಯ ಮೆಮೊರಿಯಲ್ ಹಾಲ್, ವೈಯಾಲಿ ಕಾವಲ್, ಕೋದಂಡರಾಮಪುರ, ಮಲ್ಲೇಶ್ವರಂ, ಸಂಜೆ 6

'ರಕ್ತರಾತ್ರಿ' ನಾಟಕ ಪ್ರದರ್ಶನ: ನಿರ್ದೇಶನ: ಸಂಪತ್ ಕುಮಾರ್ ಕೆ., ಕೀ-ಬೋರ್ಡ್: ಚೇನತ್ ಜೆ.ಎಸ್., ತಬಲ: ಚನ್ನಕೇಶವ ಕೆ.ಎಲ್., ಅಧ್ಯಕ್ಷತೆ: ಆರ್. ಮಂಜುನಾಥ, ಅತಿಥಿಗಳು: ಮಹಾದೇವಮ್ಮ, ಉದಂತ ಶಿವಕುಮಾರ್, ಆಯೋಜನೆ: ಸರ್ಗಮ್ ಸಂಗೀತ, ಸ್ಥಳ: ನಂಜುಂಡೇಶ್ವರ ಸ್ವಾಮಿ ಆವರಣ, ಕಪಿಲಾನಗರ, ಹೆಗ್ಗನಹಳ್ಳಿ, ಸಂಜೆ 6.30

ರಂಗಾನುಬಂಧ ಉತ್ಸವ ಮತ್ತು 'ರಕ್ತ-ಧ್ವಜ' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಣಿ ಭಟ್ ಎ., ಸಂಗೀತ ಗಜಾನನ.ಟಿ. ನಾಯಕ್, ಉಪಸ್ಥಿತಿ: ಎನ್. ಮಂಗಳ, ಎಸ್.ವಿ. ಕಶ್ಯಪ್, ವೆಂಕಟೇಶ್ ಪ್ರಸಾದ್, ಸಂವಾದ: ನಾಟಕ ನಿರ್ಮಾಣ-ಪ್ರಕ್ರಿಯೆ-ಪ್ರತಿಕ್ರಿಯೆ, ಸ್ಥಳ: ಪ್ರಭಾತ್ ಕೆ.ಎಚ್. ಕಲಾಸೌಧ, ರಾಮಾಂಜನೇಯ ಗುಡ್ಡದ ಆವರಣ ಹನುಮಂತನಗರ, ಸಂಜೆ 6.30

ಶಂಕರನಾಗ್ ನಾಟಕೋತ್ಸವ: ಕೆ. ಶಿವರಾಮ ಕಾರಂತ ಅವರ 'ಚೋಮನ ದುಡಿ' ನಾಟಕ ಪ್ರದರ್ಶನ: ನಿರ್ದೇಶನ: ಕೆ.ಎಸ್.ಡಿ.ಎಲ್. ಚಂದ್ರು, ತಂಡ: ರೂಪಾಂತರ, ರಂಗರೂಪ: ಆರ್. ನಾಗೇಶ್, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

'ಮತ್ತೆ ಮುಖ್ಯಮಂತ್ರಿ' ನಾಟಕ ಪ್ರದರ್ಶನ: ಮುಖ್ಯಪಾತ್ರ: ಮುಖ್ಯಮಂತ್ರಿ ಚಂದ್ರು, ರಚನೆ: ಕೆ.ವೈ. ನಾರಾಯಣ ಸ್ವಾಮಿ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಕಲಾ ಗಂಗೋತ್ರಿ ರಂಗತಂಡ, ಸ್ಥಳ: ರಂಗ ಶಂಕರ, ಜೆ.ಪಿ ನಗರ, ಸಂಜೆ 7.30

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

PUBLIC NOTICE

My client intends to purchase the Agricultural Dry Land bearing Old Survey. No.192/3, New Survey. No. 192/4, Measuring 02 Acres Plus 09 Guntas Karab, [Totally measuring 2 Acres 09 Guntas] situated at Kuduvathi Village, Nandi Hobli, Chikkaballapur Taluk and District, more fully described in the schedule hereunder, from Sri. C. Nagaraja son of Late Chinnappa alongwith his wife Smt. Kavya L, minor daughters Kum. Hithashree N, Kum. Thrishika N, as Owners, residing at Nandi Village, Nandi Hobli, Chikkaballapur Taluk.

The Owners have represented that the Schedule Property is not the subject matter of any subsisting and valid mortgage, lien or charge in favour of anyone else and that there are no subsisting and valid agreement for sale or the like entered by the owners in respect of the Schedule Property.

If any person/s has/have any right to, interest in or claim against the Schedule Property including but not limited to any encumbrance thereon by way of a charge, mortgage or lienor being a party to any Agreement for Sale or the like in respect of Schedule Property or any part thereof may within seven [7] days hereof submit to us such claim together with documentary proof in support thereof, failing which, it shall be presumed that there are no encumbrances, charges or lien or any valid and subsisting Agreement for Sale or the like in respect of the Schedule Property.

SCHEDULE PROPERTY

All that piece and parcel of Agricultural Dry Land bearing Old Survey. No. 192/3, New Survey. No. 192/4, Measuring 02 Acres Plus 09 Guntas Karab, [Totally measuring 2 Acres 09 Guntas] Situated at Kuduvathi Village, Nandi Hobli, Chikkaballapur Taluk and District, and bounded on, East by: Property belongs to Sri. K. Shyama Raju i.e., Survey. No. 192/2, West by: Property belongs to Sri. K. Shyama Raju i.e., Survey. No. 181, North by: Property bearing Survey. No. 192/3 and South by: Property bearing Survey. No. 176.

V KRISHNA MURTHY, ADVOCATE,
No.30, "Kanaka Mandir", 1st Floor,
5th Main Road, Gandhinagar,
Bangalore – 560 009. (M) 8971837209
Email: advkmurthy@gmail.com

ಹೊಸ ವರ್ಷ: ಪೊಲೀಸ್ ಕಣ್ಗಾವಲು

ಬೆಂಗಳೂರು: ಹೊಸ ವರ್ಷಾಚರಣೆಗೆ ಸಿಲಿಕಾನ್ ಸಿಟಿ ಸಜ್ಜಾಗುತ್ತಿದ್ದು, ಸೂಕ್ಷ್ಮ ಪ್ರದೇಶ ಹಾಗೂ ಸಂಭ್ರಮಾಚರಣೆ ನಡೆಯುವ ರಸ್ತೆಗಳಲ್ಲಿ ಈ ಬಾರಿ ಹೆಚ್ಚಿನ ಭದ್ರತೆಗೆ ಪೊಲೀಸರು ಮುಂದಾಗಿದ್ದಾರೆ.

ಯಾವುದೇ ಅಹಿತಕರ ಘಟನೆಯೂ ನಡೆಯದಂತೆ ನಿಗಾ ವಹಿಸುವಂತೆ ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ.

ಹೊಸ ವರ್ಷಾಚರಣೆ ವಿಷಯದಲ್ಲಿ ಪೊಲೀಸ್ ಆಯುಕ್ತರು ನಿರಂತರ ಸಭೆ ನಡೆಸುತ್ತಿದ್ದು, ಮಂಗಳವಾರವೂ ಮತ್ತೊಂದು ಸುತ್ತಿನ ಸಭೆ ನಡೆಸಿ ಭದ್ರತೆಯ ಮಾಹಿತಿ ಪಡೆದುಕೊಂಡರು.

ಡಿ.31ರಂದು ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆಯಲ್ಲಿ ಹೊಸ ವರ್ಷಾಚರಣೆಗಾಗಿ ಈ ವರ್ಷವೂ ಯುವಕರ ದಂಡೇ ಸೇರುವ ನಿರೀಕ್ಷೆಯಿದೆ. ಆ ರಸ್ತೆಗಳಲ್ಲಿ ಯಾವೆಲ್ಲಾ ರೀತಿಯಲ್ಲಿ ನಿಗಾ ವಹಿಸಬೇಕು, ಹೆಚ್ಚುವರಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆ, ಸಿಬ್ಬಂದಿ ನಿಯೋಜನೆ ಕುರಿತು ಆಯುಕ್ತರು ಸಲಹೆ–ಸೂಚನೆಗಳನ್ನು ನೀಡಿದರು.

31ರ ಸಂಜೆ 5ರಿಂದಲೇ ಮೇಲ್ಸೇತುವೆಗಳಲ್ಲಿ ವಾಹನ ಸಂಚಾರ ನಿಷೇಧದ ಕುರಿತು ಸಭೆಯಲ್ಲಿ ಸಮಾಲೋಚನೆ ನಡೆಸಲಾಗಿದೆ. ಸಂಭ್ರಮಾಚರಣೆ ವೇಳೆ ಹೆಣ್ಣುಮಕ್ಕಳು ಹಾಗೂ ಮಹಿಳೆಯರಿಗೆ ಕಿರುಕುಳ ನೀಡುವ ಕಿಡಿಗೇಡಿಗಳನ್ನು ತಕ್ಷಣವೇ ವಶಕ್ಕೆ ಪಡೆಯಬೇಕು ಎಂದು ಸಿಬ್ಬಂದಿಗೆ ಸೂಚನೆ ನೀಡಲಾಗಿದೆ.

ಗೋಲ್ ಮೀನು ₹2.34 ಲಕ್ಷಕ್ಕೆ ಮಾರಾಟ



ಉಡುಪಿ: ಆಳ ಸಮುದ್ರ ಮೀನುಗಾರಿಕೆ ಮಾಡುವಾಗ ಮೀನುಗಾರರ ಬಲೆಗೆ ಗೋಲ್ ಮೀನು ಬಿದ್ದಿದೆ. ಮಲ್ಪೆಯ ಮೀನುಗಾರಿಕಾ ಬಂದರಿನಲ್ಲಿ ನಡೆದ ಹರಾಜಿನಲ್ಲಿ 22 ಕೆ.ಜಿ ತೂಕದ ಈ ಮೀನು ₹2.34 ಲಕ್ಷಕ್ಕೆ ಮಾರಾಟ ವಾಗಿದೆ. ಗೋಲ್ ಮೀನು ಔಷಧಗಳ ತಯಾರಿಕೆಯಲ್ಲಿ ಬಳಕೆಯಾಗುತ್ತದೆ. ಕಡಲಿನಲ್ಲಿ ಬಹಳ ಅಪರೂಪಕ್ಕೆ ಸಿಗುತ್ತದೆ. ಹಾಗಾಗಿ, ಬೆಲೆ ದುಬಾರಿ ಎನ್ನುತ್ತಾರೆ ಮೀನುಗಾರರು. ಕೆಲವು ತಿಂಗಳ ಹಿಂದೆಯೂ ಮಲ್ಪೆ ಮೀನುಗಾರರಿಗೆ ಹಲವು ಗೋಲ್ ಮೀನು ಸಿಕ್ಕಿದ್ದವು.

ಹಳದಿ ಮಾರ್ಗ

ಜುಲೈ–ಆಗಸ್ಟ್‌ನಲ್ಲಿ ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಗುರಿ

ಸಿವಿಲ್ ಕಾಮಗಾರಿ ಬಹುತೇಕ ಅಂತಿಮ



ಹೊಸೂರು ರಸ್ತೆಯಲ್ಲಿ ಹಳದಿ ಮಾರ್ಗದ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿರುವುದು –ಪ್ರಜಾವಾಣಿ ಚಿತ್ರಗಳು/ರಂಜು ಪಿ.

₹468 ಕೋಟಿ ಪ್ಯಾಕೇಜ್‌1ರ (ಬೊಮ್ಮಸಂದ್ರ– ಬಿರಟೇನ ಅಗ್ರಹಾರ) ಕಾಮಗಾರಿಯ ಅಂದಾಜು ವೆಚ್ಚ

₹492 ಕೋಟಿ ಪ್ಯಾಕೇಜ್–2ರ (ಬಿರಟೇನ ಅಗ್ರಹಾರ–ಬೊಮ್ಮನಹಳ್ಳಿ) ಅಂದಾಜು ವೆಚ್ಚ

₹797.29 ಕೋಟಿ ಪ್ಯಾಕೇಜ್–3ರ (ಬೊಮ್ಮಹಳ್ಳಿ–ಆರ್.ವಿ.ರಸ್ತೆ) ಅಂದಾಜು ವೆಚ್ಚ

18 ಕಿ.ಮೀ ಆರ್.ವಿ. ರಸ್ತೆ–ಬೊಮ್ಮಸಂದ್ರ ಕಾರಿಡಾರ್ ಉದ್ದ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಆರ್.ವಿ.ರಸ್ತೆ– ಬೊಮ್ಮಸಂದ್ರ ಮಾರ್ಗದ (ರೀಚ್–5) ಸಿವಿಲ್ ಕಾಮಗಾರಿ ಮೂರು ಪ್ಯಾಕೇಜ್‌ಗಳಲ್ಲಿ ನಡೆಯುತ್ತಿದ್ದು, ಎಲ್ಲಾ ಪ್ಯಾಕೇಜ್ ಕಾಮಗಾರಿಗಳೂ ಅಂತಿಮ ಹಂತಕ್ಕೆ ತಲುಪಿವೆ.

ಬೆಂಗಳೂರು ಮೆಟ್ರೊ ರೈಲು ನಿಗಮವು(ಬಿಎಂಆರ್‌ಸಿಎಲ್) ರೀಚ್–5 ಕಾಮಗಾರಿಯನ್ನು ಮೂರು ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ, 2018ರ ಏಪ್ರಿಲ್‌ನಲ್ಲಿ ಕಾಮಗಾರಿ ಆರಂಭಿಸಿದೆ. ಮಳೆ ಮತ್ತು ಕೋವಿಡ್ ಅಲೆಗಳ ನಡುವೆ ಪಿಲ್ಲರ್‌ಗಳ ನಿರ್ಮಾಣ ಮತ್ತು ವಯಡಕ್ಟ್ ಅಳವಡಿಕೆ ಕಾಮಗಾರಿ ಕುಂಟುತ್ತಾ ಸಾಗಿ ಈಗ ಅಂತಿಮ ಹಂತಕ್ಕೆ ಬಂದಿದೆ. ಹಳಿಗಳ ಜೋಡಣೆ ಕಾಮಗಾರಿಯೂ ಪೂರ್ಣಗೊಂಡಿದೆ.



ಬೊಮ್ಮಸಂದ್ರದಿಂದ ಬಿರಟೇನ ಅಗ್ರಹಾರ ತನಕದ ಮೊದಲ ಪ್ಯಾಕೇಜ್‌ನ ಸಿವಿಲ್ ಕಾಮಗಾರಿ ಶೇ 98.95ರಷ್ಟು ಪೂರ್ಣಗೊಂಡಿದ್ದರೆ, ಬಿರಟೇನ ಅಗ್ರಹಾರದಿಂದ ಬೊಮ್ಮನಹಳ್ಳಿ ತನಕದ ಎರಡನೇ ಪ್ಯಾಕೇಜ್ ಸಿವಿಲ್ ಕಾಮಗಾರಿ ಶೇ 98.97ರಷ್ಟು ಪೂರ್ಣಗೊಂಡಿದೆ.

ಬೊಮ್ಮನಹಳ್ಳಿಯಿಂದ ಆರ್.ವಿ.ರಸ್ತೆ ತನಕದ ಮೂರನೇ ಪ್ಯಾಕೇಜ್ ಕಾಮಗಾರಿ ಶೇ 96.27ರಷ್ಟು ಪೂರ್ಣ ಗೊಂಡಿದೆ. ಮೊದಲ ಎರಡು ಪ್ಯಾಕೇಜ್‌ಗಳಲ್ಲಿ ಪಿಲ್ಲರ್ ಮತ್ತು ವಯಡಕ್ಟ್ ಅಳವಡಿಕೆ ಕಾಮಗಾರಿಯಾದರೆ, ಮೂರನೇ ಪ್ಯಾಕೇಜ್‌ನಲ್ಲಿ ಅವುಗಳ ಜತೆಗೆ ಮೆಟ್ರೊ ರೈಲು ಮಾರ್ಗದ ಕೆಳಗೆ ಕಾರು ಮತ್ತು ಬಸ್‌ಗಳ ಸಂಚಾರಕ್ಕೂ ಮಾರ್ಗಗಳನ್ನು(ಡಬಲ್ ಡೆಕ್ಕರ್) ನಿರ್ಮಿಸಲಾಗುತ್ತಿದೆ.

ಒಂದೇ ಪಿಲ್ಲರ್ ಮೇಲೆ ಮೆಟ್ರೊ ರೈಲು ಮತ್ತು ವಾಹನಗಳ ಸಂಚಾರಕ್ಕೆ ಮಾರ್ಗಗಳನ್ನು ನಿರ್ಮಿಸುತ್ತಿರುವುದು ದಕ್ಷಿಣ ಭಾರತದಲ್ಲೇ ಮೊದಲು ಎಂಬ ಹೆಗ್ಗಳಿಕೆಯನ್ನೂ ಈ ಮಾರ್ಗ ಒಳಗೊಂಡಿದೆ. ನಿಲ್ದಾಣಗಳ ನಿರ್ಮಾಣ ಸೇರಿ ಅಂತಿಮ ಹಂತದಲ್ಲಿರುವ ಸಿವಿಲ್ ಕಾಮಗಾರಿ ಪೂರ್ಣಗೊಂಡರೆ, ಸಿಗ್ನಲಿಂಗ್ ಅಳವಡಿಕೆ ಕಾಮಗಾರಿ ಚುರುಕಾಗಲಿದೆ. ಎಲ್ಲಾ ಕಾಮಗಾರಿಗಳು ಅಂತಿಮ ಹಂತಕ್ಕೆ ತಲುಪಿದಾಗ ಪರೀಕ್ಷಾರ್ಥ ಸಂಚಾರ ಆರಂಭಿಸುವ ಬಗ್ಗೆ ಆಡಳಿತ ಮಂಡಳಿ ಆಲೋಚನೆ ನಡೆಸುತ್ತದೆ ಎನ್ನುತ್ತಾರೆ ಬಿಎಂಆರ್‌ಸಿಎಲ್ ಅಧಿಕಾರಿಗಳು.



ಈ ಮಾರ್ಗದ ಸಿವಿಲ್ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಜುಲೈ ಅಥವಾ ಆಗಸ್ಟ್ ನಲ್ಲಿ ಈ ಮಾರ್ಗದಲ್ಲಿ ಮೆಟ್ರೊ ರೈಲುಗಳ ಕಾರ್ಯಾಚರಣೆ ನಡೆಸುವ ಗುರಿ ಹೊಂದಿದ್ದೇವೆ.

ಅಂಜುಂ ಪರ್ವೇಜ್, ಎಂ.ಡಿ , ಬಿಎಂಆರ್‌ಸಿಎಲ್



ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣ ವಿಶೇಷ ವಿನ್ಯಾಸದೊಂದಿಗೆ ನಿರ್ಮಾಣವಾಗುತ್ತಿರುವುದು

ಹೊಸೂರಿಗೆ ವಿಸ್ತರಣೆ: ತಮಿಳುನಾಡಿನ ಹೊಣೆ

ಬೊಮ್ಮಸಂದ್ರದಿಂದ ಹೊಸೂರು ತನಕ ಈ ಮಾರ್ಗವನ್ನು ವಿಸ್ತರಣೆ ಮಾಡುವ ಪ್ರಸ್ತಾಪ ಇದ್ದು, ಕಾರ್ಯಸಾಧ್ಯತಾ ಅಧ್ಯಯನವೇ ಇನ್ನೂ ಆರಂಭವಾಗಿಲ್ಲ.

'ಹೊಸೂರು ತನಕ ಮೆಟ್ರೊ ರೈಲು ಮಾರ್ಗ ವಿಸ್ತರಣೆಗೆ ಕರ್ನಾಟಕದಿಂದ ನಿರಾಕ್ಷೇಪಣೆಯನ್ನಷ್ಟೇ ನೀಡಲು ಸಾಧ್ಯ. ಕಾರ್ಯಸಾಧ್ಯತಾ ಅಧ್ಯಯನ ಸೇರಿ ಬೇರೆಲ್ಲಾ ಜವಾಬ್ದಾರಿಯನ್ನು ತಮಿಳುನಾಡು ಸರ್ಕಾರವೇ ನೋಡಿಕೊಳ್ಳಬೇಕಾಗುತ್ತದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಹೇಳಿದರು.

ಹಳದಿ ಮಾರ್ಗದ ನಿಲ್ದಾಣಗಳು

- ಆರ್.ವಿ.ರಸ್ತೆ
- ಬಿಟಿಎಂ ಬಡಾವಣೆ
- ಸಿಲ್ಕ್ ಬೋರ್ಡ್
- ಎಚ್‌ಎಸ್‌ಆರ್ ಬಡಾವಣೆ
- ಆಕ್ಸ್‌ಫರ್ಡ್ ಕಾಲೇಜು
- ಮುನೇಶ್ವರ ನಗರ
- ಚಿಕ್ಕಬೇಗೂರು
- ಬಸಾಪುರ ರಸ್ತೆ
- ಹೊಸ ರೋಡ್
- ಎಲೆಕ್ಟ್ರಾನಿಕ್ ಸಿಟಿ–1
- ಎಲೆಕ್ಟ್ರಾನಿಕ್ ಸಿಟಿ–2
- ಹುಸ್ಕೂರು ರಸ್ತೆ
- ಹೆಬ್ಬಗೋಡಿ
- ಬೊಮ್ಮಸಂದ್ರ

ನಿಲ್ದಾಣಗಳೆಲ್ಲಾ ಹಳದಿ

ಈ ಮಾರ್ಗದ ಎಲ್ಲಾ 14 ನಿಲ್ದಾಣಗಳ ಚಾವಣಿಗಳೂ ಹಳದಿ ಬಣ್ಣದಿಂದಲೇ ಕೂಡಿವೆ. ಎಲೆಕ್ಟ್ರಾನಿಕ್ ಸಿಟಿ ಬಳಿ ನಿರ್ಮಾಣವಾಗುತ್ತಿರುವ ನಿಲ್ದಾಣ ಮಾತ್ರ ವಿಶೇಷ ವಿನ್ಯಾಸ ಒಳಗೊಂಡಿದೆ.

ಈ ನಿಲ್ದಾಣವನ್ನು ಇನ್ಫೊಸಿಸ್ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡುತ್ತಿದ್ದು, ಐ.ಟಿ ಕಂಪನಿಗಳ ಕಟ್ಟಡಗಳನ್ನು ಹೋಲುವಂತೆಯೇ ವಿನ್ಯಾಸಗೊಳಿಸಿ ನಿರ್ಮಿಸಲಾಗುತ್ತಿದೆ.

ಸುದ್ದಿ 2 ನಿಮಿಷ

'ಯೆಝ್ಡಿ' ಪದ ಬಳಕೆಗೆ ನಿರ್ಬಂಧ

ಬೆಂಗಳೂರು: 'ಯೆಝ್ಡಿ' ಪದ ಸೇರಿ ಅದಕ್ಕೆ ಸಂಬಂಧಿಸಿದ ಯಾವುದೇ ಟ್ರೇಡ್‌ಮಾರ್ಕ್‌ಗಳನ್ನು ರುಸ್ತಂಜೀ ಗ್ರೂಪ್‌ನ ಬೊಮನ್ ಆರ್. ಇರಾನಿ, ಕ್ಲಾಸಿಕ್ ಲೆಜೆಂಡ್ಸ್ ಪ್ರೈವೇಟ್ ಲಿಮಿಟೆಡ್‌ನವರು ಬಳಸುವುದಕ್ಕೆ ಹೈಕೋರ್ಟ್ ನಿರ್ಬಂಧ ವಿಧಿಸಿದೆ.

ದಿವಾಳಿ ಹಂತದಲ್ಲಿರುವ ಐಡಿಯಲ್ ಜಾವಾ(ಇಂಡಿಯಾ) ಲಿಮಿಟೆಡ್‌ನ 'ಯೆಝ್ಡಿ'(ಪದ ಮತ್ತು ಸಾಧನ) ಗುರುತು ಸ್ವತಂತ್ರವಾಗಿ ಉಳಿದಿವೆ ಎಂದು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರು ಘೋಷಿಸಿದರು. ಆದರೂ ಈ ನಿರ್ಬಂಧವನ್ನು ಪ್ರಶ್ನಿಸಲು ಅವಕಾಶ ಕಲ್ಪಿಸಿ ಈ ಆದೇಶವನ್ನು ಒಂದು ತಿಂಗಳ ಕಾಲ ಪೀಠ ತಡೆಹಿಡಿದಿದೆ.

ಕ್ಲಾಸಿಕ್ ಲೆಜೆಂಡ್ಸ್‌ನ ನಿರ್ದೇಶಕರಲ್ಲಿ ಒಬ್ಬರಾದ ಬೊಮನ್ ಇರಾನಿ, 2013-15ರಲ್ಲಿ 'ಯೆಝ್ಡಿ' ಟ್ರೇಡ್‌ಮಾರ್ಕ್ ನೋಂದಾಯಿಸಿದ್ದರು. ಬಳಿಕ ಜನವರಿ 2022 ರಲ್ಲಿ 'ಯೆಝ್ಡಿ' ಎಂಬ ಬ್ರ್ಯಾಂಡ್ ಹೆಸರಿನೊಂದಿಗೆ ಹೊಸ ಬೈಕ್ ಬಿಡುಗಡೆ ಮಾಡಿದ್ದರು. 1969ರಲ್ಲಿ ಐಡಿಯಲ್ ಜಾವಾ (ಇಂಡಿಯಾ) ಲಿಮಿಟೆಡ್ 'ಯೆಝ್ಡಿ' ಮಾರ್ಕ್ ನೋಂದಣಿ ಮಾಡಿಸಿತ್ತು.

ಐಡಿಯಲ್ ಜಾವಾವನ್ನು ಪ್ರಾರಂಭಿಸಿದ ಬೊಮನ್ ಇರಾನಿ ಅವರ ತಂದೆ ರುಸ್ತಮ್ ಎಸ್. ಇರಾನಿ ಅವರು 'ಯೆಝ್ಡಿ' ಎಂಬ ಹೆಸರು ನೋಂದಾಯಿಸಿದ್ದರು. ರುಸ್ತಂ ಅವರ ನಿಧನದ ನಂತರ, ಅವರ ಮಗನಿಗೆ 'ಯೆಝ್ಡಿ' ಪದದ ಹಕ್ಕುಸ್ವಾಮ್ಯ ಸೇರಬೇಕು ಎಂಬುದು ಅವರ ವಾದ. ಐಡಿಯಲ್ ಜಾವಾ ಕಂಪನಿಯು ಟ್ರೇಡ್‌ಮಾರ್ಕ್ ನವೀಕರಿಸಿಲ್ಲ. ಆದ್ದರಿಂದ ಟ್ರೇಡ್‌ಮಾರ್ಕ್ ಪ್ರಾಧಿಕಾರದ ಮುಂದೆ ಬೇರೆಯವರೂ ನೋಂದಾಯಿಸಲು ಅವಕಾಶ ಇದೆ ಎಂದೂ ವಾದಿಸಲಾಯಿತು.

ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಕೆ.ಆರ್.ಪುರ: ಅಡುಗೆ ಅನಿಲ ಹಾಗೂ ದಿನಬಳಕೆ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ, ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ ಬಳಿ ರಾಜ್ಯ ಸರ್ಕಾರದ ವಿರುದ್ಧ ಮಂಗಳವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮೋಹನ್, 'ಬಿಜೆಪಿ ಸರ್ಕಾರದ ದುರಾಡಳಿತದ ಪರಿಣಾಮ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ದರ ಹೆಚ್ಚಳವಾಗಿದೆ. ಇದರಿಂದಾಗಿ ಅಗತ್ಯ ವಸ್ತುಗಳು ಬೆಲೆ ಏರಿಕೆಯಾಗುತ್ತಿದೆ. ಇದೇ ರೀತಿ ಬೆಲೆ ಏರಿಕೆಯಾದಲ್ಲಿ ಬಡ ಹಾಗೂ ಮಧ್ಯಮ ವರ್ಗದ ಜನರು ತತ್ತರಿಸಿ ಹೋಗುತ್ತಾರೆ. ಕುಟುಂಬ ನಿರ್ವಹಣೆ ಕಷ್ಟವಾಗಲಿದೆ' ಎಂದರು.

ಕಾಂಗ್ರೆಸ್ ಪಕ್ಷದ ಮಹಿಳಾ ಬ್ಲಾಕ್ ಅಧ್ಯಕ್ಷೆ ಸಾಕಮ್ಮ, 'ಯುಪಿಎ ಸರ್ಕಾರದ ಅವಧಿಯಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿರಲಿಲ್ಲ. ಪ್ರತಿಯೊಬ್ಬರೂ ನೆಮ್ಮದಿಯ ಜೀವನ ನಡೆಸುವಂತಹ ಪರಿಸ್ಥಿತಿ ಇತ್ತು. ಆದರೆ, ಬಿಜೆಪಿ ಸರ್ಕಾರ ಬಡವರ ನೆಮ್ಮದಿಯನ್ನು ಕಸಿದಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಆಗರ ಪ್ರಕಾಶ್, ಮಂಜುನಾಥ್, ವೆಂಕಟೇಶ್, ರತ್ನ ನಾರಾಯಣಸ್ವಾಮಿ, ಗಾಯತ್ರಿ ಇದ್ದರು.

'ಸಮಕಾಲೀನ ಜಗತ್ತಿಗೆ ಕನ್ನಡಿಯಾದ ಹಳೆಗನ್ನಡ'

ಡಾ.ಪದ್ಮಿನಿ ನಾಗರಾಜು ಅವರ ಮೂರು ಕೃತಿಗಳ ಬಿಡುಗಡೆ • ಡಾ.ಬಸವರಾಜ ಸಾದರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಗನ್ನಡ ಕೃತಿಗಳ ವಿಷಯಗಳನ್ನು ವರ್ತಮಾನದ ಕನ್ನಡಿಯಂತೆ ಡಾ.ಪದ್ಮಿನಿ ನಾಗರಾಜು ಚಿತ್ರಿಸಿದ್ದಾರೆ. ಚಿಂತನಪೂರ್ಣ ಲೇಖನಗಳು ಸಮಕಾಲೀನ ಜಗತ್ತಿಗೆ ಪ್ರಸ್ತುತವಾಗಿವೆ ಎಂದು ಬೆಂಗಳೂರು ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ.ಬಸವರಾಜ ಸಾದರ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಡಾ.ಪದ್ಮಿನಿ ನಾಗರಾಜು ಅವರ ಮೂರು ಕೃತಿಗಳಾದ 'ಕೋಣೆಯಾಚೆಗಿನ ಆಕಾಶ', 'ಎದೆಗೆ ಬೆಂಕಿ ಬಿದ್ದಾಗಿನ ಬೆಳಕು' ಹಾಗೂ 'ಅನಾವರಣ' ಕೃತಿಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮೂರು ಕೃತಿಗಳೂ ವೈಶಿಷ್ಟ್ಯಪೂರ್ಣವಾಗಿದ್ದು, ಮೂರು ರೀತಿಯ ಸಂವಹನ ಮಾಡುತ್ತವೆ. ಸಮಕಾಲೀನ ಜಗತ್ತಿನ ಅನಾವರಣ, ಸಮದೃಷ್ಟಿಯಿಂದ ನೋಡುವ ಭಾವನೆ, ಮಹಿಳಾಪರ ಕಾಳಜಿಯನ್ನು ಕಾಣಬಹುದು. ಅನೇಕ ಲೇಖನಗಳಲ್ಲಿ ನಿರ್ಭಿಡೆಯಾಗಿ ಸಮಸ್ಯೆಯನ್ನು ತೋರಿಸಲಾಗಿದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ವಸ್ತುನಿಷ್ಠ ವಿಶ್ಲೇಷಣೆ ನಡೆಸುವ ಸಂಶೋಧನಾತ್ಮಕ ಲೇಖನ ಇಲ್ಲಿದೆ ಎಂದು ವಿಶ್ಲೇಷಿಸಿದರು.

ಮುಜ್ರಾದಂತಹ ನೃತ್ಯ ಇಂದು ಅಮಾನವೀಯವಾಗಿರುವ ವಸ್ತುಸ್ಥಿತಿಯನ್ನು ವಿವರಿಸಲಾಗಿದೆ. ಯುದ್ಧಗಳ ಸಮಯದಲ್ಲಿ ನಡೆಯುವ ಅಮಾನವೀಯ ಅತ್ಯಾಚಾರಗಳ ಬಗ್ಗೆಯೂ ಧ್ವನಿ ಎತ್ತಲಾಗಿದೆ. ಅವರೆಲ್ಲ ಈಗ ಏನಾಗಿದ್ದಾರೆ ಎಂಬ ಪ್ರಶ್ನೆಗಳನ್ನು ಎತ್ತಿದ್ದಾರೆ. ಅಂತಹ ಹಲವು ಕುತೂಹಲಗಳು, ಪರಿಹಾರ ಹುಡುಕುವ ಮನೋಭಾವಗಳು ಕಾಣಸಿಗುತ್ತವೆ ಎಂದು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ ಜೋಶಿ, 'ಪದ್ಮಿನಿ ಅವರು ಅತ್ಯಂತ ಸೃಜನಶೀಲ ಬರಹಗಾರ್ತಿ. ಅವರ ಮೂರೂ ಕೃತಿಗಳಲ್ಲಿ ಶಿಕ್ಷಣ, ಯುವಜನರ ಆಸಕ್ತಿಗಳು ಮತ್ತು ಅವರ ನಡೆಗಳನ್ನು ಅತ್ಯಂತ ವಸ್ತುನಿಷ್ಠವಾಗಿ ಕಟ್ಟಿಕೊಟ್ಟಿದ್ದಾರೆ' ಎಂದರು.

ಕವಿ ಡಾ.ದೊಡ್ಡರಂಗೇಗೌಡ, ಲೇಖಕಿ ಡಾ.ಪದ್ಮಿನಿ ನಾಗರಾಜು, ವಿಕಾಸ ಪ್ರಕಾಶನದ ಆರ್.ಪೂರ್ಣಿಮಾ, ವಸಂತ ಪ್ರಕಾಶನ ಕೆ.ಎಸ್.ಮುರಳಿ, ನಿವೇದಿತಾ ಪ್ರಕಾಶನದ ಉಮೇಶ್ ನಾಗಮಂಡಲ ಉಪಸ್ಥಿತರಿದ್ದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಡಾ.ಪದ್ಮಿನಿ ನಾಗರಾಜು ಅವರ ಮೂರು ಕೃತಿಗಳನ್ನು ಬೆಂಗಳೂರು ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ.ಬಸವರಾಜ ಸಾದರ ಬಿಡುಗಡೆ ಮಾಡಿದರು. ದೊಡ್ಡರಂಗೇಗೌಡ, ಮಹೇಶ್ ಜೋಷಿ, ಪದ್ಮಿನಿ ನಾಗರಾಜು ಇದ್ದಾರೆ

ಕೃತಿಗಳ ಮಾಹಿತಿ

ಕೃತಿ:	ಕೋಣೆಯಾಚೆಗಿನ ಆಕಾಶ
ಪುಟಗಳು:	176
ಬೆಲೆ:	140
ಪ್ರಕಾಶನ:	ವಸಂತ ಪ್ರಕಾಶನ
ಕೃತಿ:	ಎದೆಗೆ ಬೆಂಕಿ ಬಿದ್ದಾಗಿನ ಬೆಳಕು
ಪುಟಗಳು:	72
ಬೆಲೆ:	80
ಪ್ರಕಾಶನ:	ವಿಕಾಸ ಪ್ರಕಾಶನ
ಕೃತಿ:	ಅನಾವರಣ
ಪುಟಗಳು:	124
ಬೆಲೆ:	150
ಪ್ರಕಾಶನ:	ನಿವೇದಿತಾ ಪ್ರಕಾಶನ

ಚಾರ್ಮಾಡಿ ಘಾಟಿ: ಅರಣ್ಯದಲ್ಲಿ ಬೆಂಕಿ

ಚಿಕ್ಕಮಗಳೂರು: ಜಿಲ್ಲೆಯ ಚಾರ್ಮಾಡಿ ಘಾಟಿ ಮಾರ್ಗದ ಬದಿಯ ಕಾಡಿನಲ್ಲಿ ಮಂಗಳವಾರ ಬೆಂಕಿ ಹೊತ್ತಿಕೊಂಡು ಪೊದೆಗಳು, ಗಿಡಗಳು, ಮರಗಳು ಆಹುತಿಯಾಗಿವೆ.

ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿದೆ. ಬೆಟ್ಟದಲ್ಲಿ ಉದ್ದಕ್ಕೂ ಬೆಂಕಿ ವ್ಯಾಪ್ತಿಸಿದೆ. ಚಾರ್ಮಾಡಿ ಭಾಗದಲ್ಲಿ ಬೆಂಕಿ, ಹೊಗೆ ಆವರಿಸಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

'ಸಾಂವಿಧಾನಿಕ ಮೀಸಲಾತಿ ರಕ್ಷಿಸಿ'

ಬೆಂಗಳೂರು: ಹಿಂದುಳಿದ ಸಮುದಾಯಗಳ ಸಾಂವಿಧಾನಿಕ ಮೀಸಲಾತಿ ಸೌಲಭ್ಯವನ್ನು ರಕ್ಷಿಸಬೇಕು ಎಂದು ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ಮಂಗಳವಾರ ಮನವಿ ಸಲ್ಲಿಸಿದೆ.

ವೇದಿಕೆ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್, 'ಕೆಲ ದಿನಗಳಿಂದ ಪ್ರವರ್ಗ 2ಎ ಪಟ್ಟಿಗೆ ಸೇರಿಸಬೇಕೆಂದು ಸರ್ಕಾರದ ಮೇಲೆ ಒತ್ತಡ ತರುವ ಹೋರಾಟ ಹಮ್ಮಿಕೊಳ್ಳಲಾಗಿದೆ. ಶೇ 15ರಷ್ಟು ಮೀಸಲಾತಿ ಹೊಂದಿರುವ ಪ್ರವರ್ಗ 2ಎದಲ್ಲಿ 102 ಅತಿ ಹಿಂದುಳಿದ ಸಮುದಾಯಗಳು ಈ ಸೌಲಭ್ಯ ಹಂಚಿಕೊಳ್ಳಬೇಕಿದೆ. ಈ ಮೀಸಲಾತಿಯು ಧ್ವನಿ ಇಲ್ಲದ ಸಮುದಾಯಗಳಿಗೆ ಇದುವರೆಗೂ ತಲುಪಿಲ್ಲ. ಇತ್ತೀಚೆಗೆ ಪ್ರಬಲ ಸಮುದಾಯಗಳು 2ಎ ಪಟ್ಟಿಯಲ್ಲಿ ಸೇರಿಸಬೇಕೆಂದು ಹೋರಾಟ ಮಾಡುತ್ತಿವೆ. ಸರ್ಕಾರ ಇದಕ್ಕೆ ಅವಕಾಶ ನೀಡಬಾರದು' ಎಂದು ಒತ್ತಾಯಿಸಿದರು.



ಮುಂಬೈನಿಂದ ಸೈಕಲ್ ಸವಾರಿ ಮಾಡಿಕೊಂಡು ಬೆಂಗಳೂರಿಗೆ ಬಂದ ನಟ ಮಿಲಿಂದ್ ಸೋಮನ್

ನಗರದಲ್ಲಿ ಹಸಿರು ಪ್ರಮಾಣ ಕುಸಿತ: ನಟ ಮಿಲಿಂದ್ ಸೋಮನ್

ಬೆಂಗಳೂರು: 'ಉದ್ಯಾನನಗರಿ ಬೆಂಗಳೂರಿಗೆ ದೇಶದಾದ್ಯಂತ ಜನರು ವಲಸೆ ಬರುತ್ತಿದ್ದು, ಸಂಚಾರ ದಟ್ಟಣೆಯಿಂದ ಹಸಿರು ಪ್ರಮಾಣ ಕುಸಿಯುತ್ತಿದೆ' ಎಂದು ನಟ ಮಿಲಿಂದ್ ಸೋಮನ್ ಆತಂಕ ವ್ಯಕ್ತಪಡಿಸಿದರು.

ಬ್ಯಾಂಕ್ ಆಫ್ ಬರೋಡಾ ಪರಿಸರ ಸ್ನೇಹಿ ಸಾರಿಗೆಯನ್ನು ಪ್ರೋತ್ಸಾಹಿಸಲು 'ಗ್ರೀನ್ ರೈಡ್- ಸ್ವಚ್ಛ ವಾತಾವರಣದತ್ತ ಒಂದು ಹೆಜ್ಜೆ' ಎಂಬ ಅಭಿಯಾನದ 2ನೇ ಆವೃತ್ತಿಯನ್ನು ಡಿ. 19ರಂದು ಮುಂಬೈನಲ್ಲಿ ಚಾಲನೆ ನೀಡಲಾಗಿತ್ತು. ಈ ಅಭಿಯಾನದ ಭಾಗವಾಗಿ ಅವರು ಮುಂಬೈನಿಂದ ಬೆಂಗಳೂರಿಗೆ 1,400 ಕಿ.ಮೀ ಸೈಕಲ್ ಸವಾರಿ ಮಾಡಿಕೊಂಡು ಭಾನುವಾರ ಟ್ರಿನಿಟಿ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಗೆ ಬಂದು ಗಿಡ ನೆಡುವುದರ ಮೂಲಕ ಮುಕ್ತಾಯಗೊಳಿಸಿದರು.

'ಎಲ್ಲರೂ ಸುಸ್ಥಿರ ಮತ್ತು ಪರಿಸರ ಸ್ನೇಹಿ ಸಾರಿಗೆ ಮಾದರಿಗಳನ್ನು ಹೆಚ್ಚು ಉಪಯೋಗಿಸಬೇಕು' ಎಂದರು.

ಬ್ಯಾಂಕ್ ಆಫ್ ಬರೋಡದ ವಲಯ ಮುಖ್ಯಸ್ಥ ಮತ್ತು ಜನರಲ್ ಮ್ಯಾನೇಜರ್ ಸುಧಾಕರ ಡಿ. ನಾಯಕ್ ಮಾತನಾಡಿ, 'ಪ್ರತಿಯೊಬ್ಬರು ಪರಿಸರವನ್ನು ಉಳಿಸಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಪ್ರತಿ ಹೆಜ್ಜೆಯೂ ಸುಸ್ಥಿರ ಜೀವನ ಶೈಲಿಯತ್ತ ತೆಗೆದುಕೊಂಡು ಹೋಗುತ್ತಿದ್ದು, ಪರಿಸರ ಸಂರಕ್ಷಣೆಗೆ ದೊಡ್ಡ ಕೊಡುಗೆ ನೀಡಬಲ್ಲದು' ಎಂದರು.

ಮೈಸೂರು ರೇಸ್

ಮೊಗಲ್ ಗೆಲ್ಲುವ ನಿರೀಕ್ಷೆ

ಆರ್ ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೊಗಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:30ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ :

1ನೇ ರೇಸ್: ಔರೆಲಿಯಾ 1, ಎನ್ ಆರ್ ಐ ಬ್ಲ್ಯೂ 3, ಸ್ಪಿರಿಚುಯಲ್ ಫೋರ್ಸ್ 4
2ನೇ ರೇಸ್: ಸ್ವಾಗತಮ್ 4, ಕೋಆಲಾ 1, ಸ್ಪಾರ್ಕ್ಲಿಂಗ್ ನೈಟ್ 11
3ನೇ ರೇಸ್: ಲೆಜನರಿ 1, ಕಂಟ್ರೀಸ್ ಮೇಜರ್ 5, ಫೆಸ್ಟಿವ್ ಸ್ಟಾರ್ 9
4ನೇ ರೇಸ್: ಟವರ್ ಕ್ವೆಸ್ಟ್ 5, ಮಿರಾಕಿ 4, ಕಂಟ್ರೀಸ್ ಟ್ಯಾಲೆಂಟ್ 14
5ನೇ ರೇಸ್: ಇಂಡಿಯನ್ ಗ್ಲೋರಿ 11, ಸರ್ಕಸ್ ಕ್ವೀನ್ 9, ತೆನಾಲಿ 3
6ನೇ ರೇಸ್: ವಿವಾ ಲಾ ವಿಡಾ 7, ಸೆಫಿನಾ 4, ಫಸ್ಟ್ ಇಂಪ್ರೆಷನ್ 5
7ನೇ ರೇಸ್: ಕ್ವಾಂಡೊ ಕ್ವಾಂಡೊ 6, ಅನ್‌ಇಮ್ಯಾಜಿನಬಲ್ 3, ಕಮ್ ಅಲೈವ್ 1
8ನೆ ರೇಸ್: ಮೊಗುಲ್ 6, ಸಡೀಕ್ 8, ಮೇಕ್ ಮೈ ವೇ 5
9ನೇ ರೇಸ್: ರಿಯಲ್ ಶೋ 3, ಅಮೇಜಿಂಗ್ ಸಫಾರಿ 4, ಕಿಂಗ್ ಆಫ್ ದಿ ಜಂಗಲ್ 1
10ನೇ ರೇಸ್: ಆಕರ್ 4, ಫನ್ ಅಂಡ್ ಲಾಫ್ಟರ್ 2, ಕಂಟ್ರಿ ಮ್ಯಾಜಿಕ್ 15

ಉತ್ತಮ ಬೆಟ್: ಸ್ವಾಗತಮ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
6,7,8,9,10	2,3,4	5,6,7	8,9,10

ಬಸವಲಿಂಗಪ್ಪ ಮಹಾಪರಿನಿರ್ವಾಣ: ಜಾಥಾ

ಪ್ರಜಾವಾಣಿ ವಾರ್ತೆ

ಯಲಹಂಕ: ಮಾಜಿ ಸಚಿವ ಬಿ. ಬಸವಲಿಂಗಪ್ಪ ಅವರ 37ನೇ ಮಹಾಪರಿನಿರ್ವಾಣದ ಅಂಗವಾಗಿ ದಲಿತ ಸಂಘರ್ಷ ಸಮಿತಿಯು (ಸಮತಾವಾದ) ಮಂಗಳವಾರ ಕಾಲ್ನಡಿಗೆ ಜಾಥಾ ನಡೆಸಿತು.

ಸಮಿತಿಯ ಅಧ್ಯಕ್ಷ ಎಚ್. ಮಾರಪ್ಪ ನೇತೃತ್ವದಲ್ಲಿ ಹಳೇ ನಗರದ ಬಸವಲಿಂಗಪ್ಪ ಬಸ್ ನಿಲ್ದಾಣದಿಂದ ಮೆರವಣಿಗೆಯಲ್ಲಿ ತೆರಳಿದ ಸಮಿತಿಯ ಕಾರ್ಯಕರ್ತರು, ಸಂತೆವೃತ್ತ ಮತ್ತು ಪೊಲೀಸ್ ಠಾಣೆ ವೃತ್ತದ ಮಾರ್ಗವಾಗಿ ಅಲ್ಲಾಳಸಂದ್ರದಲ್ಲಿರುವ ಅವರ ಸಮಾಧಿ ಸ್ಥಳಕ್ಕೆ ತೆರಳಿದರು. ಇದೇ ಸಂದರ್ಭದಲ್ಲಿ ಬೌದ್ಧ ಬಿಕ್ಕುಗಳು ಬೌದ್ಧ ಸಂಪ್ರದಾಯದಂತೆ ವಿಶೇಷಪೂಜೆ ನೆರವೇರಿಸಿದರು. ಬಸವಲಿಂಗಪ್ಪ ಅವರ ಕುಟುಂಬದ ಸದಸ್ಯರು, ಮುಖಂಡರು ಹಾಗೂ ಅಭಿಮಾನಿಗಳು ಕಾಂಗ್ರೆಸ್ ಮತ್ತು ದಲಿತ ಸಂಘಟನೆಗಳ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಬಿ.ಪ್ರಸನ್ನಕುಮಾರ್, 'ಮಹಾನ್ ಹೋರಾಟಗಾರರಾಗಿದ್ದ ನಮ್ಮ ತಂದೆ ಬಸವಲಿಂಗಪ್ಪ, ಬಡವರು ಮತ್ತು ದೀನದಲಿತರ ಪರವಾದ ಚಿಂತನೆಗಳನ್ನು ಹೊಂದಿದ್ದರು. ಅವರು ನಡೆದುಬಂದ ಹಾದಿಯಲ್ಲಿ ಸಾಗಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ನಾಲ್ಕು ಬಾರಿ ಯಲಹಂಕ ಕ್ಷೇತ್ರದ ಶಾಸಕನಾಗಿದ್ದ ಅವಧಿಯಲ್ಲಿ ನನಗಾಗಿ ಏನನ್ನೂ ಮಾಡದಿದ್ದರೂ ಇತರರಿಗೆ ಸಹಾಯಮಾಡಿದ ತೃಪ್ತಿಯಿದೆ' ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ರವಿಕುಮಾರ್, ಎಂ.ಆನಂದ ಕುಮಾರ್, ಎನ್.ಎಂ.ಶ್ರೀನಿವಾಸ್, ಎನ್.ತಿಮ್ಮರಾಜು, ಸಿ.ಶಶಿಕುಮಾರ್, ದಲಿತ ಮುಖಂಡ ಮುನಿ ಆಂಜಿನಪ್ಪ ಮತ್ತಿತರರು ಇದ್ದರು.



ಮಾಜಿ ಸಚಿವ ಬಿ.ಬಸವಲಿಂಗಪ್ಪ ಅವರ ಮಹಾಪರಿನಿರ್ವಾಣ ದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿ (ಸಮತಾವಾದ) ವತಿಯಿಂದ ಬಿ.ಬಸವಲಿಂಗಪ್ಪ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಮಾಜಿ ಶಾಸಕ ಬಿ. ಪ್ರಸನ್ನಕುಮಾರ್, ಸಮಿತಿ ಸಂಸ್ಥಾಪನಾಧ್ಯಕ್ಷ ಎಚ್. ಮಾರಪ್ಪ ಹಾಗೂ ಪದಾಧಿಕಾರಿಗಳು ಇದ್ದಾರೆ

ಚಿತ್ರಾವಳಿ



ನೆಲಮಂಗಲದ ಹರ್ಷ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವವನ್ನು ಮುಖ್ಯಮಂತ್ರಿಯ ಕಾರ್ಯದರ್ಶಿ ಜಯರಾಮ್ ರಾಯ್‌ಪುರ ಉದ್ಘಾಟಿಸಿದರು. ಪ್ರಾಂಶುಪಾಲೆ ಬಿಂದು ಶರ್ಮಾ, ಹರ್ಷ ಸಮೂಹದ ಅಧ್ಯಕ್ಷ ಎಸ್.ಶಿವಕುಮಾರ್, ಉಪಾಧ್ಯಕ್ಷೆ ಗಿರಿಜಾ ಶಿವಕುಮಾರ್, ಪೂರ್ವ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಎಲ್.ಪೂರ್ಣಿಮಾ ಇದ್ದಾರೆ



ಎಸ್‌ಎಸ್‌ಕೆ ಕೋ ಆಪರೇಟಿವ್ ಸೊಸೈಟಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸೊಸೈಟಿ ಅಧ್ಯಕ್ಷರಾದ ಮಗಜಿ ಬಾದ್ ಕೆ. ಸೋಮಶೇಖರ್, ಉಪಾಧ್ಯಕ್ಷ ಸತೀಶ್.ಈ. ವಾಗೇಲೆ, ನಿರ್ದೇಶಕರಾದ ಎಸ್. ಅನಂತ್, ಡಿ. ಎಂ. ರಾಮ್, ಡಿ.ಎಂ. ಶ್ರೀನಿವಾಸ್ ಇದ್ದರು



ಬಸವ ಸಮಿತಿ ಸಭಾಂಗಣದಲ್ಲಿ ಭಾನುವಾರ ನಡೆದ 'ಸ್ಪಿರಿಟ್ ಆಫ್ ಇಂಡಿಯಾ' ಹೆಮ್ಮೆಗೆ ಎಷ್ಟೊಂದು ಕಾರಣಗಳು ಒಂದು ಸಂವಾದ ಸರಣಿ ಕಾರ್ಯಕ್ರಮದ ಉದ್ಘಾಟನೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯರವ ಜನ್ಮದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. (ಎಡದಿಂದ ಬಲಕ್ಕೆ) ಎಂಎಂಟಿಸಿ ನಿರ್ದೇಶಕ ಮಂಜುನಾಥ್ ಜಿ., ಪತ್ರಕರ್ತ ಅನಂತ್ ಚಿನಿವಾರ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ನಟ ಅನಂತ್‌ನಾಗ್ ಇದ್ದರು

–ಪ್ರಜಾವಾಣಿ ಚಿತ್ರಗಳು

ನಿಧನ ವಾರ್ತೆ


ಸಿ.ಟಿ. ನರಸೇಗೌಡ



ಬೆಂಗಳೂರು: ಸಮಾಜ ಸೇವಕ, ಭಾರತ್ ನಗರ ಸಮಾನಮನಸ್ಕರ ವೇದಿಕೆ ಕಾರ್ಯಾಧ್ಯಕ್ಷ ಸಿ.ಟಿ. ನರಸೇಗೌಡ (69) ಹೃದಯಾಘಾತದಿಂದ ಮಂಗಳವಾರ ನಿಧನರಾದರು.

ಅವರು ಭಾರತ್ ನಗರದ ಬಿಇಎಲ್ ಬಡಾವಣೆಯಲ್ಲಿ ವಾಸವಿದ್ದರು. ಬಿಎಸ್‌ಎನ್‌ಎಲ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ, ನಿವೃತ್ತರಾಗಿದ್ದರು. ಅವರ ಅಂತ್ಯಸಂಸ್ಕಾರ ಬುಧವಾರ ನಡೆಯಲಿದೆ.

ಡಾ. ರತ್ನಾಕರ ರಾ. ಕುಲಕರ್ಣಿ



ಬೆಂಗಳೂರು: ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾಗಿದ್ದ, ಹುಬ್ಬಳ್ಳಿಯ ವಿದ್ಯಾನಗರದ ನಿವಾಸಿ ಡಾ. ರತ್ನಾಕರ ರಾ. ಕುಲಕರ್ಣಿ(82) ಇತ್ತೀಚೆಗೆ ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಶ್ರೀ ಗುರು ರಾಘವೇಂದ್ರ ಬ್ಯಾಂಕ್ ಹಗರಣ: ವಿಧಾನ ಪರಿಷತ್‌ನಲ್ಲಿ ಪ್ರತಿಧ್ವನಿ

ಸಿಬಿಐ ತನಿಖೆಗೆ ಕಾಂಗ್ರೆಸ್ ಪಟ್ಟು: ಧರಣಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಸಮಗ್ರ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಮಂಗಳವಾರ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು.

ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರು, 'ಸದ್ಯ ನಿಧಾನಗತಿಯಲ್ಲಿ ತನಿಖೆ ನಡೆಯುತ್ತಿದೆ. ಈ ಬ್ಯಾಂಕ್‌ನಲ್ಲಿ ಹಣ ಠೇವಣಿ ಇರಿಸಿದವರು ಬಿಜೆಪಿಗೆ ಕಣ್ಣು ಮುಚ್ಚಿ ವೋಟ್ ಹಾಕಿದವರು. ಅವರಿಗೆ ನೀವು ನ್ಯಾಯ ಒದಗಿಸಬೇಕು. ಸರ್ಕಾರ, ಪೊಲೀಸ್ ಅಧಿಕಾರಿಗಳು ಶಾಮೀಲಾಗಿರುವುದರಿಂದ ಸಿಐಡಿ ತನಿಖೆ ಬೇಡ. ಸಿಬಿಐಗೆ ವಹಿಸಿ' ಎಂದು ಆಗ್ರಹಿಸಿದರು.

'ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಹಿಂದೇಟು ಹಾಕುತ್ತಿದೆ. ಆರ್‌ಬಿಐ ಆಡಳಿತಾಧಿಕಾರಿಯನ್ನು ನೇಮಿಸಿರುವುದರಿಂದ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಇಲ್ಲ. ಇದುವರೆಗೆ ಎಷ್ಟು ಆಸ್ತಿ ಜಪ್ತಿ ಮಾಡಿದ್ದೀರಿ? ಕೆಲ ಆರೋಪಿಗಳು ವಿದೇಶಕ್ಕೆ ತೆರಳಿ ತಲೆಮರೆಸಿಕೊಂಡಿರುವುದರಿಂದ ಅವರನ್ನು ಬಂಧಿಸಿ ಕರೆತರುವುದು ಸಿಐಡಿಗೆ ಕಷ್ಟ' ಎಂದು ವಿವರಿಸಿದರು.

ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರು, 'ಈ ಹಗರಣದಲ್ಲಿ ಕಾಂಗ್ರೆಸ್‌ನವರು ಭಾಗಿಯಾಗಿದ್ದರೆ ಇಷ್ಟು ಹೊತ್ತಿಗೆ ನಮ್ಮನ್ನು ರುಬ್ಬುತ್ತಿದ್ದರು. ಬಿಜೆಪಿಯ ಸಂಸದರು ಮತ್ತು ಸಚಿವರ ಒತ್ತಡದಿಂದ ಈ ತನಿಖೆಯನ್ನು ಸಿಬಿಐಗೆ ವಹಿಸುತ್ತಿಲ್ಲ. ಸಿಬಿಐ ತನಿಖೆಯಿಂದ ಎಲ್ಲವೂ ಬಹಿರಂಗವಾಗಲಿ' ಎಂದು ಒತ್ತಾಯಿಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, 'ಪ್ರಭಾವಿ ವ್ಯಕ್ತಿಯ ಕಾರಣಕ್ಕೆ ಸರ್ಕಾರ ತನಿಖೆಯನ್ನು ಸಿಬಿಐಗೆ ವಹಿಸುತ್ತಿಲ್ಲ' ಎಂದು ದೂರಿದರು.

ದುರಸ್ತಿಗೆ ₹483 ಕೋಟಿ ಖರ್ಚು: 'ಹಗರಣದಲ್ಲಿ ಸಿಲುಕಿರುವ ಈ ಬ್ಯಾಂಕ್ ಆಡಳಿತಾಧಿಕಾರಿ ಕೇವಲ ಮೂರು ತಿಂಗಳಲ್ಲಿ ದುರಸ್ತಿ ಮತ್ತು ನಿರ್ವಹಣೆಗಾಗಿ ₹483 ಕೋಟಿ ಖರ್ಚು ಮಾಡಿದ್ದಾರೆ. ಹೀಗಾಗಿ, ಆರ್‌ಬಿಐ ಅಧಿಕಾರಿ ವಿರುದ್ಧವೂ ತನಿಖೆಯಾಗಬೇಕು. ಆರ್‌ಬಿಐ ಅಧಿಕಾರಿಗಳ ಸಂಶಯಾತೀತರೇನಲ್ಲ' ಎಂದು ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್ ಆಗ್ರಹಿಸಿದರು.



ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರು ಮಂಗಳವಾರ ಸಭಾಪತಿ ಪೀಠದ ಮುಂದೆ ಪ್ರತಿಭಟನೆ ನಡೆಸಿದರು. –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಆರ್‌ಬಿಐ ಪರಿಶೀಲಿಸಿದ ಅಂಶಗಳು

- ₹1544.43 ಕೋಟಿ ಮೊತ್ತದ 1576 ಸಾಲದ ಖಾತೆಗಳಿಗೆ ದಾಖಲೆಗಳು ಇಲ್ಲ
- 24 ಸಾಲಗಾರರಿಗೆ ₹892.85 ಕೋಟಿ ಸಾಲ ಮಂಜೂರು ಮಾಡಿ ಹಣ ದುರುಪಯೋಗಪಡಿಸಿಕೊಳ್ಳಲಾಗಿದೆ
- ಠೇವಣಿ ಇಲ್ಲದಿದ್ದರೂ ತಪ್ಪು ಮಾಹಿತಿ ನೀಡಿ ₹409.11 ಕೋಟಿ ಮಂಜೂರು

ಠೇವಣಿದಾರರಿಗೆ ₹233.49 ಕೋಟಿ ಪಾವತಿ

'2022ರ ಡಿಸೆಂಬರ್ 15ರ ಅನ್ವಯ ಠೇವಣಿದಾರರಿಗೆ ಒಟ್ಟು ₹233.49 ಕೋಟಿ ಮೊತ್ತ ಪಾವತಿಸಲಾಗಿದೆ' ಎಂದು ಸಚಿವ ಎಸ್‌.ಟಿ. ಸೋಮಶೇಖರ್ ವಿವರಿಸಿದರು.

'ಜತೆಗೆ, ಡಿಐಸಿಜಿಸಿ ವಿಮಾ ಸಂಸ್ಥೆಯು ಅರ್ಹ ಠೇವಣಿದಾರರಿಗೆ ₹712 ಕೋಟಿ ಮೊತ್ತ ಪಾವತಿಸಲಾಗಿದೆ. ಸಾಲಗಳ ವಸೂಲಾತಿ ಕಾರ್ಯವೂ ಪ್ರಗತಿಯಲ್ಲಿದ್ದು, 2020ರ ಜನವರಿ 10ರಿಂದ ಇದುವರೆಗೆ ₹192.67 ಕೋಟಿ ಸಾಲ ವಸೂಲಿಯಾಗಿದೆ ಮತ್ತು ಬ್ಯಾಂಕ್ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದ್ದ 10 ಸಿಬ್ಬಂದಿಯನ್ನು ವಜಾಗೊಳಿಸಲಾಗಿದೆ' ಎಂದು ಸಚಿವರು ತಿಳಿಸಿದರು.

'ಆರೋಪಿಗಳು ಮತ್ತು ಅವರ ಅವಲಂಬಿತ ಸದಸ್ಯರ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿನ ಒಟ್ಟು ₹9,546 ಖಾತೆಗಳಲ್ಲಿದ್ದ ₹15 ಕೋಟಿಗೂ ಹೆಚ್ಚು ಮೊತ್ತವನ್ನು ತಡೆಹಿಡಿಯಲಾಗಿದೆ. ಜತೆಗೆ,₹ 1,115 ಕೋಟಿಗೂ ಹೆಚ್ಚು ಮೌಲ್ಯದ ಸ್ಥಿರಾಸ್ತಿಗಳನ್ನು ಗುರುತಿಸಿ ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಲು ಜಾರಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಸಚಿವರು ವಿವರಿಸಿದರು.

₹1,294 ಕೋಟಿ ವಂಚನೆ– ಶೀಘ್ರ ಸಭೆ: ಎಸ್‌.ಟಿ. ಸೋಮಶೇಖರ್

'ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ₹1,294 ಕೋಟಿ ವಂಚನೆ ಮಾಡಲಾಗಿದೆ. ಆರ್‌ಬಿಐ ಈ ಬ್ಯಾಂಕ್‌ಗೆ ಆಡಳಿತಾಧಿಕಾರಿಯನ್ನಾಗಿ ಆರ್. ಅಶೋಕನ್ ಅವರನ್ನು ನೇಮಿಸಿದೆ. ಆದರೆ, ಅವರು ಸಾಲ ವಸೂಲಿಗೆ ಮುತುವರ್ಜಿ ವಹಿಸುತ್ತಿಲ್ಲ' ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಅವರು ಸದನದಲ್ಲಿ ವಿವರಿಸಿದರು.

'ಈ ಹಗರಣದ ಬಗ್ಗೆ ಸಿಐಡಿ ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ತನಿಖೆ ನಡೆಸುತ್ತಿರುವುದರಿಂದ ಸಿಬಿಐ ತನಿಖೆ ಅಗತ್ಯ ಇಲ್ಲ. ಸಿಐಡಿ ಅಧಿಕಾರಿಗಳು ಸಮರ್ಥರಿದ್ದಾರೆ. ಜನವರಿ 3, 4 ಅಥವಾ 5ರಂದು ಸಿಐಡಿ ಅಧಿಕಾರಿಗಳು, ಶಾಸಕರು, ಸಹಕಾರ ಇಲಾಖೆ ಅಧಿಕಾರಿಗಳ ಸಭೆ ಕರೆಯಲಾಗುವುದು. ಈ ಸಭೆಯಲ್ಲೇ ಮುಂದಿನ ಕ್ರಮಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಸಿಬಿಐಗೆ ತನಿಖೆ ವಹಿಸಿದರೆ ಮತ್ತಷ್ಟು ವಿಳಂಬವಾಗುತ್ತದೆ' ಎಂದು ಕಾಂಗ್ರೆಸ್ ಸದಸ್ಯರ ಮನವೊಲಿಸಿದರು.

'ಈ ಬ್ಯಾಂಕ್ ಅನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳಲು ಮುಂದೆ ಬಂದಿರುವ ಐದು ಬ್ಯಾಂಕ್‌ಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ. ವಂಚನೆ ಎಸಗಿದ 42 ಮಂದಿಯನ್ನು ಬಂಧಿಸಲಾಗಿತ್ತು. ಇವರು ಈಗ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಈ ಬ್ಯಾಂಕ್‌ನಲ್ಲಿ ಅತಿ ಹೆಚ್ಚು ಸಾಲ ಪಡೆದು ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಜಸ್ವಂತ್ ರೆಡ್ಡಿ ಮತ್ತು ರಂಜೀತ್ ರೆಡ್ಡಿ ವಿರುದ್ಧ ರೆಡ್‌ಕಾರ್ನರ್ ನೋಟಿಸ್ ಹೊರಡಿಸಲಾಗಿದೆ' ಎಂದರು.

'ಹಗರಣ ಸಿಬಿಐಗೆ ವಹಿಸಿ'

'ಸಹಕಾರಿ ಸಚಿವರು ಸದನದಲ್ಲಿ ಸುಳ್ಳು ನೆಪ ಹೇಳುವುದನ್ನು ಬಿಟ್ಟು ಗುರುರಾಘವೇಂದ್ರ ಬ್ಯಾಂಕ್ ಮತ್ತು ಸಹಕಾರಿ ಬ್ಯಾಂಕ್‌ಗಳ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಗುರು ರಾಘವೇಂದ್ರ ಕೋ- ಆಪರೇಟಿವ್ ಬ್ಯಾಂಕ್‌ನ ಠೇವಣಿದಾರರು ಮತ್ತು ಷೇರುದಾರರ ಹಿತರಕ್ಷಣಾ ವೇದಿಕೆಯ ಮುಖ್ಯಪೋಷಕ ಡಾ. ಶಂಕರ್ ಗುಹಾ ಅವರು ಒತ್ತಾಯಿಸಿದ್ದಾರೆ.

'ಈ ಹಗರಣದ ತನಿಖೆ ಇದುವರೆಗೂ ಪ್ರಗತಿ ಕಂಡಿಲ್ಲ. ಹೆಚ್ಚು ಸಾಲ ಪಡೆದ 24 ಜನರ ಹೆಸರನ್ನು ಪ್ರಕಟಿಸಿಲ್ಲ. ಸಿಐಡಿ ತನಿಖೆ ಏನಾಯ್ತು.. ಲೆಕ್ಕಪರಿಶೋಧಕರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

ಉದ್ಯೋಗದ ಆಮಿಷ: ₹ 93.55 ಲಕ್ಷ ವಂಚನೆ

ಬೆಂಗಳೂರು: ಎಫ್‌ಡಿಎ ಸೇರಿ ಬೇರೆ ಬೇರೆ ಇಲಾಖೆಯಲ್ಲಿ ಸರ್ಕಾರಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ಆಕಾಂಕ್ಷಿಗಳಿಂದ ₹ 93.55 ಲಕ್ಷ ಪಡೆದು ವಂಚಿಸಿದ್ದ ಜಯನಗರದ 1ನೇ ಬ್ಲಾಕ್ ನಿವಾಸಿ ಆರ್‌.ಪಿ.ಉಮಾದೇವಿ (53) ಎಂಬುವವರನ್ನು ದಕ್ಷಿಣ ವಿಭಾಗದ ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ನಗರದ ವಿವಿಧ ಪೊಲೀಸ್ ಠಾಣೆ ಹಾಗೂ ಮಂಡ್ಯ ಜಿಲ್ಲೆಯ ಕೆರೆಗೋಡು ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ವಂಚನೆ ಪ್ರಕರಣಗಳು ದಾಖಲಾಗಿದ್ದವು.

'ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯಿಂದ ₹ 6.55 ಲಕ್ಷ, ಚನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮತ್ತೊಬ್ಬರಿಂದ ₹ 23 ಲಕ್ಷ, ಜಯನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ₹ 27 ಲಕ್ಷ, ಗಿರಿನಗರ ಠಾಣಾ ವ್ಯಾಪ್ತಿಯಲ್ಲಿ ₹ 27 ಲಕ್ಷ, ಮಂಡ್ಯ ಜಿಲ್ಲೆ ಕೆರೆಗೋಡಿನಲ್ಲಿ ಉದ್ಯೋಗ ಆಕಾಂಕ್ಷಿ ಒಬ್ಬರಿಂದ ₹ 10 ಲಕ್ಷ ಪಡೆದು ಆರೋಪಿ ವಂಚಿಸಿದ್ದರು. ಆರೋಪಿ ವಿರುದ್ಧ ಒಟ್ಟು ಏಳು ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಉಮಾದೇವಿ

ಸರ್ಕಾರಿ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆ ಕೊಡಿಸುವುದಾಗಿ ಹೇಳಿ ₹ 6.55 ಲಕ್ಷ ಪಡೆದು ವಂಚಿಸಲಾಗಿದೆ ಎಂದು ಆರೋಪಿಸಿ ಸಿದ್ದಾಪುರ ಠಾಣೆಗೆ ಜಯನಗರ ಒಂದನೇ ಹಂತದ ನಿವಾಸಿ ಕೆ. ಸತೀಶ್ ಅವರು ನವೆಂಬರ್‌ನಲ್ಲಿ ದೂರು ನೀಡಿದ್ದರು. ಇದೇ ದೂರು ಆಧರಿಸಿ ಆರೋಪಿ ಬಂಧನಕ್ಕೆ ಪೊಲೀಸರು ವಿಶೇಷ ತಂಡ ರಚಿಸಿದ್ದರು. ಆರೋಪಿ ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಹಲವರಿಗೆ ಇದೇ ರೀತಿ ವಂಚಿಸಿರುವುದು ಗೊತ್ತಾಗಿದೆ.

'ಸತೀಶ್ ಅವರ ಮಗ ಎಂಜಿನಿಯರಿಂಗ್ ವ್ಯಾಸಂಗ ಮಾಡಿದ್ದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮಗನಿಗೆ ಸರ್ಕಾರಿ ಕೆಲಸ ಕೊಡಿಸುವುದಕ್ಕಾಗಿ ಸತೀಶ್ ಪ್ರಯತ್ನಿಸುತ್ತಿದ್ದರು. ಅವರಿಗೆ ಸ್ನೇಹಿತರೊಬ್ಬರ ಮೂಲಕ ಉಮಾದೇವಿಯ ಪರಿಚಯವಾಗಿತ್ತು. ಸರ್ಕಾರಿ ಅಧಿಕಾರಿಗಳ ಪರಿಚಯವಿದ್ದು, ಉದ್ಯೋಗ ಕೊಡಿಸುವುದಾಗಿ ಹೇಳಿ ಹಂತ ಹಂತವಾಗಿ ಹಣ ಪಡೆದು ವಂಚಿಸಿದ್ದರು' ಎಂದು ಸತೀಶ್ ದೂರಿನಲ್ಲಿ ಉಲ್ಲೇಖಿಸಿದ್ದರು.

ಅಪಘಾತ: ಬಿಬಿಎಂಪಿ ಆರೋಗ್ಯ ನಿರೀಕ್ಷಕ ಸೇರಿ ಇಬ್ಬರ ಸಾವು

ಬೆಂಗಳೂರು: ನಗರದಲ್ಲಿ ನಡೆದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಬೈಕ್ ಸವಾರರು ಮೃತಪಟ್ಟಿದ್ದಾರೆ.

ಸದಾಶಿವನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸ್ಯಾಂಕಿ ಕೆರೆ ಸಮೀಪದ ಟಿ.ಚೌಡಯ್ಯ ರಸ್ತೆಯಲ್ಲಿ ಪಾದಚಾರಿ ಮಾರ್ಗಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯ (ಬಿಬಿಎಂಪಿ) ಆರೋಗ್ಯ ನಿರೀಕ್ಷಕ ಪ್ರಶಾಂತ್ ನಾಯ್ಕ್ (27) ಎಂಬುವವರು ಮೃತಪಟ್ಟಿದ್ದಾರೆ.

ಕೆಲಸ ಮುಗಿಸಿಕೊಂಡು ಸೋಮವಾರ ರಾತ್ರಿ ಜೆ.ಪಿ.ನಗರದಲ್ಲಿರುವ ಮನೆಯತ್ತ ಬೈಕ್‌ನಲ್ಲಿ ತೆರಳುತ್ತಿದ್ದರು. ಆಗ ಈ ಘಟನೆ ನಡೆದಿದೆ. ಸದಾಶಿವನಗರದಿಂದ ಬೈಕ್‌ನಲ್ಲಿ ಒಬ್ಬರೆ ತೆರಳುತ್ತಿದ್ದರು. ಡಿಕ್ಕಿಯಾದ ರಭಸಕ್ಕೆ ಅವರ ತಲೆ ಹಾಗೂ ಮುಖದ ಭಾಗಕ್ಕೆ ಗಾಯವಾಗಿತ್ತು. ಸದಾಶಿವನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನವೊಂದು ನಿಯಂತ್ರಣ ತಪ್ಪಿಬಿದ್ದು, ಬೈಕ್ ಸವಾರ ಸಂತೋಷ್ ಹೊಂಗಲ್ (33) ಎಂಬುವವರು ಮೃತಪಟ್ಟಿದ್ದಾರೆ. ಪೋರ್ಟರ್ ಕಂಪನಿಯಲ್ಲಿ ಸಂತೋಷ್ ಕೆಲಸ ಮಾಡುತ್ತಿದ್ದರು.

ವ್ಯಕ್ತಿಯ ಅಪಹರಣ, ಕೊಲೆ ಭೇದಿಸಿದ ಪೊಲೀಸರು

ಕರವೇ ಅಧ್ಯಕ್ಷ ಸೇರಿ ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆಯ ಹರಿನಗರದ ಎಚ್‌.ಶರತ್ ಅವರ ಅಪಹರಣ ಹಾಗೂ ನಿಗೂಢ ಕೊಲೆ ಪ್ರಕರಣವನ್ನು ನಗರದ ಕಬ್ಬನ್ ಪಾರ್ಕ್ ಪೊಲೀಸರು ಭೇದಿಸಿದ್ದು, ಐವರು ಆರೋಪಿಗಳನ್ನು ಬಂಧಿಸಿದ್ದಾರೆ.



ಎಚ್‌.ಜಿ. ವೆಂಕಟಾಚಲಪತಿ

ಕರ್ನಾಟಕ ರಕ್ಷಣಾ ವೇದಿಕೆ (ಕನ್ನಡ ಪರ ಸಂಘಟನೆಗಳ ಒಕ್ಕೂಟ) ರಾಜ್ಯ ಅಧ್ಯಕ್ಷ, ಚಿಕ್ಕಬಳ್ಳಾಪುರದ ಎಚ್‌.ಜಿ. ವೆಂಕಟಾಚಲಪತಿ ಹಾಗೂ ಅವರ ಪುತ್ರ ಎ.ವಿ.ಶರತ್ ಕುಮಾರ್, ಸಹಚರರಾದ ಆರ್‌.ಶ್ರೀಧರ್, ಕೆ. ಧನುಷ್, ಯಲಹಂಕದ ಎಂ.ಪಿ.ಮಂಜುನಾಥ್ ಬಂಧಿತರು.

ಪ್ರಕರಣ ನಡೆದು 9 ತಿಂಗಳ ಬಳಿಕ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಶರತ್‌ಗೆ ಚಿತ್ರಹಿಂಸೆ ನೀಡಿ ಭೀಕರವಾಗಿ ಕೊಲೆ ಮಾಡಿ ಚಾರ್ಮಾಡಿ ಘಾಟ್‌ನಲ್ಲಿ ಮೃತದೇಹ ಎಸೆಯಲಾಗಿತ್ತು.

ಸಬ್ಸಿಡಿ ದರದಲ್ಲಿ ಸರ್ಕಾರದಿಂದ ಕಾರು ಕೊಡಿಸುವುದಾಗಿ ಎಚ್‌.ಶರತ್ ಚಿಕ್ಕಬಳ್ಳಾಪುರ ಹಾಗೂ ಯಲಹಂಕ ವಾಸಿಗಳಿಂದ ಲಕ್ಷಾಂತರ ರೂಪಾಯಿ ಹಣ ಪಡೆದುಕೊಂಡಿದ್ದರು. ಕಾರನ್ನು ಕೊಡಿಸದ ಕಾರಣಕ್ಕೆ ಗ್ರಾಹಕರು ಆತನ ವಿರುದ್ಧ ತಿರುಗಿ ಬಿದ್ದಿದ್ದರು. ಶರತ್ ವಿರುದ್ಧವೂ ವಂಚನೆ ಪ್ರಕರಣ ದಾಖಲಿಸಿದ್ದರು.

ಕಳೆದ ಮಾರ್ಚ್‌ನಲ್ಲಿ ಹಣ ವಾಪಸ್ ಕೊಡಿಸುವಂತೆ ಹಣ ನೀಡಿದವರು ವೆಂಕಟಾಚಲಪತಿ ಬಳಿ ಕೇಳಿಕೊಂಡಿದ್ದರು. ನಂತರ ಆರೋಪಿಗಳು, ಕೋಣನಕುಂಟೆ ಶರತ್ ಅವರನ್ನು ಅಪಹರಿಸಿ ಗೌರಿಬಿದನೂರಿನ ತೋಟದ ಮನೆಗೆ ಕರೆದೊಯ್ದು ಅಲ್ಲಿ ಕೊಲೆ ಮಾಡಿದ್ದರು. ಮೃತದೇಹವನ್ನು ಚಾರ್ಮಾಡಿ ಘಾಟಿಗೆ ಎಸೆದು ಸಾಕ್ಷ್ಯ ನಾಶಪಡಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮರಕ್ಕೆ ಕಟ್ಟಿಹಾಕಿ ಕೊಲೆ: 'ಹಣ ಕಳೆದುಕೊಂಡವರು ಮನವಿಯ ಮೇರೆಗೆ ವೆಂಕಟಾಚಲಪತಿ ತನ್ನ ಪುತ್ರ ಎ.ವಿ. ಶರತ್‌ನಿಗೆ ಹಣ ವಸೂಲಿ ಮಾಡುವಂತೆ ಸೂಚಿಸಿದ್ದರು. ತನ್ನ ಸ್ನೇಹಿತರು ಹಾಗೂ ಹಣ ಕಳೆದುಕೊಂಡವರ ಜತೆಗೆ ಸೇರಿಕೊಂಡು ಎಚ್‌.ಶರತ್‌ನನ್ನು ಅಪಹರಣಕ್ಕೆ ಯೋಜನೆ ರೂಪಿಸಿದ್ದರು. ಬನಶಂಕರಿ ಬಳಿ ಕರೆಸಿಕೊಂಡು ಅಲ್ಲಿಂದ ಅಪಹರಣ ಮಾಡಲಾಗಿತ್ತು. ಗೌರಿಬಿದನೂರು ವಾಟದಹೊಸಹಳ್ಳಿಯ ಮಾವಿನ ತೋಟದ ಮನೆಯಲ್ಲಿ ಬಂಧನದಲ್ಲಿ ಇಡಲಾಗಿತ್ತು. ಅರೆಬೆತ್ತಲೆ ಮಾಡಿ, ಕೈಕಾಲು ಕಟ್ಟಿಹಾಕಿ ಥಳಿಸಿದ್ದರು. ಶರತ್‌ನನ್ನು ಮರಕ್ಕೆ ಕಟ್ಟಿಹಾಕಿ ಕೊಲೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

ಪತ್ರ ಆಧರಿಸಿ ಪ್ರಕರಣ ಪತ್ತೆ

ಘಟನೆ ನಡೆದು ಕೆಲವು ತಿಂಗಳಾದ ಮೇಲೆ ಕೇಂದ್ರ ವಿಭಾಗದ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ವ್ಯಕ್ತಿಯೊಬ್ಬರು ಪತ್ರ ಬರೆದು ಕೊಲೆಯ ಸುಳಿವು ನೀಡಿದ್ದರು. ಹಲ್ಲೆಯ ವಿಡಿಯೊಗಳನ್ನು ಪೆನ್‌ಡ್ರೈವ್‌ವೊಂದರಲ್ಲಿ ಕಳುಹಿಸಿದ್ದರು. ಈ ದೃಶ್ಯಾವಳಿ ಗಮನಿಸಿದ ಪೊಲೀಸರು ತನಿಖೆಗೆ ವಿಶೇಷ ತಂಡ ರಚಿಸಿ ರಹಸ್ಯ ಕಾರ್ಯಾಚರಣೆ ನಡೆಸಿದ್ದರು. ವಿಡಿಯೊ ಪರಿಶೀಲನೆ ನಡೆಸಿದಾಗ ಶರತ್‌ಗೆ ಹಲ್ಲೆ ನಡೆಸುತ್ತಿರುವುದು ಆರೋಪಿಗಳ ಚಹರೆ ಗೊತ್ತಾಗಿತ್ತು. ಅದನ್ನೇ ಆಧರಿಸಿ ಐವರು ಆರೋಪಿಗಳನ್ನು ಮಂಗಳವಾರ ಪೊಲೀಸರು ಬಂಧಿಸಿದ್ದಾರೆ.

ಲಾರಿಗೆ ಮೊಬೈಲ್ ಎಸೆದಿದ್ದ ಆರೋಪಿಗಳು

ಅಪಹರಣ ಬಳಿಕ ಆರೋಪಿಗಳು ಶರತ್ ಅವರ ಮೊಬೈಲ್ ಅನ್ನೇ ಕಸಿದುಕೊಂಡು 'ನಾನು ಕೆಲಸಕ್ಕೆಂದು ಹೊರರಾಜ್ಯಕ್ಕೆ ತೆರಳುತ್ತಿದ್ದೇನೆ. ನನ್ನ ಹುಡುಕುವುದು ಬೇಡ' ಎಂದು ಪೋಷಕರಿಗೆ ಸಂದೇಶ ಕಳುಹಿಸಿದ್ದರು. ಸಿನಿಮೀಯ ರೀತಿಯಲ್ಲಿ ಆತನ ಮೊಬೈಲ್ ಅನ್ನು ಲಾರಿಯಲ್ಲಿ ಮೊಬೈಲ್ ಎಸೆಯಲಾಗಿತ್ತು. ಮೊಬೈಲ್ ಬಿದ್ದಿದ್ದ ಲಾರಿ ಮೈಸೂರು ಮಾರ್ಗವಾಗಿ ಕೇರಳ ರಾಜ್ಯಕ್ಕೆ ತೆರಳಿತ್ತು. ಬಳಿಕ ಮೊಬೈಲ್ ಸಹ ಸ್ವಿಚ್ಡ್ ಆಫ್ ಆಗಿತ್ತು.

'ಪ್ರಕರಣದಲ್ಲಿ ಮತ್ತಷ್ಟು ಆರೋಪಿಗಳು ಶಾಮೀಲಾಗಿದ್ದಾರೆ. ಅವರ ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಆರ್. ಶ್ರೀನಿವಾಸ್‌ಗೌಡ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪ್ರೇಯಸಿ ಜತೆ ಪ್ರವಾಸಕ್ಕಾಗಿ ಅಣ್ಣನ ಮನೆಯಲ್ಲಿ ಕಳ್ಳತನ

ಬೆಂಗಳೂರು: ಗೋವಾಕ್ಕೆ ಪ್ರೇಯಸಿ ಜತೆಗೆ ತೆರಳಿ ಮೋಜು–ಮಸ್ತಿ ಮಾಡಲು ಅಣ್ಣನ ಮನೆಯಲ್ಲೇ 103 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಿದ್ದ ವ್ಯಕ್ತಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ಆಡುಗೋಡಿ ಮಹಾಲಿಂಗೇಶ್ವರ ಬಂಡೆಯ ನಿವಾಸಿ ಇರ್ಫಾನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಇರ್ಫಾನ್ ಯುವತಿಯನ್ನು ಪ್ರೀತಿಸುತ್ತಿದ್ದ. ಆಕೆಯೊಂದಿಗೆ ಪ್ರವಾಸಕ್ಕೆ ತೆರಳಲು ಮುಂದಾಗಿದ್ದ. ವರ್ಷಾಂತ್ಯವಾದ ಕಾರಣಕ್ಕೆ ಗೋವಾ ಸೂಕ್ತವೆಂದು ಇಬ್ಬರೂ ನಿರ್ಧರಿಸಿದ್ದರು. ಇರ್ಫಾನ್ ಎಲ್ಲಿಯೂ ಕೆಲಸ ಮಾಡುತ್ತಿರಲಿಲ್ಲ. ಹೀಗಾಗಿ, ಪ್ರವಾಸಕ್ಕೆ ಪ್ರೇಯಸಿಯನ್ನು ಕರೆದೊಯ್ಯಲು ಹಣ ಇರಲಿಲ್ಲ. ಕೆಲವು ವರ್ಷಗಳಿಂದ ಅಣ್ಣನ ಮನೆಯಲ್ಲೇ ಚಿನ್ನಾಭರಣ ಕದ್ದು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಗೋವಾಕ್ಕೆ ತೆರಳಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದ್ವಿಚಕ್ರ ವಾಹನ ಕಳವು: ಇಬ್ಬರ ಬಂಧನ

ಬೆಂಗಳೂರು: ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ವಿಜಯನಗರದ ಮಾರೇನಹಳ್ಳಿ ನಿವಾಸಿ ಚಂದಪ್ಪ (24) ಹಾಗೂ ಮಾರೇನಹಳ್ಳಿ ಪಳ್ಳೇಕಮ್ಮ ದೇವಸ್ಥಾನದ ಬಳಿಯ ನಿವಾಸಿ ರವಿಕುಮಾರ್ (20) ಬಂಧಿತರು. ಮತ್ತೊಬ್ಬ ಆರೋಪಿ ಮಂಜುನಾಥ್ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕೆಂಗೇರಿ ಉಪನಗರದ ಮಾರಮ್ಮ ದೇವಸ್ಥಾನ ಬಳಿ ನಿಲುಗಡೆ ಮಾಡಿದ್ದ ಬೈಕ್‌ಗಳ ಲಾಕ್ ತೆರೆದು ಕಳವು ಮಾಡಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಶಾರ್ಟ್ ಸರ್ಕಿಟ್: ಎರಡು ಬಸ್‌ಗಳಿಗೆ ಬೆಂಕಿ

ಬೆಂಗಳೂರು: ಮೈಸೂರು ರಸ್ತೆಯ ಆರ್‌ವಿ ಕಾಲೇಜು ಬಳಿಯ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಲಾಗಿದ್ದ ಎರಡು ಬಸ್‌ಗಳು ಬೆಂಕಿ ಆಕಸ್ಮಿಕದಿಂದ ಭಸ್ಮವಾಗಿವೆ. ಎಸ್‌ಆರ್‌ಎಸ್ ಕಂಪನಿಗೆ ಸೇರಿದ ಬಸ್‌ಗಳಾಗಿವೆ.

ಬ್ಯಾಟರಿಯಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿತ್ತು. ಮಧ್ಯಾಹ್ನ 2.20ರ ವೇಳೆಗೆ ಮಾಹಿತಿ ಸಿಕ್ಕಿತು. ತಕ್ಷಣವೇ ಸ್ಥಳಕ್ಕೆ ತೆರಳಿ ಬೆಂಕಿ ನಂದಿಸಲಾಯಿತು ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದ್ದಾರೆ.



ಹೊಸಪೇಟೆಯ ಕೊಂಡನಾಯಕನಹಳ್ಳಿಯಲ್ಲಿ ಕೃತ್ಯ • ಬಿಗುವಿನ ವಾತಾವರಣ

ಖಬರಸ್ತಾನ ಸಮಾಧಿಗಳ ನೆಲಸಮ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತಾಲ್ಲೂಕಿನಕೊಂಡನಾಯಕನಹಳ್ಳಿಯಲ್ಲಿ ಖಬರಸ್ತಾನದಲ್ಲಿ ನೂರಕ್ಕೂ ಹೆಚ್ಚು ಸಮಾಧಿಗಳನ್ನು ನೆಲಸಮಗೊಳಿಸಲಾಗಿದ್ದು, ಇದರಿಂದ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ಮುಸ್ಲಿಮರು ಹಲವು ವರ್ಷಗಳಿಂದ ಅಂತ್ಯಕ್ರಿಯೆ ನಡೆಸುತ್ತಿದ್ದು, ಸಮಾಧಿಗಳನ್ನು ನಿರ್ಮಿಸಿದ್ದಾರೆ. ಆದರೆ, ದುಷ್ಕರ್ಮಿಗಳು ಭಾನುವಾರ ತಡರಾತ್ರಿ ಜೆಸಿಬಿಯಿಂದ ಸಮಾಧಿಗಳನ್ನು ನೆಲಸಮಗೊಳಿಸಿದ್ದಾರೆ. ವಿಷಯ ತಿಳಿದು ಮುಸ್ಲಿಮರು ಸೋಮವಾರ ಸ್ಥಳದಲ್ಲಿ ಸೇರಿದ್ದರು. ಕೆಲಕಾಲ ಉದ್ರಿಕ್ತ ವಾತಾವರಣ ನಿರ್ಮಾಣವಾಗಿತ್ತು. ಡಿವೈಎಸ್ಪಿ ವಿಶ್ವನಾಥರಾವ್ ಕುಲಕರ್ಣಿ ಹಾಗೂ ಸಮಾಜದ ಹಿರಿಯರು ಮನವೊಲಿಸಿ ಪರಿಸ್ಥಿತಿ ಶಾಂತಗೊಳಿಸಿದರು.

ಮುಸ್ಲಿಮರ ಖಬರಸ್ತಾನ (ಸುನ್ನಿ) ಆಡಿಷನಲ್ ಪ್ರಾಪರ್ಟಿ ಆಫ್ ಮಸೀದಿ--ಇ-ಫಿರ್ದೋಸ್ ಅಧ್ಯಕ್ಷ ಮಹಮ್ಮದ್ ಗೌಸ್ ಅವರು ಈ ಬಗ್ಗೆ ಗ್ರಾಮೀಣ ಠಾಣೆಗೆ ದೂರು ನೀಡಿದ್ದಾರೆ. ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟು ಮಾಡಿದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಪಡಿಸಿದ್ದಾರೆ.


ಸಮಾಧಿ ನೆಲಸಮಗೊಳಿಸಿದ ವಿಷಯ ತಿಳಿದು ಸ್ಥಳದಲ್ಲಿ ಸೇರಿದ್ದ ಜನ

'ಇಲ್ಲಿ ರಾಜ್ಯ ವಕ್ಫ್ ಬೋರ್ಡ್‌ಗೆ ಸೇರಿದ 24 ಹಾಗೂ 40 ಸೆಂಟ್ಸ್ ಪ್ರತ್ಯೇಕ ಜಾಗಗಳಿವೆ. 24 ಸೆಂಟ್ಸ್ ಜಾಗದಲ್ಲಿದ್ದ ಸಮಾಧಿಗಳನ್ನು ನೆಲಸಮಗೊಳಿಸಿದ್ದಾರೆ. ರಾತ್ರಿ ಖಬರಸ್ತಾನಕ್ಕೆ ಹೊಂದಿಕೊಂಡಿರುವ ಬೇರೆ ಆಸ್ತಿಯ ಕಾಂಪೌಂಡ್ ಒಡೆದು, ಒಳಗೆ ನುಗ್ಗಿ ಕೃತ್ಯ ಎಸಗಿದ್ದಾರೆ' ಎಂದು ಮಹಮ್ಮದ್ ಗೌಸ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಅಮರೇಶ ಎಂಬುವರಿಗೆ ಸೇರಿದ 8 ಸೆಂಟ್ಸ್ ಜಾಗ ಇದೆ. ಅಲ್ಲಿ ಮುಸ್ಲಿಮರು ಅಂತ್ಯಕ್ರಿಯೆ ನಡೆಸುತ್ತಿದ್ದಾರೆ. 2007ರಲ್ಲಿ ಜಾಗದ ಮಾಲೀಕರು ತಕರಾರು ತೆಗೆದಾಗ, ಅವಿಭಜಿತ ಬಳ್ಳಾರಿ ಜಿಲ್ಲಾಧಿಕಾರಿ ಎರಡೂ ಕಡೆಯವರ ಜತೆ ಮಾತುಕತೆ ನಡೆಸಿ, ಜಾಗದ ಮಾಲೀಕರಿಗೆ ₹1 ಲಕ್ಷ ಕೊಡಲು ಸೂಚಿಸಿದ್ದರು. ಆದರೆ, ಮಾಲೀಕ ಅಮರೇಶ ₹15 ಲಕ್ಷ ಕೇಳಿದ್ದರು. ವರ್ಷಗಳೇ ಕಳೆದರೂ ಹಣ ಕೊಡದ ಕಾರಣ ಜಾಗ ಸ್ವಾಧೀನ ಪಡೆಯಲು ಬೇರೆಯವರ ಮೂಲಕ ಖಬರಸ್ತಾನದಲ್ಲಿ ಟ್ರೆಂಚ್ ಹೊಡೆದು ಮಾರ್ಕ್ ಮಾಡಿದ್ದಾರೆ. ನಾಲ್ಕೈದು ಸಮಾಧಿ ನಾಶವಾಗಿವೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ತಿಳಿಸಿದ್ದಾರೆ.

> **ಘಟನೆ ಬಗ್ಗೆ ಸಂಬಂಧಿಸಿದ ಇಲಾಖೆಗೆ ಪತ್ರ ಬರೆಯಲಾಗಿದೆ. ದಾಖಲೆಗಳನ್ನು ಪರಿಶೀಲಿಸಿ, ಕಾನೂನು ಕ್ರಮ ಜರುಗಿಸಲಾಗುವುದು.**
> **ಶ್ರೀಹರಿಬಾಬು ಬಿ.ಎಲ್.**
> ಪೊಲೀಸ್ ವರಿಷ್ಠಾಧಿಕಾರಿ, ವಿಜಯನಗರ


ಬೆಳಗಾವಿಯಲ್ಲಿ ಕುರುಬರ ಸಂಘದವರು ಪ್ರತಿಭಟನೆ ನಡೆಸಿದರು

ಎಸ್‌ಟಿ ಪಟ್ಟಿಗೆ ಸೇರಿಸಲು ಆಗ್ರಹ

ಬೆಳಗಾವಿ: 'ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕು' ಎಂದು ಒತ್ತಾಯಿಸಿ ಇಲ್ಲಿನ ಸುವರ್ಣ ವಿಧಾನಸೌಧ ಬಳಿ ಇರುವ ಕೊಂಡಸಕೊಪ್ಪದಲ್ಲಿ ರಾಜ್ಯ ಕುರುಬರ ಸಂಘದವರು ಮಂಗಳವಾರ ಪ್ರತಿಭಟನೆ ನಡೆಸಿದರು.


'ಕುರುಬ ಸಮುದಾಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿದೆ. ಈ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಿ, ಅನುಮೋದನೆ ಪಡೆಯಬೇಕು' ಎಂದು ಒತ್ತಾಯಿಸಿದರು.

'ಈ ಕುರಿತು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ, ವಿಧಾನಸಭೆಯ ಮುಂದಿನ ಚುನಾವಣೆಯೊಳಗೆ ನಮ್ಮ ಬೇಡಿಕೆಯನ್ನು ಈಡೇರಿಸಬೇಕು' ಎಂದು ಹಕ್ಕೊತ್ತಾಯವನ್ನು ಮಂಡಿಸಿದರು.

ಪ್ರತಿಭಟನ ಸ್ಥಳಕ್ಕೆ ಬಂದ ಪೌರಾಡಳಿತ ಸಚಿವ ಎಂಟಿಬಿ ನಾಗರಾಜು, 'ಈ ಹೋರಾಟಕ್ಕೆ ನನ್ನ ಸಹಮತವಿದೆ. ನಿಮ್ಮ ಬೇಡಿಕೆ ಈಡೇರಿಕೆ ಕುರಿತು ಸದನದಲ್ಲಿ ಧ್ವನಿ ಎತ್ತುತ್ತೇನೆ' ಎಂದು ಭರವಸೆ ನೀಡಿದರು.

ಶಾಸಕರಾದ ಬಂಡೆಪ್ಪ ಕಾಶೆಂಪುರ, ಯತೀಂದ್ರ ಸಿದ್ದರಾಮಯ್ಯ ಮತ್ತಿತರರು ಹೋರಾಟಕ್ಕೆ ಬೆಂಬಲ ಸೂಚಿಸಿದರು. ಕಾಗಿನೆಲೆಯ ಶಾಖಾಮಠದ ಸಿದ್ದರಾಮಾನಂದ ಪುರಿ ಸ್ವಾಮೀಜಿ, ಮನ್ಸೂರಿನ ರೇವಣಸಿದ್ಧೇಶ್ವರ ಸ್ವಾಮೀಜಿ, ಅಥಣಿಯ ಅಮರೇಶ್ವರ ಸ್ವಾಮೀಜಿ, ಸಂಘದ ಅಧ್ಯಕ್ಷ ಬಿ.ಸುಬ್ರಮಣ್ಯ, ವಿವೇಕರಾವ್ ಪಾಟೀಲ, ನಿಕೇತರಾಜ್ ಮೌರ್ಯ, ಮಡ್ಡೆಪ್ಪ ತೋಳಿನವರ ಪಾಲ್ಗೊಂಡಿದ್ದರು.





ವಕೀಲರ ಸಂರಕ್ಷಣಾ ಕಾಯ್ದೆಗೆ ಆಗ್ರಹ, ಸಚಿವ ಮಾಧುಸ್ವಾಮಿ ಮೇಲೆ ಆಕ್ರೋಶ

ಸುವರ್ಣಸೌಧಕ್ಕೆ ವಕೀಲರ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಕೀಲರ ಸಂರಕ್ಷಣಾ ಕಾಯ್ದೆ ರಚಿಸಿ, ಜಾರಿಗೊಳಿಸಲು ಆಗ್ರಹಪಡಿಸಿ ಮಂಗಳವಾರ ಇಲ್ಲಿ ಬೃಹತ್ ರ್‍ಯಾಲಿ ನಡೆಸಿದ ವಕೀಲರು, ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಿದರು. ನಾಲ್ಕು ತಾಸು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಬಂದ್ ಮಾಡಿದರು.

ಮೆರವಣಿಗೆಗೆ ತಡೆಯೊಡ್ಡಿದ ಪೊಲೀಸರ ವಿರುದ್ಧವೂ ಸಿಡಿದೆದ್ದರು. ಸುವರ್ಣ ವಿಧಾನಸೌಧ ಒಂದು ಕಿ.ಮೀ ದೂರದಲ್ಲಿಇರುವಂತೆ-ಯೇ ಪೊಲೀಸರು ಹೆದ್ದಾರಿ ಮೇಲೆಯೇ ಬ್ಯಾರಿಕೇಡ್ ಇಟ್ಟು, ಹಗ್ಗ ಕಟ್ಟಿ ರ್‍ಯಾಲಿ ತಡೆದರು. ಆಕ್ರೋಶಗೊಂಡ ವಕೀಲರು ಪೊಲೀಸರೊಂದಿಗೆ ಜಟಾಪಟಿಗೆ ಇಳಿದರು. ಬ್ಯಾರಿಕೇಡ್‌ಗಳನ್ನು ಕಿತ್ತೆಸೆದು, ಲಾಠಿ–ಹಗ್ಗಗಳನ್ನು ಕಸಿದುಕೊಂಡರು.

ಮಹಿಳಾ ಪೊಲೀಸರು ನಿಂತಿದ್ದ ಕಡೆಗೆ ಮಹಿಳಾ ವಕೀಲರು ನುಗ್ಗಿದರು. ಎಳೆದಾಟದಲ್ಲಿ ಕೆಳಕ್ಕೆ ಬಿದ್ದು ಕೆಲ ಕಾನ್‌ಸ್ಟೆಬಲ್‌ಗಳು ಗಾಯಗೊಂಡರು. ಮತ್ತೆ ಕೆಲವರು ಹೆದ್ದಾರಿ ಪಕ್ಕದ ಸರ್ವಿಸ್ ರಸ್ತೆಗೆ ಇಳಿದು, ಪೊಲೀಸರ ರಕ್ಷಣಾ ಗೋಡೆ ಭೇದಿಸಿ ಮುನ್ನುಗ್ಗಿದರು. ಹಲವು ವಕೀಲರು ಹೊಲಗಳಿಗೆ ಇಳಿದು ಅಲ್ಲಿಂದ ಸುವರ್ಣಸೌಧದ ಕಡೆಗೆ ಓಡಿದರು.

ಸುವರ್ಣ ಸೌಧ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆಗೊಂಡಿದ್ದ ಪೊಲೀಸರನ್ನೂ ದಾಟಿ, ಕೆಲವರು ಸೌಧದ ಬೃಹತ್ ಗೇಟುಗಳ ಮೇಲೆ ಹತ್ತಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾನೂನು ಸಚಿವ ಮಾಧುಸ್ವಾಮಿ ವಿರುದ್ಧ ಘೋಷಣೆ ಮೊಳಗಿಸಿದರು. ಗೇಟ್ ಬಂದ್ ಮಾಡಿದ ಪೊಲೀಸರು ಪ್ರತಿಭಟನಾಕಾರರನ್ನು ತಡೆದರು.

ಇತ್ತ ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಳಿತ ವಕೀಲರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಸ್ಥಳಕ್ಕೆ ಬಂದ ಸಚಿವ ಗೋವಿಂದ ಕಾರಜೋಳ ಮಾತು ಕೇಳಿಸಿಕೊಳ್ಳಲು ಸಿದ್ಧರಿರಲಿಲ್ಲ. ಸಚಿವ ಅಶ್ವತ್ಥನಾರಾಯಣ, ಶಾಸಕರಾದ ಅನಿಲ ಬೆನಕೆ, ಮಹಾಂತೇಶ ದೊಡ್ಡಗೌಡರ, ಹಿರಿಯ ಪೊಲೀಸ್ ಅಧಿಕಾರಿಗಳು ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದರೂ, ಫಲ ನೀಡಲಿಲ್ಲ.

ನಾಲ್ಕು ತಾಸು ಹೆದ್ದಾರಿ ಸ್ತಬ್ಧ: ಕರ್ನಾಟಕ ರಾಜ್ಯ ವಕೀಲರ ಪರಿಷತ್ ಹಾಗೂ ವಕೀಲರ ಸಂಘದ ಮುಂದಾಳತ್ವದಲ್ಲಿ ನಡೆದ ರ್‍ಯಾಲಿಗೆ ರಾಜ್ಯದ ಎಲ್ಲ ಕಡೆಯಿಂದಲೂ ವಕೀಲರು ಬಂದು ಸೇರಿದ್ದರು. ರಾಷ್ಟ್ರೀಯ ಹೆದ್ದಾರಿ ಮೇಲೇ 10 ಕಿ.ಮೀ ನಡೆದರು. ಎರಡೂ ಬದಿಯ ಸಂಚಾರ ಅಸ್ತವ್ಯಸ್ತವಾಯಿತು. ಹೆದ್ದಾರಿ ಇಕ್ಕೆಲಗಳಲ್ಲಿ 15 ಕಿ.ಮೀ ದೂರದವರೆಗೆ ಸಾವಿರಾರು ವಾಹನಗಳು ಸಾಲುಗಟ್ಟಿ ನಿಂತವು.

ಹೆದ್ದಾರಿಯ ನಾಲ್ಕು ಮಾರ್ಗಗಳು, ಸರ್ವಿಸ್ ರಸ್ತೆಗಳನ್ನೂ ಬಂದ್ ಮಾಡಲಾಯಿತು. ಅನಾರೋಗ್ಯ ಇದ್ದವರು, ಆಂಬುಲೆನ್ಸ್‌ಗಳನ್ನು ಪೊಲೀಸರು ದಾಟಿಸಿದರು. ಇದೇ ಮಾರ್ಗದಲ್ಲಿ ಶಾಸಕ ರಮೇಶ ಜಾರಕಿಹೊಳಿ ಅವರಿದ್ದ ಕಾರು ಬಂದಾಗ ವಕೀಲರು ಅವರಿಗೂ ತಡೆಯೊಡ್ಡಿದರು. ಅರ್ಧ ತಾಸು ಕಾದ ಶಾಸಕ ಕಾರಿನಿಂದಿಳಿದು ನಡೆದುಕೊಂಡು ಹೋದರು.

‘ಈ ಅಧಿವೇಶನದಲ್ಲೇ ಮಸೂದೆ’

ಮುಖ್ಯಮಂತ್ರಿ ಅವರ ಪರವಾಗಿ ವಕೀಲರೊಂದಿಗೆ ಮಾತನಾಡಿದ ಸಚಿವ ಆರ್. ಅಶೋಕ, ‘ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ತರಲು ಸರ್ಕಾರ ಬದ್ಧವಾಗಿದೆ’ ಎಂದರು.

ಆಗ ಪ್ರತಿಭಟನಾಕಾರರು, ಇದೇ ಅಧಿವೇಶನದಲ್ಲಿ ಕ್ರಮವಹಿಸಬೇಕು ಎಂದು ಪಟ್ಟುಹಿಡಿದರು. ಇದಕ್ಕೆ ಅಶೋಕ, ‘ಉಳಿದ ಮೂರು ದಿನಗಳಲ್ಲಿ ಮಸೂದೆ ಮಂಡಿಸಲು ಯತ್ನಿಸುತ್ತೇವೆ’ ಎಂದು ತಿಳಿಸಿದರು.

ಪಾನ್ ಮಸಾಲ, ಗುಟ್ಕಾ, ತಂಬಾಕು ಉತ್ಪನ್ನಗಳ ಮಾರಾಟ: ಜಿಎಸ್‌ಟಿ ವಂಚನೆ

9 ಜಿಲ್ಲೆಗಳ 37 ಕಡೆ ಲೋಕಾಯುಕ್ತ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನ್ ಮಸಾಲ, ಗುಟ್ಕಾ ಸೇರಿ ಜಗಿಯುವ ತಂಬಾಕು ಉತ್ಪನ್ನಗಳ ಮಾರಾಟದಲ್ಲಿ ಬೃಹತ್ ಪ್ರಮಾಣದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚನೆ ನಡೆಯುತ್ತಿರುವ ಆರೋಪಕ್ಕೆ ಸಂಬಂಧಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ, ವಿಚಾರಣೆ ಆರಂಭಿಸಿದ್ದಾರೆ. ಅದರ ಭಾಗವಾಗಿ ಲೋಕಾಯುಕ್ತ ಪೊಲೀಸರು ರಾಜ್ಯದ ಒಂಬತ್ತು ಜಿಲ್ಲೆಗಳ 37 ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿದರು.

ಜಗಿಯುವ ತಂಬಾಕು ಉತ್ಪನ್ನಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ವಿಧಿಸಲಾಗುತ್ತದೆ. ಈ ಉತ್ಪನ್ನಗಳ ಉತ್ಪಾದಕರು, ಸಗಟುದಾರರು ಮತ್ತು ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಶಾಮೀಲಾಗಿ ತೆರಿಗೆ ವಂಚಿಸುತ್ತಿರುವ ಆರೋಪವಿದೆ. ಬಿಲ್ ಸೃಜಿಸಿ, ತೆರಿಗೆ ಪಾವತಿಸದೇ ಈ ಉತ್ಪನ್ನಗಳ ಸಾಗಣೆ ಮತ್ತು ಮಾರಾಟದ ಆರೋಪ ಕುರಿತು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತಂಬಾಕು ಉತ್ಪನ್ನಗಳ ಮಾರಾಟದಲ್ಲಿ ತೆರಿಗೆ ವಂಚನೆ ನಡೆಯುತ್ತಿರುವ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದ ವರದಿ ಆಧರಿಸಿ ಲೋಕಾಯುಕ್ತ ಪೊಲೀಸರು ಪ್ರಾಥಮಿಕ ವಿಚಾರಣೆ ನಡೆಸಿದ್ದರು. ಉತ್ಪಾದಕರು, ಸಗಟುದಾರರು, ಮಾರಾಟಗಾರರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳು ಶಾಮೀಲಾಗಿ ತೆರಿಗೆ ವಂಚಿಸುತ್ತಿರುವ ಕುರಿತು ತನಿಖಾ ತಂಡ ಲೋಕಾಯುಕ್ತರಿಗೆ ವರದಿ ಸಲ್ಲಿಸಿತ್ತು.

ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ನೇತೃತ್ವದಲ್ಲಿ ಬೆಂಗಳೂರು, ತುಮಕೂರು, ಧಾರವಾಡ, ಬೆಳಗಾವಿ, ಬಾಗಲಕೋಟೆ, ಬಳ್ಳಾರಿ, ಚಿತ್ರದುರ್ಗ, ಬೀದರ್ ಮತ್ತು ಮೈಸೂರು ಜಿಲ್ಲೆಗಳ 37 ಕಡೆ ಮಂಗಳವಾರ ಏಕಕಾಲಕ್ಕೆ ಶೋಧ ನಡೆಸಲಾಯಿತು. 150 ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಒಳಗೊಂಡ 37 ತಂಡಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದವು. ಒಂಬತ್ತು ಜಿಲ್ಲೆಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ ಜಂಟಿ ಆಯುಕ್ತರು, ಉಪ ಆಯುಕ್ತರು ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಇನ್‌ಸ್ಪೆಕ್ಟರ್‌ಗಳ ಕಚೇರಿಗಳಲ್ಲಿ ಶೋಧ ನಡೆಯುತ್ತಿದೆ. ಈ ಜಿಲ್ಲೆಗಳಲ್ಲಿ ತಲಾ ಒಂದು ಕಚೇರಿಯಲ್ಲಿ ಶೋಧ ನಡೆಸಿದ್ದು, ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

ಚಿತ್ರದುರ್ಗದ ಸಿದ್ಧಿ ಪ್ಯಾಕೇಜಿಂಗ್ ಇಂಡಸ್ಟ್ರೀಸ್ (ಸಿದ್ಧಿ ಪಾನ್ ಮಸಾಲ), ಬಳ್ಳಾರಿಯ ಮಂಜುನಾಥ ಬಿಜಿನೆಸ್, ಬಾಗಲಕೋಟೆಯ ವಿ.ಎಂ. ಟ್ರೇಡರ್ಸ್ ಸೇರಿ 25 ಉದ್ಯಮಗಳ ಕಚೇರಿಗಳು, ಗೋದಾಮುಗಳು, ವಿತರಣಾ ಕೇಂದ್ರಗಳಲ್ಲಿ ಶೋಧ ನಡೆಸಲಾಗಿದೆ.

ಈ ಸಂಸ್ಥೆಗಳು ನಡೆಸಿರುವ ವಹಿವಾಟು, ತೆರಿಗೆ ಪಾವತಿ ವಿವರ, ಬ್ಯಾಂಕ್‌ನಲ್ಲಿ ನಡೆಸಿರುವ ಹಣಕಾಸು ವಹಿವಾಟು ಹಾಗೂ ದಾಸ್ತಾನು ಇರಿಸಿಕೊಂಡಿರುವ ತಂಬಾಕು ಉತ್ಪನ್ನಗಳ ಪ್ರಮಾಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಪಡಿಸಿಕೊಂಡಿದೆ.

ತೆರಿಗೆರಹಿತ ವಹಿವಾಟು ಪತ್ತೆ

‘ಗೋದಾಮುಗಳಲ್ಲಿ ಬೃಹತ್ ಪ್ರಮಾಣದ ದಾಸ್ತಾನನ್ನು ಲೆಕ್ಕಪತ್ರ ಇಲ್ಲದೇ ಇರಿಸಿಕೊಂಡಿರುವುದು ಪತ್ತೆಯಾಗಿದೆ. ಖರೀದಿ ಮತ್ತು ಮಾರಾಟದ ‘ಇನ್‌ವಾಯ್ಸ್’, ದಾಸ್ತಾನು ರಿಜಿಸ್ಟರ್ ಇಲ್ಲದೇ ತಂಬಾಕು ಉತ್ಪನ್ನಗಳನ್ನು ಸಂಗ್ರಹಿಸಿರುವುದು ಕಂಡುಬಂದಿದೆ. ಜಿಎಸ್‌ಟಿ ವಂಚಿಸಿ ಮಾರಾಟ ಮಾಡುವುದಕ್ಕಾಗಿ ಈ ಮಾರ್ಗ ಅನುಸರಿಸಲಾಗುತ್ತಿದೆ. ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಶಾಮೀಲಾತಿ ಇಲ್ಲದೇ ಈ ವಂಚನೆ ನಡೆಯಲು ಸಾಧ್ಯವಿಲ್ಲ’ ಎಂದು ಲೋಕಾಯುಕ್ತದ ತನಿಖಾ ತಂಡ ತಿಳಿಸಿದೆ.

ಕೆಲವು ವರ್ತಕರು ಜಿಎಸ್‌ಟಿ ನೋಂದಣಿ ಸಂಖ್ಯೆಯನ್ನೇ ಹೊಂದಿರಲಿಲ್ಲ. ಕೆಲವೆಡೆ ದಾಸ್ತಾನು ರಿಜಿಸ್ಟರ್‌ನಲ್ಲಿ ಲೆಕ್ಕ ಹೊಂದಿಕೆಯಾಗುತ್ತಿಲ್ಲ. ತೆರಿಗೆ ವಂಚನೆಯನ್ನು ಖಚಿತಪಡಿಸಬಲ್ಲ ಹಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತನಿಖಾ ತಂಡದ ಮಾಹಿತಿ ನೀಡಿದೆ.

ಲೋಕಾಯುಕ್ತ ದಾಳಿಯ ವಿವರ

ಜಿಲ್ಲೆ	ಶೋಧ ನಡೆದ ಸ್ಥಳಗಳು
ಬೆಂಗಳೂರು	9
ಬಳ್ಳಾರಿ	6
ತುಮಕೂರು	4
ಬಾಗಲಕೋಟೆ	4
ಬೆಳಗಾವಿ	3
ಬೀದರ್	3
ಚಿತ್ರದುರ್ಗ	2
ಮೈಸೂರು	2

ಬಿಸಿಯೂಟದ ಸಾಂಬಾರಿನಲ್ಲಿ ಇಲಿ!

ಮುಂಡಗೋಡ: ‘ಇಲ್ಲಿನ ಶಾಸಕರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ, ಸೋಮವಾರ ಮಧ್ಯಾಹ್ನ ಬಿಸಿಯೂಟ ಸಾಂಬಾರಿನಲ್ಲಿ ಇಲಿ ಬಿದ್ದರೂ, ಅದನ್ನೇ ಬಡಿಸಿದ್ದಾರೆ’ ಎಂದು ಪಾಲಕರು ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡರು.

ವಸತಿ ಶಾಲೆಗಳ ಪ್ರವೇಶಕ್ಕೆ ಅರ್ಜಿ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಜ. 5ರಿಂದ 22ರವರೆಗೆ ಅವಕಾಶ ನೀಡಲಾಗಿದೆ.

5ನೇ ತರಗತಿ ಓದುತ್ತಿರುವ ಮಕ್ಕಳು 6ನೇ ತರಗತಿಯ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಮಾರ್ಚ್ 12ರಂದು ಬೆಳಿಗ್ಗೆ 11ರಿಂದ 1ರವರೆಗೆ 100 ಅಂಕಗಳಿಗೆ ಪ್ರವೇಶ ಪರೀಕ್ಷೆ ನಡೆಸಲಿದೆ. ಮಾಹಿತಿಗೆ http://kea/kar.nic.in ವೀಕ್ಷಿಸಬಹುದು.

ಉದ್ಯೋಗ ವಾಣಿ

ಸುವರ್ಣ ಸೌಧಕ್ಕೆ ಸಕ್ಕರೆ ನಿರ್ದೇಶನಾಲಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸಲಾಗುವುದು ಎಂದು ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಮಂಗಳವಾರ ಈ ವಿಷಯ ತಿಳಿಸಿದ ಅವರು, 'ಚಳಿಗಾಲದ ಅಧಿವೇಶನ ಮುಗಿಯುತ್ತಿದ್ದಂತೆ ನಿರ್ದೇಶನಾಲಯದ ಕಚೇರಿಯನ್ನು ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರಿಸಲಾಗುವುದು. ಮಂಡ್ಯ ಹಾಗೂ ಇತರಭಾಗಗಳ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಅನುಕೂಲವಾಗುವಂತೆ ಬೆಂಗಳೂರಿನಲ್ಲಿ ಆಯುಕ್ತಾಲಯ ಕಾರ್ಯನಿರ್ವಹಿಸಲಿದೆ' ಎಂದರು.ರಾಜ್ಯದಲ್ಲಿನ 73 ಸಕ್ಕರೆಕಾರ್ಖಾನೆಗಳಲ್ಲಿ 60 ಕಾರ್ಖಾನೆಗಳು ಉತ್ತರ ಕರ್ನಾಟಕ ಭಾಗದಲ್ಲಿವೆ. ಆದಕ್ಕಾಗಿ ನಿರ್ದೇಶನಾಲಯವನ್ನು ಇಲ್ಲಿಗೆ ಸ್ಥಳಾಂತರಿಸಲಾಗುತ್ತಿದೆ ಎಂದರು.

ಭಯೋತ್ಪಾದನೆ ಕುರಿತ ಚರ್ಚೆ: ವಿಧಾನಸಭೆಯಲ್ಲಿ ವಾಗ್ವಾದ– ಕಾಗೇರಿ ಕಿವಿಮಾತು

'ಮಾತನಾಡುವಾಗ ಎಚ್ಚರ ಇರಲಿ'

ಪ್ರಜಾವಾಣಿ ವಾರ್ತೆ



ವಿಧಾನಸಭೆ ಕಲಾಪದಲ್ಲಿ ಬಿಜೆಪಿಯ ಸಿ.ಟಿ. ರವಿ ಮಾತನಾಡಿದರು. ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಬಸನಗೌಡ ಪಾಟೀಲ ಯತ್ನಾಳ್ ಇದ್ದರು

ಬೆಳಗಾವಿ: 'ಜವಾಬ್ದಾರಿಯುತ ಸ್ಥಾನದಲ್ಲಿರುವ ಎಲ್ಲ ಶಾಸಕರೂ ಎಚ್ಚರಿಕೆಯಿಂದ ಮಾತನಾಡಬೇಕು. ಬೇಜವಾಬ್ದಾರಿಯಿಂದ ಮಾತನಾಡಿ ಸಮಾಜದ ಹಿತ ಕಡೆಗಣಿಸಬಾರದು' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕಿವಿಮಾತು ಹೇಳಿದರು.

ರಾಜ್ಯದಲ್ಲಿನ ಭಯೋತ್ಪಾದನಾ ಕೃತ್ಯಗಳ ಬಗ್ಗೆ ಬಿಜೆಪಿಯ ಸಿ.ಟಿ. ರವಿ ಪ್ರಸ್ತಾಪಿಸಿದ ವಿಷಯದ ಮೇಲೆ ನಡೆದ ಚರ್ಚೆಯ ಕೊನೆಯಲ್ಲಿ ಅವರು ಮಾತನಾಡಿದರು.

'ಭಯೋತ್ಪಾದನೆ ವಿಚಾರದಲ್ಲಿ ರಾಜಿ ಪ್ರಶ್ನೆಯೇ ಇಲ್ಲ. ಆದರೆ, ವಾಕ್ ಸ್ವಾತಂತ್ರ್ಯವಿದೆ ಎಂದು ಸ್ವೇಚ್ಛಾಚಾರದಂತೆ ಯಾರೂ ಮಾತನಾಡಬಾರದು. ಹಾಲಿಗೆ ಹುಳಿ ಹಿಂಡುವಂಥ ಕೆಲಸ ಯಾರೂ ಮಾಡಬಾರದು' ಎಂದೂ ಕಾಗೇರಿ ಹೇಳಿದರು.

ಇದಕ್ಕೂ ಮೊದಲ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಭಯೋತ್ಪಾದನೆ ನಿಗ್ರಹ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ. ಆದರೆ, ಭಯೋತ್ಪಾದನೆ ಬಗ್ಗೆ ಹಗುರವಾಗಿ ಮಾತನಾಡುವುದರಿಂದ ಮುಂದೆ ಆಗುವ ಅನಾಹುತಗಳನ್ನು ಕಡೆಗಣಿಸಬಾರದು' ಎಂದರು.

ಭಯೋತ್ಪಾದನೆಯ ಹುಟ್ಟು, ಭಾರತದ ಮೇಲಾದ ಪರಿಣಾಮ, ರಾಜ್ಯದಲ್ಲಿನ ಘಟನೆಗಳ ಬಗ್ಗೆ ಪ್ರಸ್ತಾಪಿಸಿದ ರವಿ, ಕೆ.ಜಿ. ಹಳ್ಳಿ, ಡಿ.ಜೆ. ಹಳ್ಳಿ ಗಲಭೆ ಪ್ರಕರಣವನ್ನೂ ಪ್ರಸ್ತಾಪಿಸಿದರು. 'ಕುಕ್ಕರ್ ಸ್ಫೋಟ ಪ್ರಕರಣದ ಬಗ್ಗೆ ಸದನದ ಸದಸ್ಯರೂ ಆದ ರಾಷ್ಟ್ರೀಯ ಪಕ್ಷವೊಂದರ ರಾಜ್ಯ ಘಟಕದ ಅಧ್ಯಕ್ಷರು ಹಿರಿಯ ಪೊಲೀಸ್ ಅಧಿಕಾರಿ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಮತೀಯ ಉನ್ಮಾದದ ಲಾಭ ಬಳಸಿಕೊಂಡು ಮತದ ಬೆಳೆ ಬೆಳೆಯುವ ಸಲುವಾಗಿ' ಎಂದು ಆಕ್ಷೇಪಿಸಿದರು.

ಆಗ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್, 'ಸಿ.ಟಿ. ರವಿ ಅವರ ಆಚಾರ, ವಿಚಾರ, ಪ್ರಚಾರ, ಹಾವ-ಭಾವ ನಮಗೂ ಅರ್ಥವಾಗುತ್ತದೆ. ಭಯೋತ್ಪಾದನೆ ವಿಚಾರವಾಗಿ ಮಾತನಾಡುವುದು ಅವರ ಕಾರ್ಯಸೂಚಿ. ಅದಕ್ಕೆ ನನ್ನ ಆಕ್ಷೇಪ ಇಲ್ಲ. ಈ ರಾಜ್ಯದಲ್ಲಿ ಎಲ್ಲ ರೀತಿಯ ಕಳ್ಳತನ ನೋಡಿದ್ದೇವೆ. ಹಣ ಕದಿಯುವವರು, ಒಡವೆ ಕದಿಯುವವರು, ಚಪ್ಪಲಿ ಕದಿಯುವವರನ್ನು ನೋಡಿದ್ದೆವು. ಆದರೆ, ಮತ ಕಳ್ಳತನ ನೋಡಿರಲಿಲ್ಲ' ಎಂದರು.

'ಮತದಾರರ ಮಾಹಿತಿ ಕಳವು ವಿಚಾರ ಚರ್ಚೆ ಆಗುವಾಗ ವಿಷಯಾಂತರ ಮಾಡಲು ಈ ಕುಕ್ಕರ್ ಸ್ಫೋಟ ಪ್ರಕರಣ ಬಳಸಿಕೊಂಡಿದ್ದಾರೆ ಎಂಬ ಅರ್ಥದಲ್ಲಿ ನಾನು ಹೇಳಿಕೆ ನೀಡಿದ್ದೆ' ಎಂದು ಸ್ಪಷ್ಟನೆ ನೀಡಿದರು.

ಆಗ ಬಿಜೆಪಿ ಸದಸ್ಯರು ಗದ್ದಲ ಸೃಷ್ಟಿಸಲು ಮುಂದಾದಾಗ, 'ಎಷ್ಟೇ ಜನ ಎದ್ದು ನಿಂತು ಗದ್ದಲ ಮಾಡಿದರೂ ಈ ಶಿವಕುಮಾರ್ ಹೆದರುವ ಮಗ ಅಲ್ಲ' ಎಂದು ಹೇಳಿದರು.

ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ, 'ಮತದಾರರ ದತ್ತಾಂಶ ಕಳವು ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಲಾಗುತ್ತಿದೆ ಎಂದು ಭಯೋತ್ಪಾದನೆ ಕೃತ್ಯದ ಬಗ್ಗೆ ಹಗುರವಾಗಿ ಮಾತನಾಡುವುದು ಎಷ್ಟು ಸರಿ? ಶಂಕಿತ ಉಗ್ರನನ್ನು ಅಮಾಯಕ ಎಂದರೆ ಸಹಿಸಿಕೊಳ್ಳಬೇಕೆ' ಎಂದು ಕಿಡಿಕಾರಿದರು.

ಆಗ ಡಿ.ಕೆ.ಶಿವಕುಮಾರ್ ಅವರು, 'ಭಯೋತ್ಪಾದಕ ಕೃತ್ಯ ಎಸಗಿದವನನ್ನು ಅಮಾಯಕ ಎನ್ನಲು ನನಗೇನು ತಲೆ ಕೆಟ್ಟಿದೆಯೇ. ಭಯೋತ್ಪಾದನೆ ಮಾತ್ರವಲ್ಲ, ನೈತಿಕ ಪೊಲೀಸ್‌ಗಿರಿಯನ್ನೂ ವಿರೋಧಿಸುತ್ತೇನೆ' ಎಂದು ಹೇಳಿದರು.

> ಭಯೋತ್ಪಾದಕರ ಬಗ್ಗೆ ಆಡುವ ಸಣ್ಣ ಒಳ್ಳೆಯ ಮಾತು ಕೂಡಾ ಪ್ರಚೋದನೆ ಕೊಟ್ಟಂತಾಗಲಿದೆ. ಈ ವಿಚಾರದಲ್ಲಿ ರಾಜಕಾರಣ ಬೇಡ. ಬಾಂಬ್‌ಗೆ ಜಾತಿ, ಧರ್ಮವಿಲ್ಲ
> **ಆರಗ ಜ್ಞಾನೇಂದ್ರ**
> ಗೃಹ ಸಚಿವ

> ಭಯೋತ್ಪಾದಕ ಕೃತ್ಯದ ವಿರುದ್ಧ ಮೃದುಧೋರಣೆಯ ಪ್ರಶ್ನೆಯೇ ಇಲ್ಲ. ಗಾಂಧಿ ಕೊಂದವರಿಗೆ ದೇವಸ್ಥಾನ ಕಟ್ಟುವವರನ್ನೂ ಭಯೋತ್ಪಾದಕರೆಂದು ಗುರುತಿಸಿ ಕ್ರಮ ಜರುಗಿಸಬೇಕು
> **ಯು.ಟಿ. ಖಾದರ್**
> ವಿರೋಧ ಪಕ್ಷದ ಉಪನಾಯಕ

ಸುದ್ದಿ 2 ನಿಮಿಷ

ಯಶಸ್ವಿನಿ: 20 ಲಕ್ಷ ಮಂದಿ ನೋಂದಣಿ

ಬೆಂಗಳೂರು: 'ರಾಜ್ಯ ಸರ್ಕಾರ ಜಾರಿಗೊಳಿಸಿರುವ ಯಶಸ್ವಿನಿ ಯೋಜನೆ ಅಡಿಯಲ್ಲಿ ಇದುವರೆಗೆ 19.67 ಲಕ್ಷ ಮಂದಿ ನೋಂದಣಿ ಮಾಡಿಕೊಂಡಿದ್ದಾರೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.



ವಿಧಾನ ಪರಿಷತ್‌ನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಸಿ.ಎನ್. ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಡಿಸೆಂಬರ್ 31ರವರೆಗೆ ನೋಂದಣಿಗೆ ಅವಕಾಶವಿದೆ. 30 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿ ಹೊಂದಲಾಗಿದೆ' ಎಂದು ವಿವರಿಸಿದರು.

'ನಿಗದಿಪಡಿಸಿದ ಗುರಿ ತಲುಪಲು ಸಾಧ್ಯವಾಗದಿದ್ದರೆ ಯಶಸ್ವಿನಿ ಯೋಜನೆಗೆ ಸಂಬಂಧಿಸಿದ ಸಮಿತಿಯು ನೋಂದಣಿಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ' ಎಂದು ತಿಳಿಸಿದರು.

7 ವರ್ಷ ಕಳೆದರೂ ಹೆದ್ದಾರಿ ದುರಸ್ತಿ ಇಲ್ಲ

ಬೆಳಗಾವಿ: ಸಕಲೇಶಪುರ –ಮಾರೇನಹಳ್ಳಿ ಮಧ್ಯೆ 10 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ದುರಸ್ತಿ ಕುರಿತು ಕೇಂದ್ರ ಸಚಿವ ನಿತಿನ್ ಗಡ್ಕರಿ ಜತೆ ಮಾತುಕತೆ ನಡೆಸುವುದಾಗಿ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ತಿಳಿಸಿದರು.

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಜೆಡಿಎಸ್‌ನ ಎಚ್.ಕೆ.ಕುಮಾರಸ್ವಾಮಿ ವಿಷಯ ಪ್ರಸ್ತಾಪಿಸಿ, 'ಏಳು ವರ್ಷಗಳ ಹಿಂದೆ ದುರಸ್ತಿ ಕಾರ್ಯ ಆರಂಭಿಸಿದ್ದರೂ ಇನ್ನೂ ಪೂರ್ಣಗೊಂಡಿಲ್ಲ. ಬೆಂಗಳೂರು–ಮಂಗಳೂರು ಸಂಪರ್ಕಿಸುವ ಈ ರಸ್ತೆ ಇದಾಗಿದೆ. 10 ಕಿ.ಮೀ ಉದ್ದ ರಸ್ತೆ ಕೆಟ್ಟು ಹೋಗಿದ್ದು, ವಾಹನ ಸಂಚಾರಕ್ಕೂ ಯೋಗ್ಯವಾಗಿಲ್ಲ. ಆ ರಸ್ತೆಯಲ್ಲಿ ಹಾದು ಹೋಗುವ ಪ್ರಯಾಣಿಕರು ನನ್ನ ಫೋನ್ ನಂಬರ್ ಕೇಳಿಕೊಂಡು ಕರೆ ಮಾಡಿ ಬೈಯ್ಯುತ್ತಾರೆ' ಎಂದು ಅಳಲು ತೋಡಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿ ಸಚಿವ ಪಾಟೀಲ, 'ಜನವರಿ 4 ಮತ್ತು 5 ರಂದು ನಿತಿನ್ ಗಡ್ಕರಿ ಅವರು ರಾಜ್ಯಕ್ಕೆ ಬರಲಿದ್ದು, ಆ ವೇಳೆ ಚರ್ಚಿಸಿ ಕಾಮಗಾರಿ ಬೇಗ ಪೂರ್ಣಗೊಳಿಸಲು ಮನವಿ ಮಾಡುತ್ತೇನೆ' ಎಂದರು.

ಜನವರಿಯಲ್ಲಿ ಸಿ.ಎಂ ನೇತೃತ್ವದಲ್ಲಿ ಕೇಂದ್ರಕ್ಕೆ ನಿಯೋಗ: ಮಾಧುಸ್ವಾಮಿ

ಕಾಡುಗೊಲ್ಲರು ಎಸ್‌ಟಿ ಪಟ್ಟಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಾಡುಗೊಲ್ಲ ಸಮುದಾಯವನ್ನು ಪರಿಶಿಷ್ಟ ಪಂಗಡದ ಜಾತಿಗಳ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಈ ಕುರಿತು ಕೇಂದ್ರ ಸಾಮಾಜಿಕ ನ್ಯಾಯ ಸಬಲೀಕರಣ ಸಚಿವರ ಜೊತೆ ಚರ್ಚಿಸಲು ಜನವರಿಯಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ನಿಯೋಗ ತೆರಳಿದೆ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ತಿಳಿಸಿದರು.

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಬಿಜೆಪಿಯ ಗೂಳಿಹಟ್ಟಿ ಶೇಖರ್ ಅವರು ಪ್ರಸ್ತಾಪಿಸಿದ ಈ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಈ ಹಿಂದೆ ಹಿಂದುಳಿದ ಬುಡಕಟ್ಟುಗಳ ಪಟ್ಟಿಯಲ್ಲಿದ್ದ ಕಾಡುಗೊಲ್ಲ ಮತ್ತು ವಾಲ್ಮೀಕಿ ನಾಯಕ ಜಾತಿಗಳ ಪೈಕಿ ವಾಲ್ಮೀಕಿ ನಾಯಕರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದಾಗ ಕಾಡುಗೊಲ್ಲರನ್ನು ಪ್ರವರ್ಗ 1 ರಲ್ಲಿ ಮುಂದುವರಿಸಲಾಯಿತು' ಎದು ಹೇಳಿದರು.

'ಕಾಡುಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಅಗತ್ಯವಿದ್ದ ಕುಲಶಾಸ್ತ್ರ ಅಧ್ಯಯನ ಕೈಗೊಳ್ಳಲು ಮಾನವಶಾಸ್ತ್ರಜ್ಞರಾದ ಅನ್ನಪೂರ್ಣಮ್ಮ ನೇತೃತ್ವದ ಸಮಿತಿ ರಚಿಸಲಾಯಿತು. ಅವರು ನೀಡಿದ ವರದಿ ಆಧರಿಸಿ 2014 ರಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು. ಕುಲಶಾಸ್ತ್ರ ಅಧ್ಯಯನದ ಕೆಲವು ಅಂಶಗಳಲ್ಲಿ ಕಾಡುಗೊಲ್ಲರ ಕೆಲವು ಆಚರಣೆಗಳು ಎಸ್‌ಟಿಗೆ ಸೇರ್ಪಡೆ ಮಾಡಲು ಪೂರಕವಾಗಿಲ್ಲ ಎಂದು ಕೇಂದ್ರ ಸರ್ಕಾರ ಕೆಲವು ಸ್ಪಷ್ಟನೆಗಳನ್ನು ಕೇಳಿತ್ತು. ಬುಡಕಟ್ಟು ಸಂಶೋಧನಾ ಸಂಸ್ಥೆಯ ಮೂಲಕ ಸ್ಪಷ್ಟನೆಗಳನ್ನು ಪಡೆದು ಕೇಂದ್ರಕ್ಕೆ ಕಳುಹಿಸಲಾಗಿದೆ. ಈ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಸರ್ಕಾರ ಬದ್ಧತೆ ಹೊಂದಿದೆ' ಎಂದು ಹೇಳಿದರು.

ಶಾಸಕಿ ಪೂರ್ಣಿಮಾ ಮಾತನಾಡಿ, 'ಕಳೆದ ತಿಂಗಳು ದೆಹಲಿಗೆ ತೆರಳಿದ್ದ ಕಾಡುಗೊಲ್ಲ ಸಮುದಾಯದ ನಿಯೋಗಕ್ಕೆ ಕೇಂದ್ರ ಸಚಿವ ಅರ್ಜುನ್ ಮುಂಡಾ ಅವರಿಂದ ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿದೆ' ಎಂದು ಹೇಳಿದರು.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾತನಾಡಿ, 'ಕಾಡುಗೊಲ್ಲರ ಸಂಸ್ಕೃತಿ, ಜೀವನಶೈಲಿ ಇವೆಲ್ಲವುಗಳನ್ನು ನೋಡಿದರೆ ಆದಿವಾಸಿ ಪಂಗಡವೊಂದಕ್ಕೆ ಇರಬೇಕಾದ ಎಲ್ಲಾ ಗುಣಲಕ್ಷಣಗಳು ಅವರಲ್ಲಿ ಇವೆ. ಹೀಗಾಗಿ ರಾಜ್ಯ ಸರ್ಕಾರ ಕೂಡಲೇ ಸಂಬಂಧಪಟ್ಟ ಸಚಿವರನ್ನು ಸಂಪರ್ಕಿಸಿ, ಅವರ ಮೂಲಕ ಸಂಸತ್ತಿನಲ್ಲಿ ಸಂವಿಧಾನ ತಿದ್ದುಪಡಿ ಮಾಡಿಸಿ, ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುವ ಕೆಲಸ ಮಾಡಬೇಕು' ಎಂದು ಒತ್ತಾಯಿಸಿದರು.

'ಹಾಸನ ಅಂದ್ರೆ ಅಧಿಕಾರಿಗಳಿಗೆ ಭಯ'

ಬೆಂಗಳೂರು: 'ಹಾಸನ ಅಂದ್ರೆ ಎಲ್ಲ ಅಧಿಕಾರಿಗಳಿಗೆ ಭಯ. ಯಾಕೆ ಅಂತ ಹೇಳೋಲ್ಲ. ಅಧಿಕಾರಿಗಳು ಅಲ್ಲಿಗೆ ತನಿಖೆ ಮಾಡಲು ಹೋಗುತ್ತಿಲ್ಲ. ಸರ್ಕಾರ ನಿಮ್ಮೊಂದಿಗೆ ಇದೆ ಎಂದು ಧೈರ್ಯ ತುಂಬಿ ಕಳುಹಿಸುತ್ತಿದ್ದೇವೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಮೋಹನ್ ಕುಮಾರ್ ಕೊಂಡಜ್ಜಿ, ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ನಿಯಮ–64ರ ಅಡಿಯಲ್ಲಿ ಕೈಗೊಂಡಿರುವ ತನಿಖೆ ವಿಳಂಬವಾಗುತ್ತಿರುವ ಕುರಿತು ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸರ್ಕಾರ ಹೆದರಿಕೊಳ್ಳುವ ಪ್ರಶ್ನೆಯೇ ಇಲ್ಲ. ಆದರೆ, ಅಧಿಕಾರಿಗಳು ಭಯ ಪಡುತ್ತಿದ್ದಾರೆ' ಎಂದರು.

'ಈ ಬ್ಯಾಂಕ್‌ನ ಅವ್ಯವಹಾರಗಳ ಕುರಿತಾದ ಐದು ಆರೋಪಗಳ ಬಗ್ಗೆ ತನಿಖೆ ನಡೆಸಲು ಸಹಕಾರ ಸಂಘಗಳ ಉಪನಿಬಂಧಕ ಎನ್. ವೆಂಕಟೇಶ್ ಅವರನ್ನು ನೇಮಿಸಲಾಗಿತ್ತು. ಆದರೆ, ಇವರು ತನಿಖೆಯನ್ನೇ ಆರಂಭಿಸಲಿಲ್ಲ. ಹೀಗಾಗಿ, ಈ ಅಧಿಕಾರಿಯನ್ನು ಬದಲಾಯಿಸಿ ಮೈಸೂರಿನ ಸಹಕಾರ ಸಂಘಗಳ ಉಪನಿಬಂಧಕರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಮೂರು ತಿಂಗಳ ಒಳಗೆ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ ಮತ್ತು ರಕ್ಷಣೆಯ ಭರವಸೆ ನೀಡಲಾಗಿದೆ' ಎಂದು ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೋಹನ್ ಕೊಂಡಜ್ಜಿ ಅವರು, 'ಹಾಸನದಲ್ಲಿ ಇಂತಹ ಪರಿಸ್ಥಿತಿ ಇದೆ ಎಂದು ಗೊತ್ತಿರಲಿಲ್ಲ' ಎಂದರು.

ನಿರಂತರ ಜ್ಯೋತಿ ಅವ್ಯವಹಾರ ತನಿಖೆ ಲೋಕಾಯುಕ್ತಕ್ಕೆ?

ಬೆಳಗಾವಿ: 'ನಿರಂತರ ಜ್ಯೋತಿ ಯೋಜನೆಯಡಿ ಆಗಿರುವ ಅವ್ಯವಹಾರ ಆರೋಪಗಳ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಲು ಸಿದ್ಧ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಕೆ.ಎಸ್. ಈಶ್ವರಪ್ಪ, 'ನಿರಂತರ ಜ್ಯೋತಿಯಲ್ಲಿ ವ್ಯವಸ್ಥಿತವಾಗಿ ಅವ್ಯವಹಾರ ನಡೆದಿದೆ. ಅದನ್ನು ಮುಚ್ಚಿಹಾಕುವ ಪ್ರಯತ್ನ ಅಧಿಕಾರಿಗಳಿಂದ ನಡೆಯುತ್ತಿದೆ' ಎಂದರು.

'ಸಚಿವರು ತನಿಖೆಗಾಗಿ ಅಧಿಕಾರಿಗಳ ಸಮಿತಿ ರಚಿಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಿದ್ದರು. ಆದರೆ, ಒಂಬತ್ತು ತಿಂಗಳು ಕಳೆದರೂ ವರದಿ ಬಂದಿಲ್ಲ. ಎಲ್ಲ ಫೀಡರ್‌ಗಳಲ್ಲಿ ₹ 42 ಕೋಟಿಯಿಂದ ₹ 45 ಕೋಟಿ ವ್ಯತ್ಯಾಸ ಆಗಿರುವ ಸಾಧ್ಯತೆ ಇದೆ. ಇದು 2017ರಿಂದ ನಡೆದುಕೊಂಡು ಬಂದಿದೆ. ಅಧಿಕಾರಿಗಳು ಗುತ್ತಿಗೆದಾರರ ಹೊಂದಾಣಿಕೆಯಲ್ಲಿ ಈ ಅಕ್ರಮ ನಡೆದಿದ್ದು, ಇದನ್ನು ಮುಚ್ಚಿ ಹಾಕಲು ಸಚಿವರು ಅವಕಾಶ ನೀಡಬಾರದು' ಎಂದರು.

ಅದಕ್ಕೆ ಉತ್ತರಿಸಿದ ಸುನಿಲ್ ಕುಮಾರ್, '2015–16ರಲ್ಲಿ ನಿರಂತರ ಜ್ಯೋತಿ ಯೋಜನೆಯಲ್ಲಿ ಅವ್ಯವಹಾರವಾಗಿದೆ ಎಂದು ಮೇಲ್ನೋಟಕ್ಕೆ ಗೊತ್ತಾಗಿ ಇಬ್ಬರು ಅಧಿಕಾರಿಗಳನ್ನು ತಕ್ಷಣವೇ ಅಮಾನತು ಮಾಡಲಾಗಿತ್ತು. ಈ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳು, ಗುತ್ತಿಗೆದಾರರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಪರಿಶಿಷ್ಟರ ಮೀಸಲು ಹೆಚ್ಚಳ: ಪರಿಷತ್ ಅಸ್ತು

ಬೆಂಗಳೂರು: ಎಸ್‌ಸಿ/ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಒಟ್ಟಾರೆ ಶೇ 6 ರಷ್ಟು ಹೆಚ್ಚಿಸುವ ಮಸೂದೆಗೆ ವಿಧಾನ ಪರಿಷತ್ ಮಂಗಳವಾರ ಸರ್ವಾನುಮತದಿಂದ ಅಂಗೀಕಾರ ನೀಡಿತು.

ಮೀಸಲಾತಿ ಹೆಚ್ಚಳದ ಕುರಿತ ಈ ಮಸೂದೆಗೆ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಈ ಮಸೂದೆಯನ್ನು ಮಂಡಿಸಿದರು.

ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, 'ಈ ಮಸೂದೆ ಬೆಂಬಲಿಸುತ್ತೇವೆ. ಆದರೆ, ಚುನಾವಣೆ ವೇಳೆ ರಾಜಕೀಯವಾಗಿ ಪರಿಶಿಷ್ಟರಿಗೆ ಮೂಗಿಗೆ ತುಪ್ಪ ಸವರುವ ಕೆಲಸವನ್ನು ಸರ್ಕಾರ ಮಾಡುತ್ತಿದೆ' ಎಂದರು.

'ಈ ಮೀಸಲಾತಿ ಹೆಚ್ಚಳವನ್ನು ಷೆಡ್ಯೂಲ್–9ರ ವ್ಯಾಪ್ತಿಯಲ್ಲಿ ತರಲು ಏನು ತೊಂದರೆ ಇತ್ತು' ಎಂದು ಪ್ರಶ್ನಿಸಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಪ್ರತಿಕ್ರಿಯಿಸಿ, 'ನಾವು ಪರಿಶಿಷ್ಟರ ಹಿತಾಸಕ್ತಿಗೆ ಬದ್ಧರಾಗಿದ್ದು, ಮುಂದೆ ಎದುರಾಗುವ ಯಾವುದೇ ಪರಿಣಾಮಗಳನ್ನು ಎದುರಿಸಲು ಸಿದ್ಧ' ಎಂದರು. 'ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ಸಮಿತಿ ಆಧಾರದ ಮೇಲೆ ಮೀಸಲಾತಿ ಹೆಚ್ಚಿಸಲಾಗಿದ್ದು, ಕೇಂದ್ರಕ್ಕೆ ಕಳುಹಿಸಲಾಗುವುದು. ಒಂದು ವೇಳೆ, ಮೀಸಲಾತಿ ಹೆಚ್ಚಳ ಯಾವುದೇ ಹಂತದಲ್ಲಿ ತಿರಸ್ಕೃತಗೊಂಡರೆ ವಿಧಾನಮಂಡಲದ ಅಧಿವೇಶನವನ್ನು ಕರೆದು ಉಭಯ ಸದನಗಳಲ್ಲಿ ಮತ್ತೊಮ್ಮೆ ನಿರ್ಣಯ ಕೈಗೊಳ್ಳಲಾಗುವುದು' ಎಂದರು.

'ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಮಸೂದೆ'ಗೆ ವಿಧಾನಸಭೆಯ ಅಂಗೀಕಾರ

ಕೆಐಎಡಿಬಿ ಹಂಚಿದ ಜಮೀನಿನ ಲ್ಯಾಂಡ್ ಆಡಿಟ್– ಸಿಎಂ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೈಗಾರಿಕೆಗಳ ಸ್ಥಾಪನೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವತಿಯಿಂದ ಹಂಚಿಕೆ ಮಾಡಿದ ಜಮೀನಿನ ಸಮಗ್ರ ಲೆಕ್ಕಪರಿಶೋಧನೆಗೆ (ಲ್ಯಾಂಡ್ ಆಡಿಟ್) ಮೂರು ತಿಂಗಳ ಹಿಂದೆಯೇ ಆದೇಶಿಸಿದ್ದೇನೆ. ಆ ವರದಿಯನ್ನು ಸದನದಲ್ಲಿಯೇ ಮಂಡಿಸುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜ್ಯದಲ್ಲಿ ಹೂಡಿಕೆ ಪ್ರದೇಶಗಳು ಮತ್ತು ಕೈಗಾರಿಕಾ ಪ್ರದೇಶಗಳ ಸ್ಥಾಪನೆಗೆ ಎದುರಾಗುವ ತಾಂತ್ರಿಕ ಹಾಗೂ ಕಾನೂನಾತ್ಮಕ ಅಡೆತಡೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಮಸೂದೆ–2022'ಕ್ಕೆ ವಿಧಾನಸಭೆಯಲ್ಲಿ ಮಂಗಳವಾರ ಅಂಗೀಕಾರಗೊಂಡಿತು.

ಮಸೂದೆ ಮೇಲಿನ ಚರ್ಚೆ ವೇಳೆ ಮಾತನಾಡಿದ ಮುಖ್ಯಮಂತ್ರಿ, 'ಕೈಗಾರಿಕೆಗಳ ಸ್ಥಾಪನೆಗೆ ಜಮೀನು ಪಡೆದು 10 ವರ್ಷ ಹಲವೆಡೆ ಕೈಗಾರಿಕೆ ಸ್ಥಾಪಿಸಿಲ್ಲ. ಹೀಗಾಗಿ, 10 ವರ್ಷಗಳಲ್ಲಿ ಯಾವ ಕೈಗಾರಿಕೆಗೆ ಎಷ್ಟು ಜಮೀನು ಮಂಜೂರಾಗಿದೆ, ಜಮೀನು ದುರ್ಬಳಕೆ ಆಗಿದೆಯೇ? ಯಾಕೆ ಕೈಗಾರಿಕೆ ಸ್ಥಾಪಿಸಿಲ್ಲ ಎಂಬ ಬಗ್ಗೆ ಸಮಗ್ರವಾದ ಲ್ಯಾಂಡ್ ಆಡಿಟ್ ಮಾಡಿಸುತ್ತಿದ್ದೇವೆ. ನೀರು ಹಂಚಿಕೆಯೂ ಸೇರಿ ಆಡಿಟ್ ಮಾಡಲಾಗುತ್ತಿದೆ' ಎಂದರು.

'ಬಳ್ಳಾರಿ ಜಿಲ್ಲೆಯ ಕುಡಿತಿನಿ ಬಳಿ ಮಿತ್ತಲ್ ಸಂಸ್ಥೆಗೆ ಐದು ಸಾವಿರ ಎಕರೆ ಜಮೀನು ಹಂಚಿಕೆಯಾಗಿದೆ. ಅಲ್ಲಿ ಕೈಗಾರಿಕೆ ಸ್ಥಾಪಿಸದೆ, ಜಮೀನು ಸ್ವಾಧೀನದಲ್ಲಿಟ್ಟುಕೊಂಡಿರುವ ವಿಚಾರದಲ್ಲಿ ಮಿತ್ತಲ್ ಕಂಪನಿಗೆ ನೋಟಿಸ್ ನೀಡಲಾಗಿದೆ. ಅದೇ ರೀತಿ ಉತ್ತಮ್ ಗ್ಯಾಲ್ವೋ ಕಂಪನಿಗೂ ನೋಟಿಸ್ ನೀಡಲಾಗಿದೆ. ಆ ಕಂಪನಿ ಆರು ತಿಂಗಳು ಕಾಲಾವಕಾಶ ಕೇಳಿದೆ. ನಂತರ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ತಿಳಿಸಿದರು.

ಮಸೂದೆ ಮಂಡಿಸಿದ ಕೈಗಾರಿಕಾ ಸಚಿವ ಮುರಗೇಶ ನಿರಾಣಿ, 'ರಾಜ್ಯದಲ್ಲಿ 1,250 ಎಕರೆಗೂ ಮೀರಿದ ಹೂಡಿಕೆ ಪ್ರದೇಶಗಳು, ಕೈಗಾರಿಕಾ ಪ್ರದೇಶಗಳು ಅಥವಾ ಕ್ಲಸ್ಟರ್‌ಗಳನ್ನು ಸ್ಥಾಪಿಸಲು, ನಡೆಸಲು, ನಿಯಂತ್ರಿಸಲು ಮತ್ತು ನಿರ್ವಹಿಸಲು ಮುಖ್ಯವಾಗಿ ಜಾಗತಿಕ ಉತ್ಪಾದನಾ ಪ್ರಮುಖ ತಾಣವಾಗಿ ಕರ್ನಾಟಕದ ಸ್ಥಾನವನ್ನು ಉಳಿಸಿಕೊಳ್ಳಲು, ವಿಶ್ವದರ್ಜೆಯ ಮೂಲಸೌಕರ್ಯ, ವಿಶಿಷ್ಟ ನಾಗರಿಕ ಸೌಲಭ್ಯಗಳು, ಶ್ರೇಷ್ಠತೆಯ ಕೇಂದ್ರಗಳು ಮತ್ತು ಪೂರ್ವಭಾವಿ ನೀತಿ ಚೌಕಟ್ಟಿನ ಮೂಲಕ ಬೆಂಬಲಿಸಿ ವಿಶೇಷವಾಗಿ ಆರ್ಥಿಕ ಚಟುವಟಿಕೆ ಸಾಧ್ಯವಾಗಿಸಲು ಈ ಮಸೂದೆ ತರಲಾಗುತ್ತಿದೆ' ಎಂದು ವಿವರಿಸಿದರು.

ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ, ಯು.ಟಿ. ಖಾದರ್. ಶಿವಾನಂದ ಪಾಟೀಲ, ಪ್ರಿಯಾಂಕ್ ಖರ್ಗೆ, ಬಿಜೆಪಿಯ ಸಿ.ಟಿ ರವಿ, ಪ್ರೀತಂ ಗೌಡ, ಜಗದೀಶ ಶೆಟ್ಟರ್, ಸೋಮಶೇಖರ್ ರೆಡ್ಡಿ, ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ, ಶಿವಲಿಂಗೇಗೌಡ ಮಾತನಾಡಿದರು.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮಂಗಳವಾರ ವಿವಿಧ ಶಾಲೆಗಳ ವಿದ್ಯಾರ್ಥಿನಿಯರು ವಿಧಾನ ಪರಿಷತ್ ಕಲಾಪ ವೀಕ್ಷಿಸಲು ಸರದಿಯಲ್ಲಿ ಕಾಯುತ್ತಿರುವುದು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಖಾಸಗಿ ಶಾಲೆಗಳ ಪ್ರವೇಶಾತಿ ಶೇ 335 ಏರಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್‌ಎಂಎಸ್‌ಎ) ಯೋಜನೆ ಜಾರಿಯಾದ ನಂತರದ 13 ವರ್ಷಗಳಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಪ್ರವೇಶಾತಿ ಪ್ರಮಾಣದಲ್ಲಿ ಶೇಕಡ 30ರಷ್ಟು ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ ಖಾಸಗಿ ಪ್ರೌಢ ಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಶೇ 335ರಷ್ಟು ಹೆಚ್ಚಳವಾಗಿದೆ!

ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು (ಪಿಎಸಿ) ಆರ್‌ಎಂಎಸ್‌ಎ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ವರದಿಯನ್ನು ವಿಧಾನ ಪರಿಷತ್‌ನಲ್ಲಿ ಮಂಗಳವಾರ ಮಂಡಿಸಲಾಯಿತು. ಈ ವರದಿಯು ಸರ್ಕಾರಿ ಮತ್ತು ಖಾಸಗಿ ಪ್ರೌಢ ಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಹನ್ನೊಂದು ಪಟ್ಟು ವ್ಯತ್ಯಾಸ ಇರುವುದನ್ನು ಗುರುತಿಸಿದೆ.

2008–09ರಲ್ಲಿ ಆರ್‌ಎಂಎಸ್‌ಎ ಅನುಷ್ಠಾನ ಆರಂಭವಾದ ಬಳಿಕ 1.60 ಲಕ್ಷ ವಿದ್ಯಾರ್ಥಿಗಳು ಸರ್ಕಾರಿ ಪ್ರೌಢ ಶಾಲೆಗಳಿಗೆ ದಾಖಲಾಗಿದ್ದಾರೆ. ಇದೇ ಅವಧಿಯಲ್ಲಿ 5.74 ಲಕ್ಷ ವಿದ್ಯಾರ್ಥಿಗಳು ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ದಾಖಲಾಗಿದ್ದಾರೆ. ಸರ್ಕಾರಿ ಶಾಲೆಗಳಲ್ಲಿನ ಮೂಲಸೌಕರ್ಯದ ಕೊರತೆ ಹಾಗೂ ಶಿಕ್ಷಣದ ಗುಣಮಟ್ಟದ ಕೊರತೆಯೇ ಇದಕ್ಕೆ ಕಾರಣ ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಭಿಪ್ರಾಯಪಟ್ಟಿದೆ.

ಆರ್‌ಎಂಎಸ್‌ಎ ಅಡಿಯಲ್ಲಿ ಹೊಸ ಪ್ರೌಢ ಶಾಲೆಗಳನ್ನು ಆರಂಭಿಸಿದ ಬಳಿಕವೂ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಗಣನೀಯ ಹೆಚ್ಚಳ ಆಗಿರಲಿಲ್ಲ. ಆದರೆ, ಈ ಬಗ್ಗೆ ಶಿಕ್ಷಣ ಇಲಾಖೆಯು ಹೆಚ್ಚಿನ ಗಮನ ನೀಡಿರಲಿಲ್ಲ.

ಆರ್‌ಎಂಎಸ್‌ಎ ಅಡಿಯಲ್ಲಿ ಕೇಂದ್ರ ಸರ್ಕಾರವು ಹಿಂದಿನ ವರ್ಷಗಳಲ್ಲಿ ನೀಡಿದ್ದ ಅನುದಾನವನ್ನು ರಾಜ್ಯ ಸರ್ಕಾರವು ಬಳಕೆ ಮಾಡದೇ ಬಾಕಿ ಉಳಿಸಿಕೊಂಡಿತ್ತು. ಪರಿಣಾಮವಾಗಿ 2016–17ರಿಂದ 2018–19ರವರೆಗೆ ಈ ಯೋಜನೆಯಡಿ ಯಾವುದೇ ಅನುದಾನ ಪಡೆಯಲು ಸಾಧ್ಯವಾಗಿರಲಿಲ್ಲ ಎಂದು ಪಿಎಸಿ ಹೇಳಿದೆ.

ಅನುಷ್ಠಾನದಲ್ಲಿ ಲೋಪ: ಸಾರ್ವಜನಿಕ ಶಿಕ್ಷಣ ಇಲಾಖೆಯು ಆರ್‌ಎಂಎಸ್‌ಎ ಅನುಷ್ಠಾನದಲ್ಲಿ ಸರಿಯಾಗಿ ಕಾರ್ಯನಿರ್ವಹಿಸಿಲ್ಲ. ಈ ಯೋಜನೆಯಡಿ 448 ಶಾಲೆಗಳನ್ನು ಉನ್ನತೀಕರಣವನ್ನು ಸಕಾಲದಲ್ಲಿ ಪೂರ್ಣಗೊಳಿಸಿರಲಿಲ್ಲ. ಈ ಕಾರಣದಿಂದಾಗಿಯೇ ಕೇಂದ್ರ ಸರ್ಕಾರವು ರಾಜ್ಯದ ಹಲವು ಶಾಲೆಗಳ ಉನ್ನತೀಕರಣ ಪ್ರಸ್ತಾವವನ್ನು ತಿರಸ್ಕರಿಸಿತ್ತು ಎಂದು ಪಿಎಸಿ ಆಕ್ಷೇಪಿಸಿದೆ.

2,336 ಕಾಮಗಾರಿಗಳು ವಿಳಂಬ

ಆರ್‌ಎಂಎಸ್‌ಎ ಅಡಿಯಲ್ಲಿ 2009–10 ಮತ್ತು 2010–11ನೇ ಸಾಲಿನಲ್ಲಿ ಆರಂಭಿಸಿದ್ದ 2,336 ಕಾಮಗಾರಿಗಳನ್ನು ಈವರೆಗೂ ಪೂರ್ಣಗೊಳಿಸದೇ ಇರುವುದಕ್ಕೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಈ ಯೋಜನೆಯಡಿ ಕೈಗೆತ್ತಿಕೊಂಡ ಕಾಮಗಾರಿಗಳಿಗೆ ನಾಲ್ಕು ವರ್ಷಗಳವರೆಗೂ ನಿವೇಶನ ಹಸ್ತಾಂತರಿಸದೇ ಬಾಕಿ ಇರಿಸಿಕೊಂಡಿದ್ದ ಪ್ರಕರಣಗಳನ್ನೂ ಪಿಎಸಿ ಗುರುತಿಸಿದೆ. ಲೋಕೋಪಯೋಗಿ ಇಲಾಖೆಯ ಕೋಡ್‌ಗೆ ವಿರುದ್ಧವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇ ಇದಕ್ಕೆ ಕಾರಣ ಎಂದು ಸಮಿತಿ ಹೇಳಿದೆ.

ಚಿಲುಮೆ ಸಂಸ್ಥೆ ಕಪ್ಪುಪಟ್ಟಿಗೆ– ಬಿಬಿಎಂಪಿ

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಮತದಾರರ ಮಾಹಿತಿ ಕಳವು ಮಾಡಿರುವ ಆರೋಪದಲ್ಲಿ ತನಿಖೆ ಎದುರಿಸುತ್ತಿರುವ ಚಿಲುಮೆ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಿ ಬಿಬಿಎಂಪಿ ಆದೇಶ ಹೊರಡಿಸಿದೆ.

28 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಗುರುತಿನ ಚೀಟಿ ಮತ್ತು ಆಧಾರ್ ಜೋಡಣೆಯನ್ನು ವಿಎಚ್‌ಎ(-ವೋಟರ್ ಹೆಲ್ಪ್‌ಲೈನ್ ಆ್ಯಪ್) ಮೂಲಕ ಮಾಡಲು ಮತ್ತು ಮತದಾರರಲ್ಲಿ ಅರಿವು ಮೂಡಿಸಲು ಅನುಮತಿ ನೀಡಲಾಗಿತ್ತು.

ಅನುಮತಿ ಪತ್ರಕ್ಕೆ ವ್ಯತಿರಿಕ್ತವಾಗಿ ಗುರುತಿನ ಚೀಟಿಯನ್ನು ಸೃಷ್ಟಿಸಿಕೊಂಡು ನೈಜ ಬಿಎಲ್‌ಒಗಳೆಂದು ಬಿಂಬಿಸಿ ಸಾರ್ವಜನಿಕರಿಗೆ ಮೋಸ ಮಾಡಿರುವುದು ದಾಖಲೆ ಮತ್ತು ವರದಿಗಳಿಂದ ದೃಢಪಟ್ಟಿದೆ. ಈ ಸಂಸ್ಥೆಯಾಗಲಿ, ಸಂಸ್ಥೆಯ ನಿರ್ದೇಶಕರು ಅಥವಾ ಅವರ ಸಹಭಾಗಿತ್ವದಲ್ಲಿ ನಡೆಸಲಾಗುವ ಯಾವುದೇ ಸಂಸ್ಥೆಯು ಪಾಲಿಕೆಯ ಸೇವೆ ಮತ್ತು ಸಂಗ್ರಹಣೆಯ ಟೆಂಡರ್‌ಗಳಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಗಿದೆ ಎಂದು ಆದೇಶದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ.

'ಮುಂಬೈ ಕೇಂದ್ರಾಡಳಿತ ಪ್ರದೇಶವಾಗಲಿ'

ಬೆಳಗಾವಿ: 'ಬೆಳಗಾವಿ ಮತ್ತು ನಿಪ್ಪಾಣಿಯನ್ನು ಕೇಂದ್ರಾಡಳಿತ ಪ್ರದೇಶ ಮಾಡುವಂತೆ ಮಹಾರಾಷ್ಟ್ರದ ಕೆಲವು ರಾಜಕಾರಣಿಗಳು ಒತ್ತಾಯಿಸುತ್ತಿದ್ದಾರೆ. ಬಹುಭಾಷೆ, ಬಹು ಸಂಸ್ಕೃತಿಗಳ ಬೀಡಾಗಿರುವ ಮುಂಬೈ ಮಹಾನಗರವನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಬೇಕು. ನಾವು ಅಂತಹ ಆಗ್ರಹವನ್ನು ಮುಂದಿಡೋಣ' ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಚರ್ಚೆ ಆರಂಭಿಸಿ ಮಾತನಾಡಿದ ಅವರು, 'ಮುಂಬೈನಲ್ಲಿ ಶೇಕಡ 20ರಷ್ಟು ಮಂದಿ ಕರ್ನಾಟಕದ ಕನ್ನಡಿಗರು ಮತ್ತು ಕೊಂಕಣಿ ಭಾಷಿಕರಿದ್ದಾರೆ. ಹಲವು ರಾಜ್ಯಗಳು, ರಾಷ್ಟ್ರಗಳ ಜನರು ಅಲ್ಲಿದ್ದಾರೆ. ಬೆಳಗಾವಿ ಮತ್ತು ನಿಪ್ಪಾಣಿ ಕರ್ನಾಟಕದ ಅವಿಭಾಜ್ಯ ಅಂಗ. ಸರ್ವರಿಗೂ ಸೇರಿದ ಮುಂಬೈ ನಗರ ಕೇಂದ್ರಾಡಳಿತ ಪ್ರದೇಶವಾಗಲಿ' ಎಂದು ಆಗ್ರಹಿಸಿದರು.

ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸ್ವಾರ್ಥಕ್ಕಾಗಿ ಭಾಷೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಮಹಾರಾಷ್ಟ್ರ ಸರ್ಕಾರವೂ ಪ್ರಚೋದನೆ ನೀಡುತ್ತಿದೆ. ಅದನ್ನು ಸಹಿಸಲು ಸಾಧ್ಯವಿಲ್ಲ. ರಾಜ್ಯ ಸರ್ಕಾರ ತಕ್ಷಣವೇ ಸರ್ವಪಕ್ಷ ಸಭೆ ಕರೆದು ಚರ್ಚಿಸಬೇಕು ಎಂದರು.

ಈ ಮಾತನ್ನು ಬೆಂಬಲಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಮುಂಬೈ ನಗರ ಹಿಂದೆ ಮಹಾರಾಷ್ಟ್ರ ರಾಜ್ಯದ ಭಾಗವಾಗಿರಲಿಲ್ಲ. ಅದೊಂದು ಸ್ವತಂತ್ರ ಪ್ರಾಂತ್ಯವಾಗಿತ್ತು. ಕೇಂದ್ರಾಡಳಿತ ಪ್ರದೇಶವಾಗುವ ಎಲ್ಲ ಲಕ್ಷಣಗಳೂ ಆ ನಗರಕ್ಕೆ ಇವೆ' ಎಂದು ಹೇಳಿದರು.

'ಚುನಾವಣೆಗಾಗಿ ಮಹಾರಾಷ್ಟ್ರ ನಾಟಕ'

ಚುನಾವಣೆ ಹತ್ತಿರ ಬರುತ್ತಿದೆ ಎಂಬ ಕಾರಣಕ್ಕೆ ಮಹಾರಾಷ್ಟ್ರದವರು ಕ್ಯಾತೆ ತೆಗೆಯುತ್ತಿದ್ದಾರೆ, ಮಹಾರಾಷ್ಟ್ರ ನಾಟಕ ಕಂಪನಿ ಆಗಿಬಿಟ್ಟಿದೆ ಎಂದು ಕಂದಾಯ ಸಚಿವ ಆರ್. ಅಶೋಕ ಟೀಕಿಸಿದರು.

ಕರ್ನಾಟಕದ ಒಂದಿಂಚಲ್ಲ, ಒಂದು ಸೆಂಟಿ ಮೀಟರ್ ಜಾಗವನ್ನೂ ನಾವು ಬಿಟ್ಟುಕೊಡುವುದಿಲ್ಲ. ಅಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮಹಾರಾಷ್ಟ್ರದ ಮಾತಿಗೆ ನಯಾಪೈಸೆಯ ಕಿಮ್ಮತ್ತಿಲ್ಲ. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಎಲ್ಲವನ್ನೂ ಗಮನಿಸುತ್ತಿದ್ದಾರೆ ಎಂದರು.

'ಮುಂಬೈನಲ್ಲಿ ಮರಾಠಿಗರ ಸಂಖ್ಯೆ ಎಷ್ಟದೆ?'

ಹುಬ್ಬಳ್ಳಿ: 'ರಾಜ್ಯದ ಕೆಲ ಪ್ರದೇಶಗಳನ್ನು ಕೇಂದ್ರಾಡಳಿತಕ್ಕೆ ಒಳಪಡಿಸಬೇಕು ಎಂದು ಹೇಳಿಕೆ ನೀಡಿರುವ ಮಹಾರಾಷ್ಟ್ರ ವಿಕಾಸ ಅಘಾಡಿ ನಾಯಕ ಉದ್ಧವ್ ಠಾಕ್ರೆಗೆ, ಮುಂಬೈನಲ್ಲಿ ಮರಾಠಿ ಭಾಷಿಕರು ಎಷ್ಟು ಸಂಖ್ಯೆಯಲ್ಲಿ ಇದ್ದಾರೆ ಎಂದು ನಾವು ಪ್ರಶ್ನಿಸಿದರೆ ಅವರಿಗೇ ಸಮಸ್ಯೆಯಾಗುತ್ತದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಕೆ.ಅಶ್ವತ್ಥ ನಾರಾಯಣ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಗಡಿ ವಿವಾದ ಮುಗಿದ ವಿಷಯ. ಮಹಾರಾಷ್ಟ್ರ ಮುಖಂಡರು ಆಗಾಗ ಈ ವಿಚಾರ ತೆಗೆಯುತ್ತ ತಮಗೆ ಸಮಸ್ಯೆ ಮಾಡಿಕೊಳ್ಳುವುದರ ಜೊತೆಗೆ, ಜನರಿಗೂ ಸಮಸ್ಯೆ ತಂದಿಡುತ್ತಿದ್ದಾರೆ. ಕೇಂದ್ರಾಡಳಿತ ಪ್ರದೇಶವಾಗಬೇಕೆಂದು ಹೇಳುವ ಮೊದಲು ಅವರು ಯೋಚಿಸಬೇಕು' ಎಂದರು.

ಚುನಾವಣೆಗೆ ತಯಾರಿ 3 ದಿನ ರಾಜ್ಯದಲ್ಲಿ ಶಾ

ಬೆಳಗಾವಿ: ಇದೇ 29 ರಿಂದ ಮೂರು ದಿನ ರಾಜ್ಯ ಪ್ರವಾಸ ಕೈಗೊಳ್ಳಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿಧಾನಸಭೆ ಚುನಾವಣೆ ತಂತ್ರಗಾರಿಕೆಯ ಮೊದಲ ಹಂತದ ತಾಲೀಮು ನಡೆಸಲಿದ್ದಾರೆ.

ಸಹಕಾರಿಗಳು, ಪಕ್ಷದ ನಾಯಕರು, ಬೂತ್ ಮಟ್ಟದ ಅಧ್ಯಕ್ಷರು ಮತ್ತು ಏಜೆಂಟರ ಜತೆ ನಡೆಯಲಿರುವ ಪ್ರತ್ಯೇಕ ಸಭೆ, ಸಮಾವೇಶಗಳಲ್ಲಿ ಅವರು ಭಾಗಿಯಾಗಲಿದ್ದಾರೆ.

29ರ ರಾತ್ರಿ ಬೆಂಗಳೂರಿಗೆ ಬರಲಿರುವ ಶಾ ಅವರು ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಮರುದಿನ ಬೆಳಿಗ್ಗೆ 10ರಿಂದ 12.15ರವರೆಗೆ ಅವರ ಸಮಯ ಕಾದಿರಿಸಲಾಗಿದೆ. ರಾಜ್ಯದ ಹಿರಿಯ ನಾಯಕರು, ಚುನಾವಣೆಯನ್ನು ಮುನ್ನಡೆಸುವ ಪ್ರಮುಖರು ಹಾಗೂ ಹಿರಿಯ ಸಚಿವರ ಜತೆ ರಹಸ್ಯ ಸಮಾಲೋಚನೆ ನಡೆಸಲಿದ್ದಾರೆ ಎಂದು ಗೊತ್ತಾಗಿದೆ.

ಮಧ್ಯಾಹ್ನ ಊಟದ ಬಳಿಕ ಮಂಡ್ಯಕ್ಕೆ ತೆರಳಿರುವ ಅವರು, ಅಲ್ಲಿನ ಸರ್ಕಾರಿ ಬಾಲಕರ ಕಾಲೇಜಿನ ಮೈದಾನದಲ್ಲಿ ನಡೆಯಲಿರುವ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳವರು. ಅಲ್ಲದೇ, ಗೆಜ್ಜಲಗೆರೆಯ ಡೇರಿ ಕಾಂಪ್ಲೆಕ್ಸ್ ಉದ್ಘಾಟಿಸಲಿದ್ದಾರೆ.

ಸಂಜೆ 5.45ಕ್ಕೆ ಬೆಂಗಳೂರಿಗೆ ವಾಪಸ್ ಆಗಲಿರುವ ಅವರು, ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಯಲಿರುವ ಸಹಕಾರಿಗಳ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ.

ಅದೇ ದಿನ ತಾಜ್ ವೆಸ್ಟ್ ಎಂಡ್‌ನಲ್ಲಿ ರಾತ್ರಿ 8ರಿಂದ 9.30ರವರೆಗೆ ಪಕ್ಷದ ಸಭೆ ನಡೆಯಲಿದ್ದು, ಚುನಾವಣೆ ಸಿದ್ಧತೆ ಬಗ್ಗೆ ಸಮಾಲೋಚನೆ ನಡೆಸಲಿದ್ದಾರೆ.

31ರ ಶನಿವಾರದಂದು ಬೆಳಿಗ್ಗೆ ಅದೇ ಹೋಟೆಲ್‌ನಲ್ಲಿ ಪಕ್ಷದ ನಾಯಕರ ಜತೆ ಬೆಳಗಿನ ಉಪಾಹಾರ ಸೇವಿಸಲಿದ್ದಾರೆ.

11ಗಂಟೆಗೆ ದೇವನಹಳ್ಳಿ ತಾಲ್ಲೂಕಿನ ಆವತಿಯಲ್ಲಿ ನಡೆಯಲಿರುವ ಸೌಹಾರ್ದ ಸಹಕಾರಿ ಒಕ್ಕೂಟದ ಕಟ್ಟಡದ ಭೂಮಿ ಪೂಜೆಯನ್ನು ನೆರವೇರಿಸಲಿದ್ದಾರೆ.

ಮಧ್ಯಾಹ್ನ 3ಗಂಟೆಯಿಂದ 4.30ರವರೆಗೆ ಅರಮನೆ ಮೈದಾನದಲ್ಲಿ ನಡೆಯಲಿರುವ ಪಕ್ಷದ ಬೂತ್ ಮಟ್ಟದ ಅಧ್ಯಕ್ಷರು, ಬೂತ್ ಏಜೆಂಟರ ಸಭೆಯನ್ನು ನಡೆಸಿ, ಸಲಹೆ ನೀಡಲಿದ್ದಾರೆ.



ಸಾಂಸ್ಕೃತಿಕ ಜಾಂಬೂರಿಯ ಕೊನೆಯ ದಿನವಾದ ಮಂಗಳವಾರ, 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಂದ ಏಕಕಾಲಕ್ಕೆ ಬೃಹತ್ ಯೋಗ ಹಾಗೂ ಸರ್ವಧರ್ಮ ಪ್ರಾರ್ಥನೆ ನಡೆಯಿತು

40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಯೋಗ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಕೊನೆಯ ದಿನವಾದ ಮಂಗಳವಾರ, ಪುತ್ತಿಗೆ ವನಜಾಕ್ಷಿ ಕೆ. ಶ್ರೀಪತಿ ಭಟ್ ಬಯಲು ವೇದಿಕೆಯಲ್ಲಿ 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಂದ ಏಕಕಾಲಕ್ಕೆ ಬೃಹತ್ ಯೋಗ ಹಾಗೂ ಸರ್ವಧರ್ಮ ಪ್ರಾರ್ಥನೆ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಮಿಲಾಗ್ರಿಸ್ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಫಾದರ್ ಫ್ರಾನ್ಸಿಸ್ ಕ್ಸೇವಿಯರ್ ಗೋಮ್ಸ್, ಜರುಸಲೆಂ ಅಕಾಡೆಮಿಯ ಸಂಶುಲ್ ಉಲೇಮಾ ಸ್ಮಾರಕದ ಅಧ್ಯಕ್ಷ ಮೌಲಾನ ಅಬ್ದುಲ್ ಅಜೀಜ್ ಜಾರಿಮೀ ಚಕ್ಕಬೆಟ್ಟು, ಮೂಡುಬಿದಿರೆ ಜೈನಮಠದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಮಾತನಾಡಿ, ಸಾಮರಸ್ಯದಿಂದ ಮಾತ್ರ ದೇಶದ ವಿಕಾಸ ಸಾಧ್ಯ ಎಂದರು.

ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಅತಿಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಭಾರತ್ ಸ್ಕೌಟ್ಸ್-ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಅವರು ಧ್ವಜಾರೋಹಣದ ಮೂಲಕ ಏಳು ದಿನಗಳ ಕಾರ್ಯಕ್ರಮದ ಮುಕ್ತಾಯ ಘೋಷಿಸಿದರು.

ಸಂತ್ರಸ್ತ ಕುಟುಂಬಕ್ಕೆ ₹ 1 ಕೋಟಿ ಪರಿಹಾರಕ್ಕೆ ಒತ್ತಾಯ • ಮತ್ತೊಬ್ಬ ಆರೋಪಿ ಬಂಧನ

ಜಲೀಲ್ ಹತ್ಯೆ ಖಂಡಿಸಿ ಮುಸ್ಲಿಮರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕರಾವಳಿ ಜಿಲ್ಲೆಗಳಲ್ಲಿ ಅಶಾಂತಿ ಸೃಷ್ಟಿಸಲು ಕೃಷ್ಣಾಪುರದ ಅಬ್ದುಲ್ ಜಲೀಲ್ ಅವರನ್ನು ಹತ್ಯೆ ಮಾಡಲಾಗಿದೆ' ಎಂದು ಆರೋಪಿಸಿ ಕರ್ನಾಟಕ ಮುಸ್ಲಿಂ ಜಮಾತ್, ಸುನ್ನಿ ಸ್ಟೂಡೆಂಟ್ ಫೆಡರೇಷನ್ (ಎಸ್‌ಎಸ್‌ಎಫ್) ಹಾಗೂ ಸುನ್ನಿ ಯುವಜನ ಸಂಘ (ಎಸ್‌ವೈಎಸ್) ದ ನೇತೃತ್ವದಲ್ಲಿ ಇಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

'ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಹುನ್ನಾರಕ್ಕೆ ಆಡಳಿತ ಯಂತ್ರವೇ ಬೆಂಬಲಕ್ಕೆ ನಿಂತಿದೆ ಎಂಬ ಭಾವನೆ ಜನರಲ್ಲಿ ಮನೆ ಮಾಡಿದೆ. ಇಂತಹ ಸನ್ನಿವೇಶ ಉಂಟಾಗುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಆತಂಕಕಾರಿ' ಎಂದು ಪ್ರತಿಭಟನಾಕಾರರು ಹೇಳಿದರು.

'ಕರಾವಳಿಯ ಕೊಲೆ ಸರಣಿಯಿಂದ ಜನ ರೋಸಿ ಹೋಗಿರುವುದನ್ನು ಆಡಳಿತಾರೂಢರು ಗಂಭೀರವಾಗಿ ಪರಿಗಣಿಸಬೇಕು. ಮೃತ ಜಲೀಲ್ ಕುಟುಂಬಕ್ಕೆ ₹1 ಕೋಟಿ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಮುಸ್ಲಿಂ ಧರ್ಮಗುರುಗಳು, ಪ್ರಮುಖರು, 'ಅಮಾಯಕ ಕುಟುಂಬಗಳನ್ನು ಅನಾಥವಾಗಿಸುವ ಕೊಲೆ ಸರಣಿ ಮುಂದುವರಿಯುತ್ತಿದ್ದರೂ ಗುಪ್ತಚರ ಇಲಾಖೆ ಏನು ಮಾಡುತ್ತಿದೆ' ಎಂದು ಪ್ರಶ್ನಿಸಿದರು.

'ಸಮಾಜಘಾತುಕ ಶಕ್ತಿಗಳಿಗೆ ಪೊಲೀಸರ ಬಗ್ಗೆ ಭೀತಿ ಇಲ್ಲ. ಪ್ರಭಾವಿಗಳ ಬೆಂಬಲವಿಲ್ಲದೇ ಇಂತಹ ದುಷ್ಕೃತ್ಯ ಮರುಕಳಿಸದು. ಈ ಹಿಂದೆ ಕೊಲೆ ನಡೆದಾಗ ಪೊಲೀಸರು ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರೆ, ಹತ್ಯೆ ಮರುಕಳಿಸುತ್ತಿರಲಿಲ್ಲ' ಎಂದರು.

ಸ್ಥಳದಲ್ಲಿ ಮನವಿ ಸ್ವೀಕರಿಸಿದ ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್, 'ಅಬ್ದುಲ್ ಜಲೀಲ್ ಕೊಲೆ ಪ್ರಕರಣದ ಇಬ್ಬರು ಪ್ರಮುಖ ಆರೋಪಿಗಳು ಸೇರಿದಂತೆ ನಾಲ್ವರನ್ನು ಬಂಧಿಸಿದ್ದೇವೆ. ಆರೋಪಿಗಳಿಗೆ ಕಠಿಣ ಶಿಕ್ಷೆ ಕೊಡಿಸಲು ಕ್ರಮ ಕೈಗೊಂಡಿದ್ದೇವೆ. ಮತೀಯ ಗೂಂಡಾಗಿರಿ ಪ್ರಕರಣಗಳಲ್ಲೂ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡಿದ್ದೇವೆ' ಎಂದು ತಿಳಿಸಿದರು.

ಮತ್ತೊಬ್ಬ ಆರೋಪಿ ಬಂಧನ: 'ಕೃಷ್ಣಾಪುರದ ಅಬ್ದುಲ್ ಜಲೀಲ್ ಹತ್ಯೆ ಸಂಬಂಧ ಮತ್ತೊಬ್ಬ ಪ್ರಮುಖ ಆರೋಪಿ ಕೃಷ್ಣಾಪುರ ನಿವಾಸಿ ಲಕ್ಷ್ಮೀಶ ದೇವಾಡಿಗ (28)ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ.

'ಬಂಧಿತ ಆರೋಪಿಯು ಜಲೀಲ್ ಅನ್ಯ ಧರ್ಮದ ಮಹಿಳೆ ಜೊತೆ ಸಂಬಂಧ ಹೊಂದಿದ್ದಾನೆ ಎಂದು ಆರೋಪಿಸಿ ಎರಡು ವರ್ಷಗಳ ಹಿಂದೆ ಜಗಳವಾಡಿದ್ದ. ಜಲೀಲ್ ಜೊತೆ ಆತ ವೈಯಕ್ತಿಕ ದ್ವೇಷವನ್ನು ಹೊಂದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಕೃಷ್ಣಾಪುರದ ಅಬ್ದುಲ್ ಜಲೀಲ್ ಹತ್ಯೆ ಖಂಡಿಸಿ ಮಂಗಳೂರಿನಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಪ್ರಮುಖ ಬೇಡಿಕೆಗಳು

- ಹತ್ಯೆ ಸರಣಿಗಳಿಗೆ ಕೊನೆ ಹಾಡಬೇಕು
- ಫಾಝಿಲ್ ಹಾಗೂ ಜಲೀಲ್ ಮನೆಗೆ ಮುಖ್ಯಮಂತ್ರಿ ಭೇಟಿ ನೀಡುವ ಮೂಲಕ ವ್ಯವಸ್ಥೆ ಮೇಲಿನ ಭರವಸೆ ಮರುಸ್ಥಾಪಿಸಬೇಕು
- ಕೊಲೆ ಆರೋಪಿಗಳಿಗೆ ಬೆಂಬಲ ನೀಡುತ್ತಿರುವ ಶಕ್ತಿಗಳನ್ನು ಮಟ್ಟಹಾಕಬೇಕು
- ಮತೀಯ ಗೂಂಡಾಗಿರಿ ಪ್ರಕರಣದ ಆರೋಪಿಗಳು ಜಾಮೀನು ಪಡೆದು ರಾಜಾರೋಷವಾಗಿ ತಿರುಗಾಡುವುದನ್ನು ತಪ್ಪಿಸಬೇಕು

'ಜೆಡಿಎಸ್ ಮುಖಂಡನ ಮೇಲೆ ಹಲ್ಲೆ'


ಶಹಾಪುರ (ಯಾದಗಿರಿ ಜಿಲ್ಲೆ): ಗುತ್ತಿಗೆದಾರ ವಿಶ್ವನಾಥರಡ್ಡಿ ದರ್ಶನಾಪುರ ಮತ್ತು ಅವರ ಬೆಂಬಲಿಗರು ಜೆಡಿಎಸ್ ನಗರ ಘಟಕದ ಅಧ್ಯಕ್ಷ, ಆರ್‌ಟಿಐ ಕಾರ್ಯಕರ್ತ ಬಸವರಾಜ ಅರುಣಿ ಅವರನ್ನು ತಮ್ಮ ಮನೆಗೆ ಕರೆಯಿಸಿ ಬಟ್ಟೆ ಬಿಚ್ಚಿಸಿ, ಹಲ್ಲೆ ನಡೆಸಿದ್ದು ಅಲ್ಲದೇ ಅರೆ ನಗ್ನವಾಗಿ ನಿಲ್ಲಿಸಿ ದೌರ್ಜನ್ಯವೆಸಗಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಹಲ್ಲೆ: 'ಸೋಮವಾರ ಕೆಲವರು ನನ್ನನ್ನು ಕರೆದೊಯ್ದು ಮನೆಯಲ್ಲಿ ಕೂಡಿಹಾಕಿ ಒತ್ತಾಯದಿಂದ ಬಟ್ಟೆ ಬಿಚ್ಚಿಸಿದರು. ವಿಶ್ವನಾಥರಡ್ಡಿ ಅವರು ಕಾಲಿನಿಂದ ಒದ್ದು ಹಲ್ಲೆ ಮಾಡಿದರು. ನಂತರ ಬಲವಂತದಿಂದ ಶಹಾಪುರ ಠಾಣೆಗೆ ಕರೆದೊಯ್ದು ಪೊಲೀಸರಿಂದ ವಿಚಾರಣೆಗೆ ಒಳಪಡಿಸಿ, ಮನೆಗೆ ಕಳುಹಿಸಿದರು' ಎಂದು ಬಸವರಾಜ ಅರುಣಿ ಆರೋಪಿಸಿದ್ದಾರೆ.


'ಕೃಷ್ಣ ಪಟ್ಟಣ ಸಹಕಾರ ಬ್ಯಾಂಕ್ ಕುರಿತು ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣ ವಾಪಸ್ ಪಡೆಯುವಂತೆ ಒತ್ತಡ ಹಾಕಿ ಹಲ್ಲೆ ಮಾಡಿದ್ದಾರೆ. ಇದಕ್ಕೆ ಹಿಂದುಳಿದ ವರ್ಗಗಳ ಅಧಿಕಾರಿ ಶರಣಪ್ಪ ಬಳಬಟ್ಟಿ ಕುಮ್ಮಕ್ಕು ಇದೆ' ಎಂದೂ ತಿಳಿಸಿದ್ದಾರೆ.

ವಂಚನೆ ಆರೋಪ: 'ಬಸವರಾಜ ಅರುಣಿ ಅನಗತ್ಯವಾಗಿ ಆರ್‌ಟಿಐ ಅಡಿ ದೂರು ಸಲ್ಲಿಸಿ ಮಾಹಿತಿ ಕೇಳುವ ನೆಪದಲ್ಲಿ ₹5 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದರು.' ಎಂದು ವಿಶ್ವನಾಥರಡ್ಡಿ ದರ್ಶನಾಪುರ ಆರೋಪಿಸಿದ್ದಾರೆ.

'ಸಂಧಾನಕ್ಕೆಂದು ಮನೆಗೆ ಸಿಹಿ ತಿನಿಸು ತಂದಿದ್ದರು. ಅದರಲ್ಲಿ ವಿಷ ಬೆರೆಸಿದ್ದರು. ಇದನ್ನು ತಿಳಿದು ಅವರನ್ನು ಪೊಲೀಸರಿಗೆ ಒಪ್ಪಿಸಿದೆ' ಎಂದರು.



ಆಮೆಗಳ ಸಾಗರ ಬೇಹುಗಾರಿಕೆ



ಶರತ್ ಭಟ್ ಸೇರಾಜೆ

ಪಂಜೆ ಮಂಗೇಶರಾಯರು ಹೇಳಿದಂತೆ, 'ಬರುವುದು ಬರಬರ ಭರದಲಿ ಬರುವುದು ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ, ಅಬ್ಬರದಲಿ ಭೋರ್ ಭೋರನೆ ಗುಮ್ಮಿಸಿ' ಎಂಬಂತೆ ಬರುವ ಚಂಡಮಾರುತದ ಕಾಟ ಪೂರ್ವ ಕರಾವಳಿಯಲ್ಲಿ ಪ್ರತಿವರ್ಷವೂ ಇದ್ದದ್ದೇ. ಅದು ಎಬ್ಬಿಸುವ ಹಾವಳಿ, ಉಂಟುಮಾಡುವ ಧ್ವಂಸ, ಸಾವು-ನೋವು – ಇವುಗಳಿಂದಾಗಿ ಎಲ್ಲರಿಗೂ ತಲೆನೋವಾಗಿ ಕಾಡುತ್ತದೆ. ಅದನ್ನು ದಮನ ಮಾಡುವುದೋ, ಹತೋಟಿಗೆ ತರುವುದೋ ನಮ್ಮ ಕೈಯಲ್ಲಿಲ್ಲ, ಹಾಗಾಗಿ ಅದು ಬರುವುದರ ಮುನ್ಸೂಚನೆ ಕೊಡುವುದಕ್ಕಾದರೂ ಆಗಬೇಕು ಎಂಬುದು ವಿಜ್ಞಾನಿಗಳ ಸಂಕಲ್ಪ.

> 'ಮೇಘದೂತ'ದಲ್ಲಿ ದೂರದಲ್ಲಿರುವ ನಲ್ಲೆಗೆ ಸಂದೇಶ ತಲುಪಿಸುವ ಕೆಲಸವನ್ನು ಗಾಳಿಯಲ್ಲಿ ತೇಲುತ್ತ ಸಾಗುವ ಮೋಡಕ್ಕೆ ವಹಿಸಿ ಕೊಡಲಾಯಿತು; ಇಲ್ಲಿ ಅಡಿಗಡಿಗೆ ಸಾಗರದ ಸಂದೇಶಗಳನ್ನು ಕಳಿಸಿಕೊಡಲಿಕ್ಕೆ ಆಮೆಗಳ ನೇಮಕಾತಿ!


ಎಷ್ಟೋ ಸುಂಟರಗಾಳಿಗಳು ಸಮುದ್ರದಲ್ಲಿ ಹುಟ್ಟುತ್ತವೆ. ಅವು ಗಾಳಿಯ ಒತ್ತಡ, ಉಷ್ಣತೆ ಮುಂತಾದ ಅಂಶಗಳನ್ನು ಅವಲಂಬಿಸಿರುತ್ತವೆ ಕೂಡ. ಹೀಗಾಗಿ, ಇವುಗಳ ಬಗ್ಗೆ ಮುನ್ನುಡಿಯಲಿಕ್ಕೆ ಸಮುದ್ರದಲ್ಲಿನ ಒತ್ತಡ, ಉಷ್ಣಾಂಶ, ಆಳ, ಲವಣತ್ವ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡಬೇಕಾಗುತ್ತದೆ. ಹಾಗೆ ಸಂಗ್ರಹ ಮಾಡಿದ ಮಾಹಿತಿಯನ್ನು ಇಟ್ಟುಕೊಂಡು ಸಮೀಕರಣಗಳನ್ನು ಬಳಸಿ ಲೆಕ್ಕಾಚಾರ ಮಾಡಬೇಕಾಗುತ್ತದೆ. ಒಂದು ಹಂತದವರೆಗೆ ಇಂಥ ಮಾಹಿತಿಗಳನ್ನು ಆಗಸದಿಂದ ಉಪಗ್ರಹಗಳು ವಿಜ್ಞಾನಿಗಳಿಗೆ ರವಾನಿಸುತ್ತವೆ; ಆದರೆ ಅವು ಎಷ್ಟೋ ಸಲ ಸಾಕಾಗುವುದಿಲ್ಲ, ಸಮುದ್ರದ ಆಳಗಳ ವಿವರಗಳನ್ನು ಎಲ್ಲ ಅದಕ್ಕೆ ತಿಳಿಯಲಾಗುವುದಿಲ್ಲ. ಸಮುದ್ರಗಳಲ್ಲಿ ಒಂದಷ್ಟು ತೇಲುಬುರುಡೆಗಳನ್ನೂ ಇದೇ ಕೆಲಸಕ್ಕಾಗಿ ತೇಲಿಬಿಟ್ಟಿರುತ್ತಾರೆ. ಅವುಗಳು ಕೊಡುವ ಮಾಹಿತಿಯೂ ಒಂದು ಮಿತಿಯೊಳಗೇ ಇರುವುದರಿಂದ, ಅವು ಮೇಲ್ಪದರದ ವಿವರಣೆಯನ್ನು ಕೊಡಬಲ್ಲವಾದ್ದರಿಂದ, ಅದೂ ಸಾಕಾಗುವುದಿಲ್ಲ. ಅಮೆರಿಕಾದಂಥ ದೇಶಗಳಲ್ಲಿ ಡ್ರೋನುಗಳನ್ನು ಹಾರಿಬಿಟ್ಟೂ ಸ್ವಲ್ಪ ಮಾಹಿತಿಯನ್ನು ಕಲೆ ಹಾಕಲಾಗುತ್ತದೆ, ಅದು ಕೊಡುವುದೂ ಅಪೂರ್ಣ ವಿವರಗಳನ್ನೇ. ಹಾಗಾದರೆ ಸಾಗರದಾಳಗಳಿಗೆ ಇಳಿದು ಈ ವಿವರಗಳನ್ನು ಪತ್ತೆ ಮಾಡುವವರು ಯಾರು ಎಂಬುದು ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು ಎಂಬ ಕಥೆಯಂತೆಯೇ ಆಗಿಬಿಡುತ್ತದೆ.

ಇದಕ್ಕೆ ಒಂದು ಉಪಾಯವನ್ನು ಕಂಡುಹಿಡಿದದ್ದು ಫ್ರಾನ್ಸಿನ ವಿಜ್ಞಾನಿಯೊಬ್ಬರು. ಹವಾಮಾನತಜ್ಞರಿಗೆ ಬೇಕಾಗುವುದು ಸುಮಾರಾಗಿ 25ರಿಂದ 200 ಮೀಟರ್ ಆಳದ ಮಾಹಿತಿ. ಸಾಧಾರಣ ಇಷ್ಟೇ ಆಳಕ್ಕೆ ಹೋಗುವ, ಹೋಗಿ ಸಂಚಾರ ಮಾಡುವ ವ್ಯವಸ್ಥೆಯೊಂದನ್ನು ಪ್ರಕೃತಿಯೇ ರೂಪಿಸಿದೆ - ಅವುಗಳಿಗೆ 'ಆಮೆಗಳು' ಎಂದು ಹೆಸರು! ಸುಪ್ತಸಾಗರದ ಒಳಗಿನಿಂದ ವಾರ್ತಾವಾಹಿನಿಯ ವರದಿಗಾರನಂತೆ ಮಾಹಿತಿಯನ್ನು ರವಾನಿಸುವ ಕೆಲಸಕ್ಕೆ ಅದೇ ಕಾರ್ಯಕ್ಷೇತ್ರದಲ್ಲಿ ಇರುವ ಆಮೆಗಳನ್ನೇ ಯಾಕೆ ನಿಯೋಜಿಸಬಾರದು ಎಂಬ ಆಲೋಚನೆ ವಿಜ್ಞಾನಿಗೆ ಬಂತು; ಮತ್ತು ಅವರು ಅದನ್ನು ಕಾರ್ಯರೂಪಕ್ಕೂ ತಂದರು. ಕಾಳಿದಾಸನ 'ಮೇಘದೂತ'ಕಾವ್ಯದಲ್ಲಿ ದೂರದಲ್ಲಿರುವ ನಲ್ಲೆಗೆ ಸಂದೇಶ ತಲುಪಿಸುವ ಕೆಲಸವನ್ನು ಗಾಳಿಯಲ್ಲಿ ತೇಲುತ್ತ ಸಾಗುವ ಮೋಡಕ್ಕೆ ವಹಿಸಿ ಕೊಡಲಾಯಿತು; ಇಲ್ಲಿ ಅಡಿಗಡಿಗೆ ಕೂರ್ಮಸಂದೇಶಗಳನ್ನು ಕಳಿಸಿಕೊಡಲಿಕ್ಕೆ ನೀರಿನಲ್ಲಿ ಸಾಗುವ ಆಮೆಗಳ ನೇಮಕಾತಿ. ಅಲ್ಲಿ ಯಕ್ಷನೊಬ್ಬನ ಮನಸ್ಸಿನಲ್ಲೆದ್ದ ವಿರಹದ ಬಿರುಗಾಳಿಯ ಬಗ್ಗೆ ಮಾಹಿತಿ; ಇಲ್ಲಿ ಬಿರುಗಾಳಿಗೆ ಕಾರಣವಾಗಬಲ್ಲ ಕಡಲಿನಾಳದ ಉಷ್ಣತೆ, ಒತ್ತಡ, ಉಪ್ಪಿನ ಅಂಶ ಇವುಗಳ ಬಗ್ಗೆ ಮಾಹಿತಿ.

ಆಮೆಯ ಬೆನ್ನಿನ ಚಿಪ್ಪಿಗೆ ಸಾಧನವೊಂದನ್ನು ಜೋಡಿಸಲಾಯಿತು. ಆ ಸಾಧನವು ಸಮುದ್ರದಲ್ಲಿ ಆಗಾಗ ಉಷ್ಣತೆ, ಒತ್ತಡ, ಲವಣತ್ವ – ಇವುಗಳನ್ನು ಅಳೆಯಬಲ್ಲದು, ಜಿಪಿಎಸ್ಸಿನಂತೆ ಕೆಲಸ ಮಾಡಿ ಅಷ್ಟಿಷ್ಟು ಹವಾಮಾನ ವರದಿಯ ಮುಖ್ಯ ಅಂಶಗಳನ್ನೂ ಕಳಿಸಬಲ್ಲದು. ಆಮೆಗಳು ಬೇರೆ ಬೇರೆ ಕಡೆಗೆ ಸಾಗಿದಂತೆ, ಆಳಕ್ಕೆ ಇಳಿದಂತೆ, ಸಮುದ್ರದ ಉದ್ದ, ಅಗಲ, ಆಳ ಎಲ್ಲವಕ್ಕೂ ಯಾರಾದರೂ ಸಾಗಿ ಸಮೀಕ್ಷೆ ಮಾಡಿದರೆ ಎಷ್ಟು ದತ್ತಾಂಶಗಳು ಸಿಗಬಹುದೋ ಅಷ್ಟೂ ಮಾಹಿತಿ ಸಿಕ್ಕಿ ಬಿಡುತ್ತದೆ. ಇಂಥ ಜಾಗದಲ್ಲಿ ಇಷ್ಟು ಆಳದಲ್ಲಿ, ಇಷ್ಟು ಉಷ್ಣತೆಯಿದೆ ಎಂಬಂಥ ಸುದ್ದಿಯು ಲಭ್ಯವಾಗಿಬಿಡುತ್ತದೆ. ಈ ಆಮೆಗಳಿಗೆ ಹೊರಟ ತೀರಕ್ಕೆ ಮರಳಿ ಬರುವ ಅಭ್ಯಾಸವೂ ಇರುವುದರಿಂದ ವಿಜ್ಞಾನಿಗಳು ಇಡೀ ಸಾಧನವನ್ನೇ ತೆಗೆದು ಅದರಲ್ಲಿ ಸಂಗ್ರಹವಾದ ಮಾಹಿತಿಯನ್ನೆಲ್ಲ ಹೊರತೆಗೆಯಲೂ ಸಾಧ್ಯವಾಗುತ್ತದೆ. ಆಮೆಗಳು ಐವತ್ತರಿಂದ ನೂರು ಕೆ.ಜಿ ಭಾರ ಇರುತ್ತವೆ. ಅವುಗಳಿಗೆ 250 ಗ್ರಾಂ ತೂಕ ಇರುವ ಈ ಸಾಧನಗಳನ್ನು ಹೊತ್ತೊಯ್ಯಲು ಅಂಥ ಕಷ್ಟವೇನೂ ಆಗಲಾರದು ಎಂದು ವಿಜ್ಞಾನಿಗಳ ಅಂದಾಜು; ಹಕ್ಕಿಗಳಿಗಾದರೆ ಆ ಭಾರವನ್ನು ಹೊರುವುದು ಕಷ್ಟಸಾಧ್ಯವಾದೀತೇನೋ!

ಫ್ರೆಂಚ್ ವಿಜ್ಞಾನಿಯ ಈ ಉಪಾಯದಿಂದ ಉತ್ತೇಜಿತರಾಗಿ ಹಲವು ಬೇರೆ ಬೇರೆ ಕಡೆಗಳಲ್ಲಿಯೂ ಈ ತಂತ್ರವನ್ನು ಬಳಸಲು ಹವಾಮಾನತಜ್ಞರು ಮುಂದಾಗಿದ್ದಾರೆ. 'STORM' (Sea Turtles for Ocean Research and Monitoring) ಎಂಬ ಯೋಜನೆ ಹೀಗೇ ಹುಟ್ಟಿಕೊಂಡಿತು. 2019ನೇ ಇಸವಿಯಲ್ಲಿ 'ಕೆನೆತ್' ಎಂಬ ಚಂಡಮಾರುತ ಆಫ್ರಿಕಾದಲ್ಲಿ ಬೀಸಿತ್ತು. ಆ ಚಂಡಮಾರುತ ಜನ್ಮತಾಳಿದ ಜಾಗದಲ್ಲಿ ಇಂಥ ಸಂದೇಶವಾಹಕ ಆಮೆಯೊಂದು ಕೆಲವು ದಿನಗಳ ಕಾಲ ತಂಗಿತ್ತಂತೆ. ಯೋಜನೆ ಶುರುವಾಗಿ ಒಂದೂವರೆ ವರ್ಷದಲ್ಲಿ, ಹತ್ತಾರು ಆಮೆಗಳು ಸೇರಿ ಸುಮಾರು ಒಂದೂಕಾಲು ಲಕ್ಷ ಮಾಹಿತಿಯ ತುಣುಕುಗಳನ್ನು ಕಳಿಸಿದ್ದವು. ಚಂಡಮಾರುತಕ್ಕೆ ಮೊದಲು ಆಮೆಗಳು ಹೇಗೆ ವರ್ತಿಸುತ್ತವೆ; ತಮ್ಮ ಪಥವನ್ನೇನಾದರೂ ಅವು ಬದಲಿಸುತ್ತವೆಯೇ ಎಂಬುದೂ ಒಂದು ಅಧ್ಯಯನಾರ್ಹವಾದ ಸಂಗತಿ. ಅದರ ಮೇಲೂ ವಿಜ್ಞಾನಿಗಳು ಕಣ್ಣಿಟ್ಟಿದ್ದಾರೆ. ಸಾಧ್ಯವಾದಷ್ಟು ಮಟ್ಟಿಗೂ ಪ್ರಾಣಿಹಿಂಸೆ ಆಗದಂತೆ ಜಾಗ್ರತೆ ವಹಿಸಿದ್ದಾರೆ. ಉದಾಹರಣೆಗೆ, ಈ ಕೆಲಸಕ್ಕೆಂದೇ ಆಮೆಗಳನ್ನು ಹಿಡಿದು ತಂದಿಲ್ಲ, ಮೀನು ಹಿಡಿಯುವಾಗಲೋ ದೋಣಿಗೊ ಆಕಸ್ಮಿಕವಾಗಿ ಸಿಕ್ಕ ಆಮೆಗಳನ್ನು ಮಾತ್ರ ಈ ಯೋಜನೆಗೆ ಬಳಸಿದ್ದಾರೆ. ಸಾಧನವನ್ನು ಅಂಟಿಸುವ ಅಂಟು ಕೂಡ ಆ ಜೀವಿಗೆ ತೊಂದರೆ ಮಾಡದಂತೆ ನೋಡಿಕೊಂಡಿದ್ದಾರೆ.

ಹೀಗಿದೆ, ಸಾಗರತಳದಲ್ಲಿ ಬೇಹುಗಾರಿಕೆ ಮಾಡುವ ಆಮೆಗಳ ವೃತ್ತಾಂತ!





ಸದ್ದು ಮಾಡುತ್ತಿದೆ ಹೊಸ ಚಾಟ್ ಬಾಟ್

ಅವಿನಾಶ್ ಬಿ.

ಅಂತರ್ಜಾಲದಲ್ಲಿ ಸಕ್ರಿಯರಾಗಿರುವವರಿಗೆ 'ಚಾಟ್ ಬಾಟ್'ಗಳ ಬಗ್ಗೆ ಅರಿವಿದೆ. ಹಲವು ಕಂಪನಿಗಳು ಅವುಗಳ ಜಾಲತಾಣಗಳಲ್ಲಿ ಚಾಟ್ ಬಾಟ್‌ಗಳನ್ನು ಅಳವಡಿಸಿ, ಗ್ರಾಹಕರ ನಿರ್ದಿಷ್ಟ ಸಂದೇಹಗಳಿಗೆ ಸ್ವಯಂಚಾಲಿತವಾಗಿ ನಿರ್ದಿಷ್ಟ ಉತ್ತರವನ್ನು ಪಠ್ಯರೂಪದಲ್ಲಿ ನೀಡುವ ಗ್ರಾಹಕ ಸಹಾಯವಾಣಿಗಳಂತೆ ಕೆಲಸ ಮಾಡುತ್ತವೆ ಅವು. ಇದು ಸಾಧ್ಯವಾಗಿರುವುದು 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' (ಕೃತಕಬುದ್ಧಿಮತ್ತೆ) ಎಂಬ ತಂತ್ರಜ್ಞಾನದ ಆಧಾರದಲ್ಲಿ. ಅಂದರೆ, ಪ್ರಶ್ನೆಯನ್ನು ಟೈಪ್ ಮಾಡಿದ ನಿರ್ದಿಷ್ಟ ಪದಗಳನ್ನು ಗ್ರಹಿಸಿಕೊಂಡು, ಅದಕ್ಕೆ ಸೂಕ್ತವಾಗಬಹುದಾದ ಉತ್ತರವನ್ನು ಸ್ವಯಂಚಾಲಿತವಾಗಿ ನೀಡುವ ವ್ಯವಸ್ಥೆಯದು.

ಕಳೆದೊಂದು ತಿಂಗಳಿನಿಂದ ಅಂತರ್ಜಾಲದಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಯಾಗುತ್ತಿರುವುದು 'ಚಾಟ್ ಜಿಪಿಟಿ' ಎಂಬ 'ಎಐ' (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಆಧಾರಿತ ಚಾಟಿಂಗ್ ವ್ಯವಸ್ಥೆ. 'ಓಪನ್ ಎಐ' ಎಂಬ ಸಂಸ್ಥೆಯು ರೂಪಿಸಿದ ಈ ಚಾಟ್ ಜಿಪಿಟಿ (ChatGPT)ಗೆ ನಮ್ಮ ಇಮೇಲ್ ವಿಳಾಸ ಹಾಗೂ ಫೋನ್ ನಂಬರ್ – ಇವೆರಡನ್ನು ದಾಖಲಿಸಿ ನೋಂದಾಯಿಸಿಕೊಂಡು ಒಳ ಪ್ರವೇಶಿಸಿ, ಏನೇ ಪ್ರಶ್ನೆ ಕೇಳಿದರೂ ಅದಕ್ಕೆ ಉತ್ತರಗಳನ್ನು ಪಠ್ಯರೂಪದಲ್ಲಿ ಅಲ್ಲೇ ಪಡೆಯಬಹುದು. ಲಿಂಕ್ ಇಲ್ಲಿದೆ: https://chat.openai.com. ಇಲ್ಲಿ ಇಮೇಲ್, ಫೋನ್ ನಂಬರ್ ನೀಡಬೇಕಾಗುವುದರಿಂದ ಖಾಸಗಿತನದ ಬಗ್ಗೆ ಆತಂಕ ಪಡುವವರು ಎಚ್ಚರ ವಹಿಸಿ.

ಉದಾಹರಣೆಗೆ, ನ್ಯೂಟನ್ನನ ನಿಯಮ ಏನು ಅಥವಾ ಡಾರ್ವಿನ್ ಥಿಯರಿ ಏನು – ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದರೆ, ಅದು ತನ್ನಲ್ಲಿ ಅಡಕವಾಗಿರುವ ಮಾಹಿತಿಕೋಶದಿಂದ ತಕ್ಷಣವೇ ಉತ್ತರವನ್ನು ವ್ಯವಸ್ಥಿತವಾಗಿ ಮುಂದಿಡುತ್ತದೆ. ಕುತೂಹಲಕ್ಕಾಗಿ 'ಕನ್ನಡ ಕಲಿಯುವುದು ಹೇಗೆ?' ಎಂದು ಕನ್ನಡದಲ್ಲಿ ಟೈಪ್ ಮಾಡಿ ಪ್ರಶ್ನೆ ಕೇಳಿ ನೋಡಿದಾಗ, ಅಸಂಬದ್ಧವಾಗಿ ಕನ್ನಡದಲ್ಲೇ ಉತ್ತರ ದೊರಕಿದೆ. (ಅದು ಅನ್ಯಭಾಷೆಗಳಿಗೆ ಇನ್ನಷ್ಟೇ ಅಭಿವೃದ್ಧಿಯಾಗಬೇಕಿದೆ). ಆದರೆ ಇಂಗ್ಲಿಷಿನಲ್ಲಿ 'How to learn Kannada' ಎಂದು ಟೈಪ್ ಮಾಡಿ ಕೇಳಿದರೆ, ಅತ್ಯಂತ ವ್ಯವಸ್ಥಿತವಾಗಿ, ಹಂತಹಂತವಾದ ಹೆಜ್ಜೆಗಳ ಮೂಲಕ ವಿವರಿಸುತ್ತದೆ.

ನವೆಂಬರ್ 30ರಂದು ಘೋಷಣೆಯಾದ ಚಾಟ್ ಜಿಪಿಟಿ, ಶಕ್ತಿಶಾಲಿ 'ಎಐ' ತಂತ್ರಜ್ಞಾನದ ಆಧುನಿಕ ರೂಪ ಮತ್ತು ಅದರ ಸಾಧ್ಯತೆಗಳ ಅಗಾಧತೆಯನ್ನು ತೆರೆದಿಟ್ಟಿದೆ, ಭವಿಷ್ಯ ಹೇಗಿರುತ್ತದೆ ಎಂಬುದನ್ನೂ! ಗೂಗಲ್ ಎಂಬ ಸರ್ಚ್ ಎಂಜಿನ್ ಹೇಗೆ ಕೆಲಸ ಮಾಡುತ್ತದೆಯೋ ಅದೇ ರೀತಿ ಅಥವಾ ಅದಕ್ಕಿಂತಲೂ ಶಿಸ್ತುಬದ್ಧವಾಗಿ ಈ ಚಾಟ್ ಬಾಟ್ ಕೆಲಸ ಮಾಡುತ್ತದೆ.

ನೋಂದಾಯಿಸಿಕೊಂಡವರು ನೂರಾರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಳ್ಳಬಹುದು. ಎಲ್ಲಿಯವರೆಗೆ ಎಂದರೆ, ಕೆಲವೊಂದು ಕಂಪ್ಯೂಟರ್ ಪ್ರೋಗ್ರಾಂನ ಕೋಡ್‌ಗಳನ್ನು, ಜಾವಾಸ್ಕ್ರಿಪ್ಟ್‌ಗಳನ್ನು ಕೂಡ ಅದು ತಿಳಿಸಿಕೊಡಬಲ್ಲುದು. ಕುತೂಹಲಕ್ಕಾಗಿ, Write a blogger code for scrolling text ಎಂದು ಬರೆದಾಗ, ಸೂಕ್ತವಾದ HTML ಕೋಡ್ ಅನ್ನು ಒದಗಿಸಿತು. ಅಷ್ಟೇ ಅಲ್ಲದೆ, ಬ್ಲಾಗ್‌ನಲ್ಲಿ ಟಿಕರ್‌ನಂತೆ ಸ್ಕ್ರಾಲ್ ಆಗುವ ಪಠ್ಯವನ್ನು ಯಾವ ರೀತಿಯೆಲ್ಲ ಬಳಸಬಹುದು ಎಂಬ ಹಂತಗಳನ್ನೂ ತಿಳಿಸಿತು. ಉದಾಹರಣೆಗೆ, ಸ್ಕ್ರಾಲ್ ಆಗುವುದು ಅಥವಾ ಸ್ಲೈಡ್ ಆಗುವುದು, ಇಲ್ಲವೇ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ, ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಸ್ಕ್ರಾಲ್ ಆಗುವಂತೆ ಈ ಕೋಡ್‌ನಲ್ಲಿ ಏನು ಬದಲಾವಣೆ ಮಾಡಬೇಕು ಎಂದೂ ತಿಳಿಸಿಕೊಡುತ್ತದೆ.

ವಿಷಯ ಏನೆಂದರೆ, ಚಾಟ್‌ಜಿಪಿಟಿಗೆ ಏನೂ ಗೊತ್ತಿಲ್ಲ. ಅಂತರ್ಜಾಲದಿಂದ ಮತ್ತು ಪ್ರೋಗ್ರಾಮಿಂಗ್ ಮೂಲಕ ಮಾಹಿತಿಗಳನ್ನು ಅದರ ದತ್ತಸಂಚಯಕ್ಕೆ ಊಡಿಸಲಾಗಿದೆ. ಜೊತೆಗೆ ಈ ತಂತ್ರಾಂಶಕ್ಕೆ ಮಾನವೀಯ ಸ್ಪರ್ಶ ನೀಡಿ, ತರಬೇತುಗೊಳಿಸಲಾಗಿದೆ. ಅದು ತನಗೆ ದೊರೆತ ಮಾಹಿತಿಯ ಆಧಾರದಲ್ಲಿ ಕಲಿಯುತ್ತಾ (ಮಾಹಿತಿಯನ್ನು ಆರ್ಜಿಸುತ್ತಾ), ತಾನಾಗಿ 'ಯೋಚಿಸಿ' ಸಮಸ್ಯೆಗಳಿಗೆ ಪರಿಹಾರಗಳನ್ನು ಕಲ್ಪಿಸುತ್ತಾ, ತಪ್ಪುಗಳಿಂದ ಕಲಿಯುತ್ತಾ ಬೆಳೆಯುತ್ತಿದೆ. ಇದುವೇ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್'. ಒಟ್ಟಿನಲ್ಲಿ ಇದು ದತ್ತಾಂಶವನ್ನು ಅಥವಾ ಪ್ರೋಗ್ರಾಮಿಂಗ್ ಮೂಲಕ ಊಡಿಸಿದ ಮಾಹಿತಿಯನ್ನು ಕಲಿತುಕೊಳ್ಳುವ ಯಾಂತ್ರಿಕ ಕಲಿಕೆ ಅಥವಾ ಮೆಷಿನ್ ಲರ್ನಿಂಗ್ (ಎಂಎಲ್) ಎಂಬ ತಂತ್ರಜ್ಞಾನದ ವಿಸ್ತೃತ ರೂಪ.

ಈ ಚಾಟ್ ಜಿಪಿಟಿಗೆ ಲಾಗಿನ್ ಆಗುವಾಗಲೇ ನಮಗೆ ಎಚ್ಚರಿಕೆಯ ಸಂದೇಶಗಳು ಕಾಣಿಸುತ್ತವೆ. ಅಂದರೆ, ಇಲ್ಲಿ ದೊರೆಯುವ ಉತ್ತರಗಳು ಸರಿ ಇರಬಹುದು ಅಥವಾ ತಪ್ಪಾಗಿಯೂ ಇರಬಹುದು. ಆದರೆ, ಮಾಹಿತಿಯನ್ನು ಒದಗಿಸುವ ನಿಟ್ಟಿನಲ್ಲಿ ಇನ್ನೂ ಬೆಳೆಯಬೇಕಿರುವ ಈ ಚಾಟ್ ಬಾಟ್, ಗೂಗಲ್‌ಗೆ ಪ್ರತಿಸ್ಪರ್ಧಿಯಾಗಿ ರೂಪುಗೊಳ್ಳಬಹುದು. ಇದನ್ನು ಹೆಚ್ಚು ಬಳಸಿ, ತಪ್ಪು ಉತ್ತರಗಳು ಕಂಡುಬಂದಲ್ಲಿ ಸರಿ ಇಲ್ಲ ಎಂದು ರಿಪೋರ್ಟ್ ಮಾಡಿದರೆ, ಯಂತ್ರವು ಅದರಿಂದಲೂ ಕಲಿತುಕೊಳ್ಳುತ್ತದೆ. ಈ ರೀತಿಯಾಗಿ ಬಳಕೆದಾರರಿಂದಲೇ ಬೆಳೆಯಬಹುದಾದ ಮಾಹಿತಿಕೋಶವಿದು.

ಸದ್ಯಕ್ಕೆ ಸಂಶೋಧನೆ ಮತ್ತು ಪ್ರಾಯೋಗಿಕ ಹಂತದಲ್ಲಿರುವ ಚಾಟ್‌ಜಿಪಿಟಿ ಉಚಿತವಾಗಿ ಲಭ್ಯವಿದೆ. ಮುಂದಕ್ಕೆ ಪಾವತಿ ವ್ಯವಸ್ಥೆಯೂ ಬರಲಿದೆ ಎಂದು ಇದನ್ನು ರೂಪಿಸಿದ ಓಪನ್‌ಎಐ ಕಂಪನಿಯು ಈಗಾಗಲೇ ಸ್ಪಷ್ಟವಾಗಿ ಹೇಳಿದೆ. ಬಹುಶಃ ಜನಸಾಮಾನ್ಯರಿಗೆ ಉಚಿತವಾಗಿಯೂ, ಚಾಟ್ ಬಾಟ್ ಅಳವಡಿಸುವ ಕಂಪನಿಗಳಿಗೆ ಶುಲ್ಕಸಹಿತವಾಗಿಯೂ ಲಭ್ಯವಾಗುವ ಸಾಧ್ಯತೆಯಿದೆ. ಓಪನ್‌ಎಐ ಕಂಪನಿಯು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನವನ್ನು ಜನಸಾಮಾನ್ಯರಿಗೆ ನೆರವಾಗುವಂತೆ ರೂಪಿಸುವ ಗುರಿ ಹೊಂದಿರುವ ಸ್ಯಾನ್ ಫ್ರಾನ್ಸಿಸ್ಕೊದ ಸಂಸ್ಥೆ.

ಮತ್ತೊಂದು ಅಸ್ತ್ರ

ಈಗಾಗಲೇ ಗೂಗಲ್ ಸರ್ಚ್ ಎಂಜಿನ್ ಮೂಲಕ ಯಾವುದೇ ಮಾಹಿತಿಯನ್ನು ಹುಡುಕಿ, ಅಲ್ಲಿ ದೊರೆತದ್ದೇ ಪರಮಸತ್ಯ ಎಂದುಕೊಳ್ಳುವ ಯುವ ಪೀಳಿಗೆಯ ಕೈಗೆ ಈ ಚಾಟ್ ಬಾಟ್ ಮತ್ತೊಂದು ಅಸ್ತ್ರ. ಗೂಗಲ್‌ನಲ್ಲಿ ನಕಲಿ, ಸುಳ್ಳು ಮಾಹಿತಿಗಳು ಹೇಗೆ ಸಿಗುತ್ತವೆಯೋ, ಈ ಚಾಟ್ ಬಾಟ್ ಮೂಲಕವೂ ತಪ್ಪು ಮಾಹಿತಿ ಲಭ್ಯವಾಗುವ ಅಪಾಯವಿದೆ ಎಂಬ ಎಚ್ಚರಿಕೆ ಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ

23) ಯಾವುದನ್ನು ಯೋಜನೆ ಎನ್ನುತ್ತೇವೆ?
ಉತ್ತರ:- ಸರಕಾರವು ಕೆಲವು ನಿರ್ದಿಷ್ಟ ಧ್ಯೇಯೋದ್ದೇಶಗಳೊಂದಿಗೆ, ದೇಶದಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ತನ್ನ ಜನರ ಸುಖವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲು, ಪ್ರಜ್ಞಾಪೂರ್ವಕವಾಗಿ ಮತ್ತು ವಿವೇಕಯುತವಾಗಿ ಜಾರಿಗೊಳಿಸುವ ಪ್ರಕ್ರಿಯೆಯನ್ನು ಯೋಜನೆ ಎನ್ನುತ್ತೇವೆ.

24) ಯಾವುದನ್ನು ಕಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು?
ಉತ್ತರ:- ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸ್‌ನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಕಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.

25) ಮಧ್ಯಕಾಲೀನ ಇತಿಹಾಸದ ಸಮಯದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಹೇಗೆ ನಡೆಯುತ್ತಿದ್ದವು?
ಉತ್ತರ:- ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು

26) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ' (National Development Council)ಯ ಸದಸ್ಯರು ಯಾರು ಆಗಿರುತ್ತಾರೆ?
ಉತ್ತರ:- ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಸದಸ್ಯರಾಗಿರುತ್ತಾರೆ.

27) ನೀತಿ ಆಯೋಗವನ್ನು ಬೆಂಬಲಿಸಿ ಅದರ ಕಾರ್ಯವನ್ನು ಸುಗಮವಾಗಿ ನಡೆಸಲು ಸಹಾಯ ಮಾಡುವ 2 ಸಂಸ್ಥೆಗಳನ್ನು ಹೆಸರಿಸಿ
ಉತ್ತರ:- 1) ಅಟಲ್ ನಾವಿನ್ಯ ಮಿಷನ್ ಮತ್ತು ಅಭಿವೃದ್ಧಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮತ್ತು ಸ್ವಾಯತ್ತ ಸಂಸ್ಥೆ,
2) ಕಾರ್ಮಿಕ ಅರ್ಥಶಾಸ್ತ್ರ ಸಂಶೋಧನೆ ಮತ್ತು ಅಭಿವೃದ್ಧಿಯ ರಾಷ್ಟ್ರೀಯಸಂಸ್ಥೆ

28) ಬ್ಯಾಂಕಿಂಗ್ ಕಂಪನಿಯನ್ನು ವ್ಯಾಖ್ಯಾನಿಸಿ:-
ಉತ್ತರ:- ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ. ಇದು ಯಾರು ಹಣವನ್ನು ಉಳಿತಾಯ ಮಾಡಬೇಕೆಂದು ಬಯಸುವರೋ ಅವರಿಂದ ಸ್ವೀಕರಿಸಿ ಯಾರಿಗೆ ಅವಶ್ಯವಿದೆಯೋ ಅವರಿಗೆ ಸಾಲದ ರೂಪದಲ್ಲಿ ಕೊಡುತ್ತದೆ. ಬ್ಯಾಂಕಿನಲ್ಲಿಯ ಸೇವೆಗಳನ್ನು ಉಪಯೋಗಿಸಿಕೊಳ್ಳುವ ಆ ವ್ಯವಹಾರಗಳನ್ನು ಬ್ಯಾಂಕಿಂಗ್ಎನ್ನುತ್ತೇವೆ.
ಅಥವಾ
ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳ ಹೆಸರಿಸಿ
ಉತ್ತರ:-. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು (Typers of Bank Accounts))
ಬ್ಯಾಂಕ್‌ಗಳಲ್ಲಿ ಸಾಮಾನ್ಯವಾಗಿ ಈ ಕೆಳಗಿನ ನಾಲ್ಕು ವಿಧದ ಖಾತೆಗಳನ್ನು ತೆರೆಯಬಹುದು.
1) ಉಳಿತಾಯ ಖಾತೆ. (Savings Account)
2) ಚಾಲ್ತಿ ಖಾತೆ (Current Account)
3) ಆವರ್ತ ಠೇವಣಿ ಖಾತೆ ((Recurring Deposit Account)
4) ನಿಶ್ಚಿತ ಠೇವಣಿ ಖಾತೆ. (Fixed Deposit Account)

30) ಹಸಿರು ಕ್ರಾಂತಿ ಎಂದರೇನು?
ಉತ್ತರ:-. 1967-70ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು 'ಹಸಿರು ಕ್ರಾಂತಿ' ಎಂದು ಗುರುತಿಸಲಾಗುತ್ತಿದೆ. 1967ರಲ್ಲಿ 74 ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1970ರ ವೇಳೆಗೆ 108 ದಶಲಕ್ಷ ಟನ್‌ಗಳಿಗೆ ಹೆಚ್ಚಿತ್ತು. ಕೇವಲ 3 ವರ್ಷಗಳ À ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಯಿತು. ಇದು ಹಸಿರು ಬೆಳೆಗಳಲ್ಲಾದ ಪ್ರಗತಿಯಾದುದರಿಂದ ಇದಕ್ಕೆ ಹಸಿರು ಕ್ರಾಂತಿ ಎಂದು ಹೆಸರಿಸಲಾಯಿತು.
ಅಥವಾ
ಯಾವುದನ್ನು ಎರಡನೇ ಹಸಿರು ಕ್ರಾಂತಿ ಎಂದು ಕರೆಯುತ್ತಾರೆ?
ಉತ್ತರ:- ರೈತರಿಗೆ ಸಾವಯವ ಕೃಷಿ ವಿಧಾನವನ್ನು ಬಳಸುವಂತೆ ಪ್ರೋತ್ಸಾಹಿಸಲಾಗುತ್ತಿದೆ. ರಾಸಾಯನಿಕ ಗೊಬ್ಬರಗಳಿಗೆ ಬದಲಾಗಿ ಜೈವಿಕ ಗೊಬ್ಬರ, ರಾಸಾಯನಿಕ ಕ್ರಿಮಿನಾಶಕಗಳಿಗೆ ಬದಲಾಗಿ ಜೈವಿಕ ಕ್ರಿಮಿನಾಶಕಗಳ ಬಳಕೆಗೆ ಪ್ರೋತ್ಸಾಹಿಸಲಾಗುತ್ತಿದೆ. ಹೀಗೆ ಕೃಷಿಯಲ್ಲಿ ಎಲ್ಲ ರೀತಿಯ ಪರಸರ ಸ್ನೇಹಿ ತಂತ್ರಗಳನ್ನು ಬಳಸುವ ಮೂಲಕ ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದನ್ನು 'ಎರಡನೇ ಹಸಿರು ಕ್ರಾಂತಿ' ಕರೆಯುತ್ತಾರೆ

31) ಮಹಲ್ವಾರಿ ಪದ್ಧತಿ ಪದ್ದತಿ ಬಗ್ಗೆ ವಿವರವಾಗಿ ವಿವರಿಸಿ
ಉತ್ತರ:-: ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಂಡು, ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ಪದ್ಧತಿಯನ್ನು ಆರ್. ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು. `ಮಹಲ್' ಎಂದರೆ ತಾಲ್ಲೂಕು ಎಂದರ್ಥ. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಈ ಪದ್ಧತಿಯ ಅನುಷ್ಠಾನದಲ್ಲಿ ವ್ಯತ್ಯಾಸಗಳಿದ್ದವು. ದೊಡ್ಡ ಮತ್ತು ಸಣ್ಣ ಪ್ರಮಾಣದ ಜಮೀನ್ದಾರರು ಈ ಪದ್ಧತಿಯ ಭಾಗವಾಗಿದ್ದರು. ಕಂಪನಿಯ ಸರ್ಕಾರದ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿಕತ್ವವನ್ನು ಕಳೆದುಕೊಂಡರು. ಅವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.
ಅಥವಾ
1935ರ ಭಾರತ ಸರ್ಕಾರದ ಕಾಯ್ದೆ ಕುರಿತು ಬರೆಯಿರಿ
ಉತ್ತರ:- ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ. ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ. ಸ್ವತಂತ್ರ ಭಾರತದ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು. ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗದೇ ದೇಶಿಯ ಸಂಸ್ಥಾನಗಳಿಗೂ ಅನ್ವಯವಾಗುವ ಅಂಶಗಳನ್ನು ಇದು ಒಳಗೊಂಡಿದ್ದಿತು.
ಈ ಕಾಯ್ದೆಯ ಪ್ರಮುಖ ಅಂಶಗಳು
1. ಬ್ರಿಟಿಷ್ ಪ್ರಾಂತ್ಯಗಳ, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
2. ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು (Dyarchy)) ಸ್ಥಾಪಿಸಲಾಯಿತು.
3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
4. ಪ್ರಾಂತ್ಯಗಳಲ್ಲಿ "ದ್ವಿ ಸರಕಾರ" ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
5. ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಗಣಿತದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪೂರಕ ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ರಸಾಯನ ಶಾಸ್ತ್ರ

ಪಿಯುಸಿ

ಮಾದರಿ ಪ್ರಶ್ನೋತ್ತರ

50) ಆಲ್ಕೋಹಾಲ್ ಮತ್ತು ಫೀನಾಲ್‌ಗಳು, ಯಾರೊಂದಿಗೆ ವರ್ತಿಸಿ ವರ್ತಿಸಿ ಎಸ್ಟರ್‌ಗಳನ್ನು ಉಂಟುಮಾಡುತ್ತವೆ. ?

ಉತ್ತರ:– ಆಲ್ಕೋಹಾಲ್ ಮತ್ತು ಫೀನಾಲ್‌ಗಳು, ಕಾರ್ಬಾಕ್ಸಿಲಿಕ್ ಆಮ್ಲಗಳು, ಆಮ್ಲ ಕ್ಲೋರೈಡ್‌ಗಳು ಮತ್ತು ಆಮ್ಲ ಆನ್‌ಹೈಡ್ರೇಡ್‌ಗಳೊಂದಿಗೆ ವರ್ತಿಸಿ ಎಸ್ಟರ್‌ಗಳನ್ನು ಉಂಟುಮಾಡುತ್ತವೆ

51) ಆಲ್ಕೋಹಾಲ್‌ಗಳಲ್ಲಿ ಕಾರ್ಬನ್– ಆಕ್ಸಿಜನ್ (C–O) ಬಂಧ (ಆಸ್ಪಿರಿನ್) ಸೀಳಿಕೆ ಒಳಗೊಂಡಿರುವ ಕ್ರಿಯೆಗಳ ಬಗ್ಗೆ ಬರೆಯಿರಿ

ಉತ್ತರ:– ಆಲ್ಕೋಹಾಲ್‌ಗಳಲ್ಲಿ ಕಾರ್ಬನ್– ಆಕ್ಸಿಜನ್ (C–O) **ಬಂಧ (ಆಸ್ಪಿರಿನ್) ಸೀಳಿಕೆ ಒಳಗೊಂಡಿರುವ ಕ್ರಿಯೆಗಳು**

1. ಹೈಡ್ರೋಜನ್ ಹ್ಯಾಲೈಡ್‌ಗಳೊಂದಿಗೆ ಕ್ರಿಯೆ: ಆಲ್ಕೋಹಾಲ್‌ಗಳು ಹೈಡ್ರೋಜನ್ ಹ್ಯಾಲೈಡ್‌ಗಳ ಜೊತೆ ವರ್ತಿಸಿದಾಗ ಅಲ್ಕೈಲ್‌ಹ್ಯಾಲೈಡ್‌ಗಳು ಉತ್ಪತ್ತಿಯಾಗುತ್ತವೆ.

$$ROH + HX \rightarrow R{-}X + H_2O$$

ಮೂರು ವರ್ಗಗಳ ಆಲ್ಕೋಹಾಲ್‌ಗಳ ಕ್ರಿಯಾ ಶೀಲತೆಯ ವ್ಯತ್ಯಾಸವನ್ನು ಅವುಗಳ HCl ಯೊಂದಿಗಿನ ಕ್ರಿಯೆಯಿಂದ ಒಂದರಿಂದ ಇನೊಂದನ್ನು ಗುರಿತಿಸಬಹುದು. (ಲುಕಾಸ್ ಪರೀಕ್ಷೆ) ಆಲ್ಕೋಹಾಲ್‌ಗಳು ಲೂಕಾಸ್ ಕಾರಕದಲ್ಲಿ ಕರುಗುತ್ತವೆ (ಪ್ರಬಲ HCl ಮತ್ತು $ZnCl_2$) ಆದರೆ ಅವುಗಳ ಹ್ಯಾಲೈಡ್‌ಗಳು ಮಿಶ್ರಿತವಾಗುವುದಿಲ್ಲ ಮತ್ತು ದ್ರಾವಣದಲ್ಲಿ ರಾಡಿ ಉಂಟುಮಾಡುತ್ತವೆ.

ತೃತೀಯಕ ಆಲ್ಕೋಹಾಲ್‌ಗಳ ಸಂದರ್ಭದಲ್ಲಿ ಹ್ಯಾಲೈಡ್‌ಗಳು ಸುಲಭವಾಗಿ ಉತ್ಪತ್ತಿಯಾಗಿ, ರಾಡಿ ತಕ್ಷಣವೇ ಉಂಟಾಗುತ್ತದೆ. ಪ್ರಾಥಮಿಕ ಆಲ್ಕೋಹಾಲ್‌ಗಳು ಕೊಠಡಿಯ ಉಷ್ಣತೆಯಲ್ಲಿ ರಾಡಿಯನ್ನು ಉಂಟುಮಾಡುವುದಿಲ್ಲ.

2. ಫಾಸ್ಪರಸ್ ಟ್ರೈ ಹ್ಯಾಲೈಡ್‌ನೊಂದಿಗೆ ಕ್ರಿಯೆ: ಆಲ್ಕೋಹಾಲ್‌ಗಳನ್ನು ಫಾಸ್ಪರಸ್ ಟ್ರೈಬ್ರೋಮೈಡ್‌ನ ಕ್ರಿಯೆಯ ಮೂಲಕ ಆಲ್ಕೈಲ್ ಬ್ರೋಮೈಡ್‌ಗಳಾಗಿ ಪರಿವರ್ತಿಸಬಹುದು

3. ನಿರ್ಜಲೀಕರಣ (Dehydration): ಆಲ್ಕೋಹಾಲ್‌ಗಳನ್ನು ಪ್ರೋಟಿಕ್ ಆಮ್ಲಗಳೊಂದಿಗೆ H_2SO_4 ಅಥವಾ ವೇಗವರ್ಧಕಗಳಾದ ಅಥವಾ ಶುಷ್ಕ ಸತುವಿನ ಕ್ಲೋರೈಡ್ ಅಥವಾ ಅಲ್ಯುಮಿನಾಗಳೊಂದಿಗೆ ವರ್ತಿಸಿದಾಗ ನಿರ್ಜಲೀಕರಣಗೊಂಡು (ನೀರಿನ ಅಣುವಿನ ತೆಗೆಯುವಿಕೆ) ಆಲ್ಕೀನ್‌ಗಳನ್ನು ಉಂಟುಮಾಡುತ್ತವೆ.

$$-\underset{H}{\overset{|}{C}}-\underset{OH}{\overset{|}{C}}- \xrightarrow[\text{ಕಾಯಿಸಿ}]{H^+} >C=C< + H_2O$$

ಈಥೆನೊಲನ್ನು ಪ್ರಬಲ ಗಂಧಕಾಮ್ಲದೊಂದಿಗೆ 443Kನಲ್ಲಿ ಕಾಯಿಸಿದಾಗ ನಿರ್ಜಲೀಕರಣಕ್ಕೆ ಒಳಗಾಗುತ್ತದೆ

$$C_2H_5OH \xrightarrow[443\ K]{H_2SO_4} CH_2 = CH_2 + H_2O$$

ದ್ವಿತೀಯಕ ಮತ್ತು ತೃತೀಯಕ ಆಲ್ಕೋಹಾಲ್‌ಗಳು ಮಂದ ಪರಿಸ್ಥಿತಿಗಳಲ್ಲಿ ನಿರ್ಜಲೀಕರಣಗೊಳ್ಳುತ್ತವೆ. ಉದಾಹರಣೆಗೆ

$$CH_3\overset{\overset{OH}{|}}{C}HCH_3 \xrightarrow[440\ K]{85\%\ H_3PO_4} CH_3-CH = CH_2 + H_2O$$

$$CH_3-\underset{\underset{CH_3}{|}}{\overset{\overset{CH_3}{|}}{C}}-OH \xrightarrow[358\ K]{20\%\ H_3PO_4} CH_3-\overset{\overset{CH_2}{\|}}{C}-CH_3 + H_2O$$

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ನಗರ ಸ್ಥಳೀಯ ಸಂಸ್ಥೆ • ಅಲಹಾಬಾದ್ ಹೈಕೋರ್ಟ್ ಆದೇಶ • ಉತ್ತರಪ್ರದೇಶ ಸರ್ಕಾರಕ್ಕೆ ಹಿನ್ನಡೆ

ಒಬಿಸಿ ಮೀಸಲಾತಿ ಇಲ್ಲದೆ ಚುನಾವಣೆ ನಡೆಸಿ

ಪ್ರಜಾವಾಣಿ ವಾರ್ತೆ



ಲಖನೌ: ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿ ಕಲ್ಪಿಸದೆಯೇ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಂತೆ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ಮಂಗಳವಾರ ಉತ್ತರಪ್ರದೇಶ ಸರ್ಕಾರಕ್ಕೆ ಆದೇಶಿಸಿದೆ. ಈ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿದ್ದ ಕರಡು ಅಧಿಸೂಚನೆಯನ್ನೂ ರದ್ದುಗೊಳಿಸಿದೆ.

ಲಖನೌ ಪೀಠದ ಈ ತೀರ್ಪು ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಹಿನ್ನಡೆಯಾಗಿ ಪರಿಣಮಿಸಿದೆ.

ಉತ್ತರಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್ ನೀಡಿದ್ದ ತ್ರಿವಳಿ ಸೂತ್ರ ಪಾಲಿಸದೆಯೇ ಒಬಿಸಿ ಮೀಸಲಾತಿಗೆ ಸಂಬಂಧಿಸಿದ ಕರಡು ಸಿದ್ಧಪಡಿಸುತ್ತಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರಣೆಯನ್ನು ಶನಿವಾರ ಪೂರ್ಣಗೊಳಿಸಿದ್ದ ನ್ಯಾಯಮೂರ್ತಿಗಳಾದ ದೇವೇಂದ್ರಕುಮಾರ್ ಉಪಾಧ್ಯಾಯ ಮತ್ತು ಸೌರಭ್ ಶ್ರೀವಾಸ್ತವ ಅವರಿದ್ದ ದ್ವಿಸದಸ್ಯ ವಿಭಾಗೀಯ ಪೀಠವು ತೀರ್ಪು ಪ್ರಕಟಿಸಿದೆ.

ಆಡಳಿತಾವಧಿ ಕೊನೆಗೊಳ್ಳಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಸಂಬಂಧ ಸರ್ಕಾರ ಹೊರಡಿಸಿದ್ದ ಮತ್ತೊಂದು ಅಧಿಸೂಚನೆಯನ್ನೂ ನ್ಯಾಯಪೀಠ ರದ್ದುಪಡಿಸಿದೆ.

'ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ನೀಡಿದ್ದ ತ್ರಿವಳಿ ಸೂತ್ರ ಪಾಲಿಸದೆಯೇ ಮೀಸಲಾತಿಗೆ ಸಂಬಂಧಿಸಿದ ಕರಡು ಸಿದ್ಧಪಡಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

'ರಾಜ್ಯ ಸರ್ಕಾರವು ಒಬಿಸಿಗೆ ಮೀಸಲಾತಿ ನಿಗದಿಪಡಿಸುವುದಕ್ಕೂ ಮುನ್ನ ಸುಪ್ರೀಂ ಕೋರ್ಟ್‌ನ ಸೂತ್ರವನ್ನು ಕಡ್ಡಾಯವಾಗಿ ಪಾಲಿಸಬೇಕು. ಇತರ ಹಿಂದುಳಿದ ವರ್ಗಗಳು ರಾಜಕೀಯವಾಗಿ ಹಿಂದುಳಿದಿವೆಯೇ ಇಲ್ಲವೇ ಎಂಬುದರ ಅಧ್ಯಯನಕ್ಕಾಗಿ ಆಯೋಗವೊಂದನ್ನು ರಚಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದರು.

'ಸರ್ಕಾರವು ಈ ಸಂಬಂಧ ಸಮೀಕ್ಷೆ ಕೈಗೊಂಡಿದ್ದು, ಅದು ತ್ರಿವಳಿ ಸೂತ್ರದಷ್ಟೇ ಉತ್ತಮವಾಗಿದೆ' ಎಂದು ಉತ್ತರಪ್ರದೇಶ ಸರ್ಕಾರ ನ್ಯಾಯಪೀಠಕ್ಕೆ ತಿಳಿಸಿತ್ತು.

17 ಮಹಾನಗರ ಪಾಲಿಕೆಗಳ ಮೇಯರ್, 200 ನಗರಸಭೆ ಹಾಗೂ 545 ಪಟ್ಟಣ ಪಂಚಾಯಿತಿಯ ಅಧ್ಯಕ್ಷ ಸ್ಥಾನಗಳ ಮೀಸಲಾತಿಗೆ ಸಂಬಂಧಿಸಿದ ತಾತ್ಕಾಲಿಕ ಪಟ್ಟಿಯನ್ನು ಉತ್ತರಪ್ರದೇಶ ಸರ್ಕಾರ ಈ ತಿಂಗಳ ಆರಂಭದಲ್ಲಿ ಬಿಡುಗಡೆ ಮಾಡಿತ್ತು. ಇದರಲ್ಲಿ ಒಬಿಸಿಗಳಿಗೆ 4 ಮೇಯರ್ ಸ್ಥಾನ, ನಗರಸಭೆಯ 54 ಮತ್ತು ಪಟ್ಟಣ ಪಂಚಾಯಿತಿಯ 147 ಅಧ್ಯಕ್ಷ ಸ್ಥಾನಗಳನ್ನು ಮೀಸಲಿಟ್ಟಿತ್ತು.

ಒಬಿಸಿ ಮೀಸಲಾತಿ ವಿಚಾರದಲ್ಲಿ ಬಿಜೆಪಿ ಮೊಸಳೆ ಕಣ್ಣೀರು ಸುರಿಸುತ್ತಿದೆ. ನ್ಯಾಯಾಲಯದಲ್ಲಿ ತನ್ನ ಅಧಿಸೂಚನೆ ಸಮರ್ಥಿಸಿಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಅಧ್ಯಕ್ಷ

'ಒಬಿಸಿ ಮೀಸಲಾತಿಗೆ ಬದ್ಧ: ಅಗತ್ಯಬಿದ್ದರೆ 'ಸುಪ್ರೀಂ' ಮೊರೆ'



ಆದಿತ್ಯನಾಥ್

'ಒಬಿಸಿಗೆ ಮೀಸಲಾತಿ ನೀಡುವ ನಿರ್ಣಯಕ್ಕೆ ಸರ್ಕಾರ ಬದ್ಧವಾಗಿದೆ. ಇದಕ್ಕಾಗಿ ಆಯೋಗವೊಂದನ್ನು ರಚಿಸಲಿದ್ದು, ಅದು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಸಮೀಕ್ಷೆ ಕೈಗೊಳ್ಳಲಿದೆ' ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿರುವುದಾಗಿ 'ಎನ್‌ಡಿಟಿವಿ' ವರದಿ ಮಾಡಿದೆ.

'ಒಬಿಸಿಗೆ ಮೀಸಲಾತಿ ಕಲ್ಪಿಸದೆಯೇ ಚುನಾವಣೆ ನಡೆಸುವುದಿಲ್ಲ. ಅಗತ್ಯಬಿದ್ದರೆ ಸರ್ಕಾರವು ಲಖನೌ ಪೀಠದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್ ಮೊರೆಹೋಗಲಿದೆ' ಎಂದೂ ಅವರು ಹೇಳಿರುವುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಆದಿತ್ಯನಾಥ್ ಸರ್ಕಾರದ ಹುನ್ನಾರ'

'ಆಡಳಿತಾರೂಢ ಬಿಜೆಪಿಯು ಇತರ ಹಿಂದುಳಿದ ವರ್ಗಗಳಿಂದ ಮೀಸಲಾತಿ ಕಸಿದುಕೊಳ್ಳಲು ಹುನ್ನಾರ ನಡೆಸುತ್ತಿದೆ' ಎಂದು ವಿರೋಧ ಪಕ್ಷಗಳು ಕಿಡಿಕಾರಿವೆ.

'ಬಿಜೆಪಿ ಸರ್ಕಾರವು ಒಬಿಸಿ ಹಾಗೂ ದಲಿತ ವಿರೋಧಿಯಾಗಿದೆ' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಟೀಕಿಸಿದ್ದಾರೆ.

'ಬಿಜೆಪಿಯು ಮೀಸಲಾತಿ ವಿರೋಧಿಯಾಗಿದೆ. ಒಬಿಸಿ ಮೀಸಲಾತಿ ವಿಚಾರದಲ್ಲಿ ಸರ್ಕಾರವು ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಪಾಲಿಸಿಲ್ಲ. ಹೀಗಾಗಿ ಹೈಕೋರ್ಟ್ ಅಧಿಸೂಚನೆ ರದ್ದುಪಡಿಸಿದೆ. ಇದಕ್ಕಾಗಿ ಒಬಿಸಿಯವರು ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ' ಎಂದು ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿ ದೂರಿದ್ದಾರೆ.

ಸಿಬಿಐ ಮನವಿ ತಳ್ಳಿ ಹಾಕಿದ ಬಾಂಬೆ ಹೈಕೋರ್ಟ್

ತನಿಖಾ ಸಂಸ್ಥೆಯು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ಆದರೆ, ರಜೆ ಕಾಲವಾಗಿರುವುದರಿಂದ ಮೇಲ್ಮನವಿ ಅರ್ಜಿ ಜನವರಿಯಲ್ಲಿ ವಿಚಾರಣೆಗೆ ಬರಲಿದೆ.

ದೇಶ್‌ಮುಖ್ ಜಾಮೀನಿಗೆ ತಡೆ ವಿಸ್ತರಿಸಲು ನಿರಾಕರಣೆ

ಮುಂಬೈ(ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐನಿಂದ ಬಂಧಿತರಾಗಿ ಆರ್ಥರ್ ರೋಡ್ ಜೈಲಿನಲ್ಲಿ ಸದ್ಯ ನ್ಯಾಯಾಂಗ ವಶದಲ್ಲಿರುವ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ಬುಧವಾರ ಬಿಡುಗಡೆಯಾಗುವ ಸಾಧ್ಯತೆಗಳಿವೆ.

ಎನ್‌ಸಿಪಿ ನಾಯಕ, 73 ವರ್ಷದ ದೇಶ್‌ಮುಖ್ ಅವರಿಗೆ ಬಾಂಬೆ ಹೈಕೋರ್ಟ್ ರಜಾ ಕಾಲದ ಪೀಠವು ಡಿ.12ರಂದು ಜಾಮೀನು ಮಂಜೂರು ಮಾಡಿತ್ತು. ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಿಬಿಐ ಸಮಯಾವಕಾಶ ಕೇಳಿತ್ತು. ಹಾಗಾಗಿ, ಹತ್ತು ದಿನಗಳ ಕಾಲಾವಕಾಶ ಕಲ್ಪಿಸಿ, ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿ ಎಂ.ಎಸ್. ಕಾರ್ಣಿಕ್ ಅವರು ಡಿ.27 ರವರೆಗೆ ಆದೇಶಕ್ಕೆ ತಡೆ ನೀಡಿದ್ದರು.



ಅನಿಲ್ ದೇಶ್‌ಮುಖ್

ಕಾಲಾವಕಾಶ ಮುಗಿದ ಕಾರಣ, ಇನ್ನಷ್ಟು ದಿನಗಳಿಗೆ ತಡೆ ವಿಸ್ತರಿಸುವಂತೆ ಸಿಬಿಐ ಮಂಗಳವಾರ ಮತ್ತೊಮ್ಮೆ ಮಾಡಿದ ಮನವಿಯನ್ನು ಪೀಠ ತಳ್ಳಿ ಹಾಕಿತು.

ಜಾಮೀನು ಆದೇಶಕ್ಕೆ ತಡೆ ವಿಸ್ತರಿಸಲು ಪೀಠ ನಿರಾಕರಿಸಿರುವುದರಿಂದ ದೇಶ್‌ಮುಖ್ ಅವರನ್ನು ಬುಧವಾರ ಬಿಡುಗಡೆ ಮಾಡಬಹುದು ಎಂದು ಅವರ ವಕೀಲರು ತಿಳಿಸಿದ್ದಾರೆ. ಇ.ಡಿ ಪ್ರಕರಣದಲ್ಲಿ ದೇಶ್‌ಮುಖ್ ಅವರಿಗೆ ಹೈಕೋರ್ಟ್ ಅಕ್ಟೋಬರ್‌ನಲ್ಲಿ ಜಾಮೀನು ನೀಡಿದೆ.

ಕೋವಿಡ್ ನಿರ್ವಹಣೆ: ಆಸ್ಪತ್ರೆಗಳಲ್ಲಿ ಅಣಕು ಕಾರ್ಯಾಚರಣೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾದರೆ ಪರಿಸ್ಥಿತಿ ನಿಭಾಯಿಸಲು ಆಸ್ಪತ್ರೆಗಳು ಎಷ್ಟರ ಮಟ್ಟಿಗೆ ಸನ್ನದ್ದವಾಗಿವೆ ಎಂದು ತಿಳಿಯಲು ಮಂಗಳವಾರ ಅಣಕು ಕಾರ್ಯಾಚರಣೆ ನಡೆಯಿತು.



ಚೀನಾ ಮತ್ತು ಇತರ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಮುಂಜಾಗ್ರತಾ ಕ್ರಮವಾಗಿ ಸನ್ನದ್ಧತೆ ಪರೀಕ್ಷೆ ಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರವು ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿತ್ತು.

'ಭಾರತದಲ್ಲೂ ಪ್ರಕರಣಗಳು ಹೆಚ್ಚಾಗಬಹುದು. ಹಾಗಾಗಿ ಕೋವಿಡ್ ಚಿಕಿತ್ಸಾ ಉಪಕರಣಗಳು, ಮಾನವ ಸಂಪನ್ಮೂಲವನ್ನು ಕಾರ್ಯಾಚರಣೆಗೆ ಸನ್ನದ್ಧವಾಗಿರಿಸುವುದು ಅಗತ್ಯವಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದರು.

ಎಲ್ಲ ಜಿಲ್ಲೆಗಳಲ್ಲಿ ಲಭ್ಯವಿರುವ ಆರೋಗ್ಯ ಸೌಲಭ್ಯಗಳು, ಸೋಂಕಿತರನ್ನು ಪ್ರತ್ಯೇಕವಾಗಿ ಇರಿಸಿ ಚಿಕಿತ್ಸೆ ನೀಡುವ ವ್ಯವಸ್ಥೆ, ಆಮ್ಲಜನಕ ವ್ಯವಸ್ಥೆ ಇರುವ ಹಾಸಿಗೆಗಳು, ತೀವ್ರ ನಿಗಾ ಘಟಕಗಳು ಮತ್ತು ಕೃತಕ ಉಸಿರಾಟದ ಸೌಲಭ್ಯ, ವೈದ್ಯರು, ನರ್ಸ್‌ಗಳು ಮತ್ತು ಮುಂಚೂಣಿ ಕಾರ್ಯಕರ್ತರ ಲಭ್ಯತೆ ಕುರಿತ ಮಾನದಂಡಗಳ ಮೇಲೆ ಈ ಪರೀಕ್ಷೆಗಳು ಕೇಂದ್ರೀಕೃತವಾಗಿದ್ದವು ಎಂದು ಅಧಿಕಾರಿಗಳು ತಿಳಿಸಿದರು.

ದೇಶದಾದ್ಯಂತ ಮಂಗಳವಾರ ಕೋವಿಡ್‌ನ 157 ಹೊಸ ಪ್ರಕರಣಗಳು ದಾಖಲಾಗಿವೆ ಎಂದು ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠ ಅಭಿಪ್ರಾಯ

ಪರೀಕ್ಷೆ ನಕಲು, ಅಕ್ರಮ ಪ್ಲೇಗ್‌ನಂತೆ

ನವದೆಹಲಿ (ಪಿಟಿಐ): ಪರೀಕ್ಷೆಯಲ್ಲಿ ನಕಲು ಮಾಡುವುದು ಮತ್ತು ಅಕ್ರಮ ಎಸಗುವುದು ಪ್ಲೇಗ್‌ನಂತೆ ಸಾಂಕ್ರಾಮಿಕ ರೋಗವಾಗಿ ಹರಡಿದೆ. ಇದು ಸಮಾಜ ಮತ್ತು ದೇಶದ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸುತ್ತದೆ. ಪರೀಕ್ಷಾ ಅಕ್ರಮಗಳನ್ನು ಹತ್ತಿಕ್ಕಲು ಕಠಿಣ ಕ್ರಮಕೈಗೊಳ್ಳಬೇಕಿದೆ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠವು, ಪರೀಕ್ಷಾ ಅಕ್ರಮಗಳನ್ನು ನೆಚ್ಚಿಕೊಳ್ಳುವ ಮತ್ತು ಅಕ್ರಮ ವಿಧಾನಗಳಿಂದ ಉತ್ತೀರ್ಣವಾಗುವ ವಿದ್ಯಾರ್ಥಿಗಳು ರಾಷ್ಟ್ರ ನಿರ್ಮಿಸಲು ಸಾಧ್ಯವಿಲ್ಲ. ದೇಶದ ಪ್ರಗತಿಗೆ ಸಮಗ್ರ ಶಿಕ್ಷಣ ವ್ಯವಸ್ಥೆಯು ಇಂಬು ನೀಡುವಂತಿರಬೇಕು ಎಂದು ಅಭಿಪ್ರಾಯಪಟ್ಟಿದೆ.

ಎಂಜಿನಿಯರಿಂಗ್ ಶಿಕ್ಷಣದ ಎರಡನೇ ಸೆಮಿಸ್ಟರ್‌ನಲ್ಲಿ ಅಕ್ರಮಗಳನ್ನು ಎಸಗಿ ಪರೀಕ್ಷೆ ಬರೆದಿದ್ದ ಕಾರಣಕ್ಕೆ ಪರೀಕ್ಷೆ ರದ್ದುಪಡಿಸಿದ್ದನ್ನು ವಿದ್ಯಾರ್ಥಿ ಪ್ರಶ್ನಿಸಿದ್ದ ಅರ್ಜಿ ವಿಚಾರಣೆ ನಡೆಸುವಾಗ ಏಕ ಸದಸ್ಯಪೀಠ ಇದರಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿತ್ತು. ಇದರ ವಿರುದ್ಧದ ಮೇಲ್ಮನವಿ ಅರ್ಜಿಯನ್ನು ಆಲಿಸುವಾಗ ವಿಭಾಗೀಯ ಪೀಠವು, ಪರೀಕ್ಷಾ ಅಕ್ರಮಗಳ ಬಗ್ಗೆ ಹರಿಹಾಯ್ದಿದೆ.

'ಪರೀಕ್ಷೆಗಳಲ್ಲಿ ನಕಲು, ಅಕ್ರಮಗಳನ್ನು ಹತ್ತಿಕ್ಕದಿದ್ದರೆ ಅಥವಾ ಮೃದುತ್ವ ತೋರಿಸಿದರೆ, ಸಮಾಜ ಮತ್ತು ಶಿಕ್ಷಣ ವ್ಯವಸ್ಥೆಯ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ' ಎಂದು ಪೀಠದಲ್ಲಿದ್ದ ಮತ್ತೊಬ್ಬ ನ್ಯಾಯಮೂರ್ತಿ ಸುಬ್ರಹ್ಮಣಿಯಂ ಪ್ರಸಾದ್ ಅವರು ಚಾಟಿ ಬೀಸಿದ್ದಾರೆ.

ಈ ಪ್ರಕರಣ ಸಂಬಂಧ ಏಕ ಸದಸ್ಯ ನ್ಯಾಯಪೀಠ ನೀಡಿದ್ದ ಆದೇಶದಲ್ಲಿ ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದ ವಿಭಾಗೀಯ ಪೀಠವು, ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸಿತು.

ವಿಭಾಗೀಯ ಪೀಠ ಹೇಳಿದ್ದೇನು?

- ಪರೀಕ್ಷೆಗಳ ಪ್ರಕ್ರಿಯೆಗಳಲ್ಲಿ ಪರಿಶುದ್ಧತೆ ಮತ್ತು ಕಟ್ಟುನಿಟ್ಟಿನ ಶಿಸ್ತು ಕಾಪಾಡಿಕೊಳ್ಳುವ ಅಗತ್ಯವನ್ನು ಸುಪ್ರೀಂ ಕೋರ್ಟ್ ಒತ್ತಿಹೇಳಿದೆ. ಇದು ರಾಷ್ಟ್ರದ ಒಟ್ಟಾರೆ ಪ್ರಗತಿಗೆ ಅಗತ್ಯವೂ ಹೌದು
- ಪ್ರಶ್ನೆಪತ್ರಿಕೆ ಸೋರಿಕೆ, ನಕಲು ಇವೆಲ್ಲವೂ ಎಣ್ಣೆ ದೀಪದಡಿ ರಾತ್ರಿಯೀಡಿ ಓದಿ ತಯಾರಾದಂತಹವರಿಗೆ ದ್ರೋಹ ಬಗೆದಂತೆ
- ಪರೀಕ್ಷೆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡ ವಿ.ವಿ, ಶಿಕ್ಷಣ ಸಂಸ್ಥೆ ಹಾಗೂ ಸಂಬಂಧಿತರೆಲ್ಲರೂ ಕಳಂಕರಹಿತ ಮತ್ತು ಬದ್ಧತೆಯ ನಡವಳಿಕೆ ತೋರಬೇಕು
- ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವವರು ಗೋಪ್ಯತೆ ಕಾಯ್ದುಕೊಳ್ಳಬೇಕು. ಪರೀಕ್ಷಾ ಮೇಲ್ವಿಚಾರಕರು ಮೈಯೆಲ್ಲಾ ಕಣ್ಣಾಗಿರಬೇಕು, ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮ ಎಸಗಬಾರದು

ಮತಾಂತರ ನಿಷೇಧ ಕಾನೂನು: ಜ.2ಕ್ಕೆ 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ಅಂತರಧರ್ಮೀಯ ವಿವಾಹಕ್ಕಾಗಿ ಮತಾಂತರಗೊಳ್ಳುವುದನ್ನು ನಿಯಂತ್ರಿಸುವ ಉದ್ದೇಶದಿಂದ ಕೆಲ ರಾಜ್ಯಗಳು ಕಾನೂನು ಜಾರಿಗೊಳಿಸಿದ್ದು, ಇವುಗಳ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಜನವರಿ 2ರಂದು ವಿಚಾರಣೆಗೆ ಒಳಪಡಿಸಲಿದೆ.

ವಕೀಲ ವಿಶಾಲ್ ಠಾಕ್ರೆ ಹಾಗೂ 'ಸಿಟಿಜನ್ ಫಾರ್ ಜಸ್ಟಿಸ್ ಆ್ಯಂಡ್ ಪೀಸ್' ಹೆಸರಿನ ಸ್ವಯಂ ಸೇವಾ ಸಂಸ್ಥೆಯು (ಎನ್‌ಜಿಒ) ಈ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದು, ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರನ್ನೊಳಗೊಂಡ ನ್ಯಾಯಪೀಠವು ಇವುಗಳ ವಿಚಾರಣೆ ನಡೆಸಲಿದೆ.

ಈ ಕಾನೂನುಗಳ ಅಡಿಯಲ್ಲಿ ಮುಸ್ಲಿಮರಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿ 'ಜಮೈತ್ ಉಲೆಮಾ–ಐ–ಹಿಂದ್' ಸಂಘಟನೆ ಸಲ್ಲಿಸಿರುವ ಅರ್ಜಿಯನ್ನೂ ಸುಪ್ರೀಂ ಕೋರ್ಟ್ ವಿಚಾರಣೆಗೆ ಒಳಪಡಿಸಲಿದೆ.

'ಈ ಪ್ರಕರಣದಲ್ಲಿ ಕೇಂದ್ರ ಹಾಗೂ ಕೆಲ ರಾಜ್ಯಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದ್ದು, ಈ ಪೈಕಿ ಈವರೆಗೆ ಯಾರೂ ಪ್ರತಿಕ್ರಿಯೆ ಸಲ್ಲಿಸಿಲ್ಲ' ಎಂದು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ವರದಿಯಲ್ಲಿ ತಿಳಿಸಲಾಗಿದೆ.



ಭಕ್ತರ ದಂಡು

ಸಿಖ್ಖರ 10ನೇ ಗುರು, ಗೋವಿಂದ್ ಸಿಂಗ್ ಅವರ ಜನ್ಮ ದಿನೋತ್ಸವದ ಹಿನ್ನೆಲೆಯಲ್ಲಿ ಮಂಗಳವಾರ ಅಮೃತಸರದ ಸ್ವರ್ಣ ಮಂದಿರದಲ್ಲಿ ಆಯೋಜಿಸಲಾಗಿದ್ದ 'ನಾಗರ್ ಕೀರ್ತನ'ದಲ್ಲಿ ಭಾಗವಹಿಸಿದ್ದ ಭಕ್ತರು – ಪಿಟಿಐ ಚಿತ್ರ

'ಪ್ರಜ್ಞಾ ವಿರುದ್ಧ ಎಫ್‌ಐಆರ್ ದಾಖಲಿಸಿ'

ಪ್ರಜಾವಾಣಿ ವಾರ್ತೆ



ಪ್ರಜ್ಞಾ ಸಿಂಗ್

ನವದೆಹಲಿ: 'ನಿಮ್ಮ ಚಾಕುಗಳನ್ನು ಹರಿತವಾಗಿರಿಸಿಕೊಳ್ಳಿ. ನಮ್ಮ ಶತ್ರುಗಳ ತಲೆಗಳನ್ನು ಕತ್ತರಿಸಲು ಆ ಚಾಕುಗಳಿಂದ ಸಾಧ್ಯ' ಎಂದು ಕರ್ನಾಟಕದ ಶಿವಮೊಗ್ಗದಲ್ಲಿ ಭಾನುವಾರ ಹೇಳಿಕೆ ನೀಡಿದ್ದ ಬಿಜೆಪಿ ಸಂಸದೆ ಪ್ರಜ್ಞಾಸಿಂಗ್ ಠಾಕೂರ್ ವಿರುದ್ಧ ದ್ವೇಷಭಾಷಣದ ಎಫ್‌ಐಆರ್ ದಾಖಲಿಸುವಂತೆ ವಿರೋಧ ಪಕ್ಷಗಳು ಆಗ್ರಹಿಸಿವೆ.

ಶಿವಮೊಗ್ಗದಲ್ಲಿ ಹಿಂದೂ ಜಾಗರಣ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಜ್ಞಾಸಿಂಗ್ ಈ ಮಾತು ಹೇಳಿದ್ದರು. ಈ ಬಗ್ಗೆ ದೂರು ನೀಡಿದ್ದರೂ, ಎಫ್‌ಐಆರ್ ದಾಖಲಾಗದೇ ಇರುವ ಬಗ್ಗೆ ವಿರೋಧ ಪಕ್ಷಗಳು ಆಕ್ರೋಶ ವ್ಯಕ್ತಪಡಿಸಿವೆ. ಇಂತಹ ಸಮಾಜಘಾತುಕರು ದ್ವೇಷಭಾಷಣದ ಮೂಲಕ ಧ್ರುವೀಕರಣ ಮಾಡಲಿ ಎಂದು ನರೇಂದ್ರ ಮೋದಿ ಬಿಟ್ಟಿದ್ದಾರೆಯೇ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಈ ಬಗ್ಗೆ ಯಾರೂ ದೂರು ನೀಡಿಲ್ಲ. ಹೀಗಾಗಿ ಎಫ್‌ಐಆರ್ ದಾಖಲಿಸಿಲ್ಲ ಎಂದು ಪೊಲೀಸರು ಸಮಜಾಯಿಷಿ ನೀಡುತ್ತಿದ್ದಾರೆ. ಆದರೆ, ನಾನು ಈಗಾಗಲೇ ದೂರು ನೀಡಿದ್ದೇನೆ. ದೂರು ನೀಡಿದ್ದಕ್ಕೆ ಸ್ವೀಕೃತಿಯನ್ನೂ ಪಡೆದಿದ್ದೇನೆ. ಈಗ ಪೊಲೀಸರು ದೂರು ಬಂದಿಲ್ಲ ಎಂದು ನೆಪ ಹೇಳಲು ಸಾಧ್ಯವಿಲ್ಲ ಎಂದು ಟಿಎಂಸಿ ರಾಷ್ಟ್ರೀಯ ವಕ್ತಾರ ಸಾಕೇತ್ ಗೋಖಲೆ ಟ್ವೀಟ್ ಮಾಡಿದ್ದಾರೆ. ದೂರು ಮತ್ತು ಸ್ವೀಕೃತಿಯ ಪ್ರತಿಗಳನ್ನೂ ಅವರು ಟ್ವೀಟ್ ಮಾಡಿದ್ದಾರೆ.

ಬಿಜೆಪಿ ಸಂಸದೆ ಮುಸ್ಲಿಮರ ನರಮೇಧ ನಡೆಸಿ ಎಂದು ತಮ್ಮ ಅನುಯಾಯಿಗಳಿಗೆ ಬಹಿರಂಗ ಕರೆ ನೀಡುತ್ತಿದ್ದಾರೆ. ಬಿಜೆಪಿ ಸಂಸದೆ ಹೀಗೆ ಹೇಳುತ್ತಿರುವುದರಲ್ಲಿ ನನಗೆ ಆಶ್ಚರ್ಯವೇನೂ ಇಲ್ಲ

ಮೆಹಬೂಬಾ ಮುಫ್ತಿ, ಪಿಡಿಪಿ ಮುಖ್ಯಸ್ಥೆ

ಒಬ್ಬ ಸಂಸದೆ ಇಂತಹ ಅಪಾಯಕಾರಿ ಕರೆ ನೀಡಿದ್ದಾರೆ. ಪ್ರಧಾನಿ, ಗೃಹಸಚಿವ ಮತ್ತು ಲೋಕಸಭಾ ಸ್ಪೀಕರ್ ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ತೆಗೆದುಕೊಳ್ಳಬೇಕು

ಡ್ಯಾನಿಶ್ ಅಲಿ, ಬಿಎಸ್‌ಪಿ ಸಂಸದ

ಮೋದಿ ದ್ವೇಷಭಾಷಣದ ವಿರುದ್ಧ ಮಾತನಾಡುತ್ತಾರೆ. ಆದರೆ ಅವರದ್ದೇ ಪಕ್ಷದ ಸಂಸದೆ ದೇಶದುದ್ದಕ್ಕೂ ದ್ವೇಷ ಹರಡುತ್ತಿದ್ದಾರೆ. ಇಂತಹವರ ವಿರುದ್ಧ ಪೊಲೀಸರು ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ?

ನಗ್ಮಾ, ಕಾಂಗ್ರೆಸ್ ನಾಯಕಿ

ಟ್ವಿಟರ್ ಮೂಲಕ ದೂರು

ಶಿವಮೊಗ್ಗ: ಇಲ್ಲಿ ಈಚೆಗೆ ನಡೆದಿದ್ದ ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ್ಯದ ತ್ರೈವಾರ್ಷಿಕ ಸಮ್ಮೇಳನದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಭೋಪಾಲ್‌ನ ಬಿಜೆಪಿ ಸಂಸದೆ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ವಿರುದ್ಧ ದೆಹಲಿ ಮೂಲದ ತೆಹಸೀನ್ ಪೂನಾವಾಲಾ ಅವರು ಇಲ್ಲಿನ ಪೊಲೀಸ್ ವರಿಷ್ಠಾಧಿಕಾರಿಗೆ ಟ್ವಿಟರ್ ಮೂಲಕ ದೂರು ನೀಡಿದ್ದಾರೆ.

'ಆತ್ಮರಕ್ಷಣೆಗಾಗಿ ನಾವು ದಾಳಿ ಮಾಡಬೇಕಾಗುತ್ತದೆ. ನಮ್ಮ ಹೆಣ್ಣು ಮಕ್ಕಳ ಸಂರಕ್ಷಣೆಗೆ ತರಕಾರಿ ಕತ್ತರಿಸುವ ಚಾಕುಗಳನ್ನು ಹರಿತವಾಗಿಸಿ ಸಿದ್ಧವಾಗಿಟ್ಟುಕೊಳ್ಳಿ. ಹೆಣ್ಣು ಮಕ್ಕಳನ್ನು ನಡೆದಾಡುವ ಆಟಂ ಬಾಂಬ್‌ಗಳಂತೆ ಸಿದ್ಧಪಡಿಸಬೇಕು. ನಮ್ಮ ಹೆಣ್ಣುಮಕ್ಕಳು ಲವ್ ಜಿಹಾದ್‌ನಲ್ಲಿ ಸಿಲುಕದಂತೆ ನೋಡಿಕೊಳ್ಳಬೇಕು' ಎಂದು ಸಾಧ್ವಿ ಹೇಳಿಕೆ ನೀಡಿದ್ದರು.

ದ್ವೇಷ ಭಾಷಣದ ಮೂಲಕ ಸಾಮಾಜಿಕ ಸ್ವಾಸ್ಥ್ಯ ಕದಡುವ ಪ್ರಯತ್ನದ ಹಿನ್ನೆಲೆಯಲ್ಲಿ ಸಾಧ್ವಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಪೂನಾವಾಲಾ ಅವರು ಕೋರಿದ್ದು, ಟ್ವೀಟ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಟ್ಯಾಗ್ ಮಾಡಿದ್ದಾರೆ.

ಸಾಧ್ವಿ ವಿರುದ್ಧ ಐಪಿಸಿ 153/ಎ, 153/ಬಿ, 268, 295–ಎ, 298, 504, 508, 1860 ಅಡಿ ಎಫ್‌ಐಆರ್ ದಾಖಲು ಮಾಡುವಂತೆ ಪೂನಾವಾಲಾ ಕೋರಿದ್ದಾರೆ.

ಖುದ್ದಾಗಿ ಬರಲು ಸೂಚನೆ: ಎಸ್ಪಿ

ಟ್ವಿಟರ್ ದೂರಿನ ಅನ್ವಯ ಏನೂ ಕ್ರಮ ಮಾಡಲು ಆಗೊಲ್ಲ. ತೊಂದರೆಗೀಡಾದವರು ಯಾರಾದರೂ ದೂರು ನೀಡಿದರೆ ಕ್ರಮ ಕೈಗೊಳ್ಳಬಹುದು. ಎರಡು ಇ–ಮೇಲ್ ಮೂಲಕವೂ ದೂರು ಬಂದಿವೆ. ಖುದ್ದಾಗಿ ಹಾಜರಾಗಿ ದೂರು ನೀಡುವಂತೆ ಅವರಿಗೆ ಸೂಚನೆ ನೀಡಿದ್ದೇವೆ. ದೂರಿನ ಪ್ರತಿಗಳನ್ನು ಸಂಬಂಧಿಸಿದ ಪೊಲೀಸ್ ಠಾಣೆಗೆ ಕಳುಹಿಸಲಾಗಿದೆ ಎಂದು ಎಸ್ಪಿ ಜಿ.ಕೆ.ಮಿಥುನ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ಕ್ರೂಡ್ರೈವರ್‌ನಿಂದ 51 ಬಾರಿ ಚುಚ್ಚಿ ಮಹಿಳೆ ಕೊಲೆ

ಕೊರ್ಬಾ, ಛತ್ತೀಸಗಡ (ಪಿಟಿಐ): 'ಮೊಬೈಲ್‌ನಲ್ಲಿ ಮಾತನಾಡಲು ನಿರಾಕರಿಸಿದ್ದಕ್ಕೆ ದುಷ್ಕರ್ಮಿಯೊಬ್ಬ ಸ್ಕ್ರೂಡ್ರೈವರ್‌ನಿಂದ 51 ಬಾರಿ ಚುಚ್ಚಿ ಮಹಿಳೆಯನ್ನು ಕೊಲೆ ಮಾಡಿದ್ದಾನೆ' ಎಂದು ಇಲ್ಲಿನ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ಸೌತ್ ಈಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್‌ನ (ಎಸ್‌ಇಸಿಎಲ್) ಪಂಪ್ ಹೌಸ್ ಕಾಲೊನಿಯಲ್ಲಿ ಇದೇ 24ರಂದು ಘಟನೆ ನಡೆದಿದೆ' ಎಂದು ಕೊರ್ಬಾ ನಗರದ ಪೊಲೀಸ್ ವರಿಷ್ಠಾಧಿಕಾರಿ ವಿಶ್ವದೀಪಕ್ ತ್ರಿಪಾಠಿ ಹೇಳಿದ್ದಾರೆ.

'ಮಹಿಳೆ ಏಕಾಂಗಿಯಾಗಿದ್ದ ವೇಳೆ ಆಕೆಯ ಮನೆಗೆ ನುಗ್ಗಿದ್ದ ದುಷ್ಕರ್ಮಿ, ಕಿರುಚಾಡದಂತೆ ದಿಂಬಿನಿಂದ ಆಕೆಯ ಮುಖವನ್ನು ಒತ್ತಿ ಹಿಡಿದಿದ್ದ. ಬಳಿಕ ಸ್ಕ್ರೂಡ್ರೈವರ್‌ನಿಂದ 51 ಬಾರಿ ಚುಚ್ಚಿ ಪರಾರಿಯಾಗಿದ್ದ. ಮೃತಳ ಸಹೋದರ ಮನೆಗೆ ಬಂದು ನೋಡಿದಾಗ ದೇಹವು ರಕ್ತದ ಮಡುವಿನಲ್ಲಿ ಬಿದ್ದಿತ್ತು' ಎಂದು ಮಾಹಿತಿ ನೀಡಿದ್ದಾರೆ.

ಆರೋಪಿ ಜಶ್‌ಪುರ್ ಜಿಲ್ಲೆಯ ನಿವಾಸಿ. ಆತ ಬಸ್‌ವೊಂದರಲ್ಲಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದ. ಅದೇ ಬಸ್ಸಿನಲ್ಲಿ ಮಹಿಳೆ ಆಗಾಗ ಪ್ರಯಾಣಿಸುತ್ತಿದ್ದರು. ಹೀಗಾಗಿ ಇಬ್ಬರ ನಡುವೆ ಪರಸ್ಪರ ಸ್ನೇಹ ಬೆಳೆದಿತ್ತು. ಆರೋಪಿಯು ಕೆಲಸದ ನಿಮಿತ್ತ ಗುಜರಾತ್‌ನ ಅಹಮದಾಬಾದ್‌ಗೆ ಸ್ಥಳಾಂತರಗೊಂಡಿದ್ದ. ಬಳಿಕ ಇಬ್ಬರು ಮೊಬೈಲ್ ಮೂಲಕ ಸಂಪರ್ಕದಲ್ಲಿದ್ದರು. ಆಕೆ ಮೊಬೈಲ್‌ನಲ್ಲಿ ಮಾತನಾಡುವುದನ್ನು ನಿಲ್ಲಿಸಿದ್ದಳು.

ಬಂಧನ ಕಾನೂನುಬಾಹಿರ: ಕೊಚ್ಚರ್ ದಂಪತಿ ಕೋರ್ಟ್‌ಗೆ

ಮುಂಬೈ(ಪಿಟಿಐ): ಐಸಿಐಸಿಐ ಬ್ಯಾಂಕ್ ಸಾಲ ವಂಚನೆ ಪ್ರಕರಣದಲ್ಲಿ ಸಿಬಿಐ ತಮ್ಮನ್ನು ಬಂಧಿಸಿರುವುದು ಕಾನೂನುಬಾಹಿರ ಎಂದು ಬ್ಯಾಂಕ್‌ನ ಮಾಜಿ ಸಿಇಒ ಚಂದಾ ಕೊಚ್ಚರ್ ಮತ್ತು ಅವರ ಪತಿ ದೀಪಕ್ ಹೇಳಿದ್ದಾರೆ.

ಬಂಧನ ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ಗೆ ಅವರು ಅರ್ಜಿ ಸಲ್ಲಿಸಿದ್ದಾರೆ. ಆದರೆ, ತಕ್ಷಣ ಅರ್ಜಿಯ ವಿಚಾರಣೆ ನಡೆಸಲು ಕೋರ್ಟ್ ನಿರಾಕರಿಸಿದೆ. ರಜೆ ಅವಧಿಯ ಬಳಿಕ ನಿಯಮಿತ ಪೀಠಕ್ಕೆ ಮನವಿ ಸಲ್ಲಿಸಬಹುದು ಎಂದೂ ಸಲಹೆ ಮಾಡಿದೆ.

ಕೊಚ್ಚರ್ ಅವರನ್ನು ಪ್ರತಿನಿಧಿಸಿದ್ದ ವಕೀಲರು, ಕಾಯ್ದೆ ಅನುಸಾರ ಬಂಧನಕ್ಕೆ ಮೊದಲು ಸಿಬಿಐ ಅನುಮತಿ ಪಡೆದಿರಲಿಲ್ಲ. ಶುಕ್ರವಾರದಂದು ಅಲ್ಪಕಾಲದ ವಿಚಾರಣೆಯ ಹಿಂದೆಯೇ ಬಂಧಿಸಿತು ಎಂದು ಹೇಳಿದರು.

2019ರಲ್ಲಿ ದಾಖಲಿಸಿದ್ದ ಎಫ್‌ಐಆರ್‌ನಲ್ಲಿ ಕೊಚ್ಚರ್ ದಂಪತಿ, ವಿಡಿಯೊಕಾನ್ ಸಂಸ್ಥೆಯ ಸ್ಥಾಪಕ ವೇಣುಗೋಪಾಲ್ ಧೂತ್, ದೀಪಕ್ ನಿರ್ವಹಿಸುತ್ತಿರುವ ನೂಪವರ್ ರಿನೀವಬಲ್, ಸುಪ್ರೀಂ ಎನರ್ಜಿ ಪ್ರೈವೇಟ್ ಲಿಮಿಟೆಡ್, ವಿಡಿಯೊಕಾನ್ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್, ವಿಡಿಯೊಕಾನ್ ಇಂಡಸ್ಟ್ರೀಸ್ ಅನ್ನು ಸಿಬಿಐ ಹೆಸರಿಸಿದೆ.

ಐಸಿಐಸಿಐ ಬ್ಯಾಂಕ್ ಕಾಯ್ದೆ ಉಲ್ಲಂಘಿಸಿ ವಿಡಿಯೊಕಾನ್ ಸಮೂಹ ಸಂಸ್ಥೆಗೆ ₹ 3,250 ಕೋಟಿ ಮಂಜೂರು ಮಾಡಿದೆ ಎಂದು ಸಿಬಿಐ ಆರೋಪಿಸಿದೆ. ಸಿಬಿಐ ಡಿ.28ರವರೆಗೆ ಕೊಚ್ಚರ್ ದಂಪತಿ, ಧೂತ್‌ರನ್ನು ವಶಕ್ಕೆ ಪಡೆದಿದೆ.

ರಷ್ಯಾ ಸಂಸದನ ಅಸಹಜ ಸಾವು: ಸಿಐಡಿ ತನಿಖೆಗೆ

ಭುವನೇಶ್ವರ (ಪಿಟಿಐ): ರಷ್ಯಾದ ಸಂಸದ ಪಾವೆಲ್ ಆ್ಯಂಥವ್ ಹಾಗೂ ವಕೀಲ ವಾಡ್ಲಿಮಿರ್ ಬಿದೆವೊ ಅವರ ಅಸಹಜ ಸಾವಿನ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ, ಒಡಿಶಾದ ಪೊಲೀಸ್ ಮಹಾನಿರ್ದೇಶಕ ಸುನಿಲ್ ಕುಮಾರ್ ಬನ್ಸಾಲ್ ಮಂಗಳವಾರ ಆದೇಶಿಸಿದ್ದಾರೆ.

ಆ್ಯಂಥವ್ ಅವರು ಡಿ.24ರಂದು ರಾಯಗಢದ ಹೋಟೆಲ್‌ವೊಂದರ 3ನೇ ಮಹಡಿಯಿಂದ ಬಿದ್ದು ಮೃತಪಟ್ಟಿದ್ದರು. ವಾಡ್ಲಿಮಿರ್ ಬಿದೆವೊ ಡಿ.22ರಂದು ಇದೇ ಹೋಟೆಲ್‌ನ ತಮ್ಮ ಕೋಣೆಯಲ್ಲಿ ಮೃತಪಟ್ಟಿದ್ದರು.

'ಆ್ಯಂಥವ್ ತಮ್ಮ 66ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲು ಬಿದೆವೊ ಸೇರಿದಂತೆ ತಮ್ಮ ಇಬ್ಬರು ಸ್ನೇಹಿತರೊಂದಿಗೆ ರಾಯಗಢಕ್ಕೆ ಬಂದಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

ಪೂರ್ಣಗೊಳ್ಳದ ಸಮೀಕ್ಷೆ: ತರಾಟೆ

ನವದೆಹಲಿ: ಭಾರತದಲ್ಲಿರುವ ವಲಸೆ ಕಾರ್ಮಿಕರ ಸಮೀಕ್ಷೆ ಪೂರ್ಣಗೊಳಿಸದ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯವನ್ನು ರಾಜ್ಯಸಭೆಯ ಭರವಸೆಗಳ ಸಮಿತಿಯು ತರಾಟೆಗೆ ತೆಗೆದುಕೊಂಡಿದೆ. ವಲಸೆ ಕಾರ್ಮಿಕರ ಮೇಲೆ ಕೋವಿಡ್ ಬೀರಿದ ಪರಿಣಾಮದ ಬಗ್ಗೆ ಅಧ್ಯಯನ ಮಾಡುವಂತೆ ಸಚಿವಾಲಯಕ್ಕೆ ಸೂಚಿಸಲಾಗಿತ್ತು.

ಕಾರ್ಮಿಕ ಸಚಿವಾಲಯದ ಸೂಚನೆ ಮೇರೆಗೆ ಕಾರ್ಮಿಕ ಬ್ಯೂರೊ ವಲಸೆ ಕಾರ್ಮಿಕರ ಸಮೀಕ್ಷೆಯನ್ನು ಕಳೆದ ವರ್ಷದ ಏಪ್ರಿಲ್ 1ರಂದು ಆರಂಭಿಸಿತ್ತು. ಆದರೆ, '18 ತಿಂಗಳು ಕಳೆದರೂ ಸಮೀಕ್ಷೆ ಕೆಲಸ ಪೂರ್ಣಗೊಂಡಿಲ್ಲ' ಎಂದು ಎಐಎಡಿಎಂಕೆ ಸಂಸದ ಎಂ.ತಂಬಿದೊರೈ ನೇತೃತ್ವದ ಸಮಿತಿಯು ಸಂಸತ್ತಿಗೆ ಸಲ್ಲಿಸಿದ ವರದಿಯಲ್ಲಿ ಹೇಳಿದೆ.

'ಇದು ಕಾರ್ಮಿಕ ಬ್ಯೂರೊದ ಅಸಡ್ಡೆಯನ್ನು ತೋರಿಸುತ್ತದೆ' ಎಂದು ಸಚಿವಾಲಯಕ್ಕೆ ಸಮಿತಿಯು ಸೂಚಿಸಿದೆ.

ಗಾಂಧಿ ಕುಟುಂಬ ಕಡುಭ್ರಷ್ಟ: ಬಿಜೆಪಿ ಟೀಕೆ



ರಾಬರ್ಟ್ ವಾದ್ರಾ

ನವದೆಹಲಿ (ಪಿಟಿಐ): ಭಾರತೀಯ ರಾಜಕಾರಣದಲ್ಲಿ ಗಾಂಧಿ ಕುಟುಂಬ 'ಕಡುಭ್ರಷ್ಟ ಕುಟುಂಬ' ಮತ್ತು 'ಕಟ್ಟರ್ ಪಾಪಿ ಪರಿವಾರ್' ಎಂದು ಗಾಂಧಿ ಕುಟುಂಬದ ವಿರುದ್ಧ ಬಿಜೆಪಿ ಮಂಗಳವಾರ ತೀವ್ರ ವಾಗ್ದಾಳಿ ನಡೆಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ಪತಿ ರಾಬರ್ಟ್ ವಾದ್ರಾ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ರದ್ದುಪಡಿಸಲು ಕೋರಿದ್ದ ಮನವಿಯನ್ನು ರಾಜಸ್ಥಾನ ಹೈಕೋರ್ಟ್ ಕಳೆದ ವಾರ ತಿರಸ್ಕರಿಸಿದೆ.

ಇದನ್ನು ಉಲ್ಲೇಖಿಸಿರುವ ಬಿಜೆಪಿ ವಕ್ತಾರ ಗೌರವ್ ಭಾಟಿಯಾ, 'ವಾದ್ರಾ ವಿರುದ್ಧದ ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪಗಳ ಬಗ್ಗೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ತಮ್ಮ ಮೌನ ಮುರಿಯಬೇಕು' ಎಂದು ಒತ್ತಾಯಿಸಿದ್ದಾರೆ.

ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧದ ನ್ಯಾಷನಲ್ ಹೆರಾಲ್ಡ್ ಪ್ರಕರಣ ಉಲ್ಲೇಖಿಸಿರುವ ಗೌರವ್ ಭಾಟಿಯಾ, 'ಗಾಂಧಿ ಕುಟುಂಬದ ಮೂವರು ಭ್ರಷ್ಟಾಚಾರ ಪ್ರಕರಣಗಳಲ್ಲಿ ಜಾಮೀನು ಪಡೆದಿದ್ದಾರೆ' ಎಂದು ಟೀಕಿಸಿದರು.

ವಾದ್ರಾ ವಿರುದ್ಧದ ಭ್ರಷ್ಟಾಚಾರ ಆರೋಪಗಳು ರಾಜಕೀಯ ಪ್ರೇರಿತವಾಗಿವೆ ಎಂದು ಕಾಂಗ್ರೆಸ್ ಮೊದಲಿನಿಂದಲೂ ಅಲ್ಲಗಳೆಯುತ್ತಾ ಬಂದಿದೆ.

ರಾಹುಲ್ 'ಅತೀಂದ್ರಿಯ ಶಕ್ತಿ' ಹೊಂದಿದ್ದಾರೆ: ಕಾಂಗ್ರೆಸ್ ಮುಖಂಡ ಬಣ್ಣನೆ

ರಾಹುಲ್‌ರನ್ನು ರಾಮನಿಗೆ ಹೋಲಿಸಿದ ಖುರ್ಷಿದ್



ಖುರ್ಷಿದ್

ಮೊರಾದಾಬಾದ್ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಅತೀಂದ್ರಿಯ ಶಕ್ತಿ' ಹೊಂದಿದ್ದಾರೆ. ಅವರು 'ತಪಸ್ಸು ಮಾಡುತ್ತಿರುವ ಯೋಗಿ' ಎಂದು ಪಕ್ಷದ ಮುಖಂಡ ಸಲ್ಮಾನ್ ಖುರ್ಷಿದ್ ಮಂಗಳವಾರ ಬಣ್ಣಿಸಿದ್ದಾರೆ. ರಾಹುಲ್ ಅವರನ್ನು ಶ್ರೀರಾಮನಿಗೆ ಮತ್ತು ಪಕ್ಷದ ಕಾರ್ಯಕರ್ತರನ್ನು ಭರತನಿಗೆ ಸಲ್ಮಾನ್ ಹೋಲಿಸಿದ್ದಾರೆ.

'ರಾಹುಲ್ ಅವರಿಗೆ ಅತೀಂದ್ರಿಯ ಶಕ್ತಿ ಇದೆ. ಕೊರೆಯುವ ಚಳಿಯಲ್ಲಿ ನಾವೆಲ್ಲರೂ ಜಾಕೆಟ್ ಹಾಕಿಕೊಂಡಿದ್ದರೆ ರಾಹುಲ್ ಅವರು ಬರೇ ಟಿ–ಶರ್ಟ್‌ನಲ್ಲಿಯೇ ಇರುತ್ತಾರೆ. ಅವರೊಬ್ಬ ಯೋಗಿ' ಎಂದು ಖುರ್ಷಿದ್ ಅವರು ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದಾರೆ.

'ಶ್ರೀರಾಮನ ಪಾದುಕೆಯು ಎಲ್ಲೆಡೆಯೂ ಹೋಗುತ್ತದೆ. ಶ್ರೀರಾಮನಿಗೆ ಹೋಗಲು ಆಗುತ್ತಿಲ್ಲ ಎಂದಾದಾಗ ಭರತನು ಪಾದುಕೆಯನ್ನು ಒಯ್ಯುತ್ತಿದ್ದ. ಅದೇ ರೀತಿಯಲ್ಲಿ ನಾವು ಪಾದುಕೆಯನ್ನು ಉತ್ತರ ಪ್ರದೇಶಕ್ಕೆ ತಂದಿದ್ದೇವೆ. ಶ್ರೀರಾಮನೂ ಬರಲಿದ್ದಾನೆ. ಇದು ನಮ್ಮ ನಂಬಿಕೆ' ಎಂದು ಖುರ್ಷಿದ್ ಹೇಳಿದ್ದಾರೆ.

'ಭಾರತ್ ಜೋಡೊ ಯಾತ್ರೆ'ಯು ಗಾಜಿಯಾಬಾದ್‌ನ ಲೋನಿ ಮೂಲಕ ಜನವರಿ 3ರಂದು ಉತ್ತರ ಪ್ರದೇಶ ಪ್ರವೇಶಿಸಲಿದೆ. ಇಲ್ಲಿಂದ ಯಾತ್ರೆಯು ಹರಿಯಾಣಕ್ಕೆ ಹೋಗಲಿದೆ. ಕೋವಿಡ್ ತಡೆಯ ಎಲ್ಲ ವೈಜ್ಞಾನಿಕ ಮಾರ್ಗಸೂಚಿಯನ್ನು ಪಾಲಿಸಲಾಗುವುದು ಎಂದು ಖುರ್ಷಿದ್ ತಿಳಿಸಿದ್ದಾರೆ.

ಕೋವಿಡ್ ಹೆಚ್ಚುತ್ತಿದೆ. ಸೋಂಕು ತಡೆ ಮಾರ್ಗಸೂಚಿಗಳನ್ನು ಪಾಲಿಸಲು ಸಾಧ್ಯವಾಗದಿದ್ದರೆ ಯಾತ್ರೆಯನ್ನು ರದ್ದುಪಡಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ರಾಹುಲ್‌ಗೆ ಇತ್ತೀಚೆಗೆ ಪತ್ರ ಬರೆದಿದ್ದರು.

'ಭಾರತ್ ಜೋಡೊ'ದಲ್ಲಿ ಭಾಗವಹಿಸದಿರಲು ಎಸ್‌ಪಿ, ಬಿಎಸ್‌ಪಿ, ಆರ್‌ಎಲ್‌ಡಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಲಖನೌ: ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ್ ಜೋಡೊ' ಯಾತ್ರೆಯ ಜೊತೆ ಕೈಜೋಡಿಸದಿರಲು ಸಮಾಜವಾದಿ ಪಕ್ಷ ಸೇರಿದಂತೆ ಉತ್ತರಪ್ರದೇಶದ ಪ್ರಮುಖ ವಿರೋಧ ಪಕ್ಷಗಳು ನಿರ್ಧರಿಸಿವೆ.

ಬಿಎಸ್‌ಪಿ, ರಾಷ್ಟ್ರೀಯ ಲೋಕದಳ ಸೇರಿದಂತೆ ಕೆಲವು ಪಕ್ಷಗಳು ಈ ನಿರ್ಧಾರ ಪ್ರಕಟಿಸಿವೆ. ವಿರೋಧ ಪಕ್ಷಗಳಲ್ಲಿ ಒಗ್ಗಟ್ಟಿದೆ ಎಂದು ಯಾತ್ರೆಯ ಮೂಲಕ ಸಂದೇಶ ರವಾನಿಸುವ ಕಾಂಗ್ರೆಸ್‌ನ ಉದ್ದೇಶಕ್ಕೆ ಇದರಿಂದ ಹಿನ್ನಡೆಯಾಗಿದೆ.

'ಭಾರತ್ ಜೋಡೊ ಯಾತ್ರೆಗೆ ನಾವು ವಿರುದ್ಧವಾಗಿಲ್ಲ. ಆದರೆ, ಪೂರ್ವನಿರ್ಧರಿತ ಕಾರ್ಯಕ್ರಮಗಳಿಂದಾಗಿ ನಾವು ಈ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿಲ್ಲ' ಎಂದು ಸಮಾಜವಾದಿ ಪಕ್ಷ, ಬಿಎಸ್‌ಪಿ, ಇತರೆ ಕೆಲವು ಪಕ್ಷಗಳು ಕಾರಣವನ್ನು ನೀಡಿವೆ. ಯಾತ್ರೆಯು ಜ.3ರಂದು ಉತ್ತರಪ್ರದೇಶ ರಾಜ್ಯವನ್ನು ಪ್ರವೇಶಿಸಲಿದೆ.

ಯಾತ್ರೆಯಲ್ಲಿ ಭಾಗವಹಿಸುವಂತೆ ಅಖಿಲೇಶ್ ಯಾದವ್ ಅವರಿಗೆ ಕಾಂಗ್ರೆಸ್ ಆಹ್ವಾನಿಸಿದೆ. ಪೂರ್ವನಿಗದಿತ ಕಾರ್ಯಕ್ರಮಗಳಿಂದಾಗಿ ಭಾಗವಹಿಸುತ್ತಿಲ್ಲ ಎಂದು ಸಮಾಜವಾದಿ ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

ಆರ್‌ಎಲ್‌ಡಿ ಅಧ್ಯಕ್ಷ ಜಯಂತ್ ಚೌಧರಿ ಅವರು ಭಾಗವಹಿಸುತ್ತಿಲ್ಲ ಎಂದು ಆ ಪಕ್ಷದ ಮುಖಂಡರು ಸ್ಪಷ್ಟಪಡಿಸಿದರೆ, ಬಿಎಸ್‌ಪಿ ಭಾಗವಹಿಸುವುದಿಲ್ಲ ಎಂದು ಆ ಪಕ್ಷದ ಮೂಲಗಳು ದೃಢಪಡಿಸಿವೆ.

ಎಸ್‌ಬಿಎಸ್‌ಪಿ ಭಾಗಿ: ರಾಜ್‌ಭರ್ ಸಮುದಾಯವನ್ನು ಪ್ರತಿನಿಧಿಸುವ ಸುಹೇಲ್‌ದೇವ್ ಭಾರತೀಯ ಸಮಾಜ್ ಪಾರ್ಟಿಯ ಅಧ್ಯಕ್ಷ ಓಂ ಪ್ರಕಾಶ್ ರಾಜ್‌ಭರ್ ಅವರು ಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ.

ಅಖಿಲೇಶ್ ಯಾದವ್, ಜಯಂತ್, ಬಿಎಸ್‌ಪಿಯ ಸತೀಶ್ ಚಂದ್ರ ಮಿಶ್ರಾ, ಸಿಪಿಐ ನಾಯಕ ಅತುಲ್ ಅಂಜನ್, ಮಾಜಿ ಸಚಿವ ಶಿವಪಾಲ್ ಸಿಂಗ್ ಯಾದವ್, ರಾಜಭರ್ ಅವರನ್ನು ಯಾತ್ರೆಯಲ್ಲಿ ಪಾಲ್ಗೊಳ್ಳಲು ಕಾಂಗ್ರೆಸ್ ಪಕ್ಷವು ಆಹ್ವಾನಿಸಿತ್ತು.

ರಾಜ್ಯದಲ್ಲಿ ಕಾಂಗ್ರೆಸ್ ಅಷ್ಟೊಂದು ಪ್ರಭಾವಿಯಲ್ಲ ಎಂದು ಎಸ್‌ಪಿ., ಬಿಎಸ್‌ಪಿ, ಆರ್‌ಎಲ್‌ಡಿ ಭಾವಿಸಿವೆ. ಹೀಗಾಗಿ, ಆ ಪಕ್ಷದ ನೇತೃತ್ವದ ಜಾಥಾದಲ್ಲಿ ಪಾಲ್ಗೊಳ್ಳಲು ಬಯಸುತ್ತಿಲ್ಲ ಎಂದು ರಾಜಕೀಯ ವಿಶ್ಲೇಷಕರು ವ್ಯಾಖ್ಯಾನಿಸಿದ್ದಾರೆ.

'ಜಮ್ಮು–ಕಾಶ್ಮೀರ: ಮೂವರು ಮಾಜಿ ಸಿ.ಎಂಗಳ ಬೆಂಬಲ'

ಶ್ರೀನಗರ: 'ಭಾರತ್ ಜೋಡೊ' ಯಾತ್ರೆಯಲ್ಲಿ ಭಾಗವಹಿಸಲು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಫಾರೂಕ್ ಅಬ್ದುಲ್ಲಾ, ಓಮರ್ ಅಬ್ದುಲ್ಲಾ, ಮೆಹಬೂಬಾ ಮುಫ್ತಿ ನಿರ್ಧರಿಸಿದ್ದಾರೆ.

'ಯಾತ್ರೆ ಪರಿಣಾಮಕಾರಿಯಾಗಿ ಆಗುತ್ತಿದೆ. ಜಾತ್ಯತೀತ ಚಿಂತನೆಗೆ ಧಕ್ಕೆಆಗಬಾರದು ಎಂಬ ಚಿಂತನೆ ಬಲವಾಗುತ್ತಿದೆ ಎಂಬುದಕ್ಕೆ ಇದು ನಿದರ್ಶನ' ಎಂದು ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಯಾತ್ರೆಯು ಜನವರಿ ಮೂರನೇ ವಾರದಲ್ಲಿ ಕಾಶ್ಮೀರವನ್ನು ಪ್ರವೇಶಿಸಲಿದೆ. ಯಾತ್ರೆ ಡಿ. 24ರಂದು ರಾಜಧಾನಿ ನವದೆಹಲಿ ಪ್ರವೇಶಿಸಿದೆ. ಒಂಬತ್ತು ದಿನಗಳ ವಿರಾಮದ ಬಳಿಕ ಜ.3ಕ್ಕೆ ಉತ್ತರ ಪ್ರದೇಶ ಪ್ರವೇಶಿಸಲಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಕ್ಷಮೆಗಿಂತ ಉತ್ಕೃಷ್ಟವಾದ ಆಯುಧ ಇಲ್ಲ. -ಗುರುನಾನಕ್

ಲಂಚ ಆರೋಪ: ದೂರುದಾರರಿಗೇ ಕಿರುಕುಳದ ವಿರೋಧಾಭಾಸ

ಸರ್ಕಾರದ ನಿರ್ಮಾಣ ಕಾಮಗಾರಿಗಳ ಒಟ್ಟು ಯೋಜನಾ ವೆಚ್ಚದ ಶೇಕಡ 40ರಷ್ಟನ್ನು ಲಂಚವಾಗಿ ನೀಡಬೇಕಾದ ಪರಿಸ್ಥಿತಿ ಇದೆ; ಇಲ್ಲದೇ ಹೋದರೆ ಕಾಮಗಾರಿಗಳ ಹಣ ಬಿಡುಗಡೆಯೇ ಆಗುವುದಿಲ್ಲ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು (ಕೆಎಸ್‌ಸಿಎ) ಸುಮಾರು ಒಂದು ವರ್ಷದಿಂದ ಆರೋಪಿಸುತ್ತಲೇ ಬಂದಿದೆ. ಈ ಆರೋಪ ಕುರಿತು ಪರಿಶೀಲಿಸಲು, ಆರೋಪಿಗಳನ್ನು ಗುರುತಿಸಿ ಶಿಕ್ಷೆ ಕೊಡಲು ರಾಜ್ಯ ಸರ್ಕಾರ ಏನನ್ನೂ ಮಾಡಿಲ್ಲ. ಆದರೆ, ತೋಟಗಾರಿಕಾ ಸಚಿವ ಮುನಿರತ್ನ ಅವರು ದಾಖಲಿಸಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿ ನ್ಯಾಯಾಲಯವೊಂದು ನೀಡಿದ್ದ ಆದೇಶದ ಮೇಲೆ ಕೆಎಸ್‌ಸಿಎ ಅಧ್ಯಕ್ಷ ಡಿ. ಕೆಂಪಣ್ಣ ಸೇರಿದಂತೆ ಸಂಘಟನೆಯ ಹಲವರನ್ನು ಬಂಧಿಸಲಾಯಿತು. ನ್ಯಾಯಾಲಯದ ಆದೇಶವನ್ನು ಸರ್ಕಾರವು ಗುರಾಣಿಯಂತೆ ಬಳಸಿಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ, ಕೆಎಸ್‌ಸಿಎ ಮಾಡಿರುವ ಗಂಭೀರವಾದ ಆರೋಪಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ಸತ್ಯವನ್ನು ಬಯಲಿಗೆ ತರುವುದಕ್ಕೆ ಸರ್ಕಾರವು ಪ್ರಯತ್ನವನ್ನೇ ಮಾಡಿಲ್ಲ. ರಾಜ್ಯ ಸರ್ಕಾರದ ವಿವಿಧ ಹಂತಗಳಲ್ಲಿ ಪದೇ ಪದೇ ಸಲ್ಲಿಸಿದ ಮನವಿಗೆ ಯಾವುದೇ ಸ್ಪಂದನ ದೊರೆಯದ ಕಾರಣ ಕೆಎಸ್‌ಸಿಎ ಅಧ್ಯಕ್ಷ ಕೆಂಪಣ್ಣ ಅವರು, 'ಭ್ರಷ್ಟಾಚಾರ ಮಾಡುವುದಿಲ್ಲ, ಇತರರು ಮಾಡುವುದಕ್ಕೂ ಬಿಡುವುದಿಲ್ಲ' ಎಂದು ಹೇಳಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೂ ದೂರು ನೀಡಿದ್ದರು. ಪ್ರಧಾನಿಯ ಕಾರ್ಯಾಲಯವು ಈ ದೂರನ್ನು ರಾಜ್ಯ ಸರ್ಕಾರಕ್ಕೆ ರವಾನಿಸುವ ಕೆಲಸವನ್ನಷ್ಟೇ ಮಾಡಿದೆ. ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದವರ ವಿರುದ್ಧವೇ ಆಪಾದನೆ ಇದೆ. ಹಾಗಿದ್ದರೂ ದೂರನ್ನು ರಾಜ್ಯಕ್ಕೆ ಕಳುಹಿಸಲಾಗಿದೆ. ನಿರೀಕ್ಷೆಯಂತೆಯೇ ಯಾವ ಪ್ರಯೋಜನವೂ ಆಗಿಲ್ಲ. ಭ್ರಷ್ಟಾಚಾರದ ಆರೋಪವನ್ನು ಸಾಬೀತು ಮಾಡುವ ದಾಖಲೆಗಳನ್ನು ಕೊಡಿ ಎಂದು ಕೆಎಸ್‌ಸಿಎಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೇಳಿದ್ದಾರೆ. ಲಂಚ ಪಡೆಯುವವರು ಅದಕ್ಕೆ ರಸೀದಿ ನೀಡುವುದಿಲ್ಲ ಎಂಬುದು ಮುಖ್ಯಮಂತ್ರಿಯವರಿಗೆ ತಿಳಿಯದ ವಿಚಾರ ಏನಲ್ಲ. ಸ್ವತಂತ್ರವಾದ ತನಿಖೆಗೆ ಮುಖ್ಯಮಂತ್ರಿ ಆದೇಶ ನೀಡಬೇಕಿತ್ತು. ದೂರುದಾರರಿಗೇ ಕಿರುಕುಳ ನೀಡುವುದು ಮುಖ್ಯಮಂತ್ರಿ ಮತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದಿಲ್ಲ; ಬದಲಿಗೆ, ಈ ತಂತ್ರವು ಜನರಲ್ಲಿ ಇರುವ ಸಂದೇಹಕ್ಕೆ ಪುಷ್ಟಿ ಕೊಡುತ್ತದೆ.



ಮುಖ್ಯಮಂತ್ರಿ ನಿಷ್ಪಕ್ಷಪಾತ ತನಿಖೆಗೆ ಆದೇಶಿಸುವುದರ ಬದಲು, ತಮ್ಮ ಸಚಿವ ಸಂಪುಟದ ಸದಸ್ಯರು ದೂರುದಾರರಿಗೇ ಕಿರುಕುಳ ನೀಡಲು ಅವಕಾಶ ಮಾಡಿಕೊಟ್ಟಿದ್ದಾರೆ

ರಾಜ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ ಎಂಬುದು ಸ್ಪಷ್ಟ. ಬೆಂಗಳೂರು ನಗರದ ರಸ್ತೆಗಳ ದುರಸ್ತಿಗಾಗಿ ₹ 25,000 ಕೋಟಿ ವೆಚ್ಚ ಮಾಡಲಾಗಿದ್ದು ಅದರಲ್ಲಿ ಅವ್ಯವಹಾರ ನಡೆದಿದೆಯೇ ಎಂಬುದರ ಕುರಿತು ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬೊಮ್ಮಾಯಿ ಅವರು ವಿಧಾನಸಭೆಯಲ್ಲಿಯೇ ಘೋಷಿಸಿದ್ದರು. ಆದರೆ, ಈ ತನಿಖೆಯ ವರದಿ ಇನ್ನಷ್ಟೇ ಬೆಳಕು ಕಾಣಬೇಕಿದೆ. ಸರ್ಕಾರದ ವಿರುದ್ಧ ಕೇಳಿಬಂದ ಗಂಭೀರವಾದ ಆರೋಪಗಳಲ್ಲಿ ಹಲವನ್ನು ಆಡಳಿತಾರೂಢ ಬಿಜೆಪಿಯ ಸದಸ್ಯರೇ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಮಗ ಬಿ.ವೈ. ವಿಜಯೇಂದ್ರ ಅವರು ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ದೂರಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅವರು, ತಾವು ನಡೆಸಿದ ಕಾಮಗಾರಿಗಳ ಹಣ ಬಿಡುಗಡೆಗಾಗಿ ಶೇ 40ರಷ್ಟು ಲಂಚಕ್ಕೆ ಬೇಡಿಕೆ ಇರಿಸಿದ್ದಾರೆ ಎಂದು ಆರೋಪಿಸಿದ್ದ ಬೆಳಗಾವಿಯ ಗುತ್ತಿಗೆದಾರ ಮತ್ತು ಬಿಜೆಪಿ ಕಾರ್ಯಕರ್ತ ಸಂತೋಷ್ ಪಾಟೀಲ ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಇದರಿಂದಾಗಿ ಈಶ್ವರಪ್ಪ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿ ಬಂದಿತ್ತು. ಆದರೆ, ಬಳಿಕ ನಡೆದ ತನಿಖೆಯು ಅವರನ್ನು ದೋಷಮುಕ್ತಗೊಳಿಸಿದೆ.

ಆರೋಪಗಳನ್ನು ನಿರ್ಲಕ್ಷಿಸುವುದರಿಂದ ಬೊಮ್ಮಾಯಿ ಅವರ ವೈಯಕ್ತಿಕ ವರ್ಚಸ್ಸು ಮತ್ತು ಪಕ್ಷದ ವರ್ಚಸ್ಸು ಉತ್ತಮಗೊಳ್ಳುವುದು ಸಾಧ್ಯವಿಲ್ಲ. ನಿಷ್ಪಕ್ಷಪಾತ ತನಿಖೆ ನಡೆಸಲು ಮುಖ್ಯಮಂತ್ರಿಯವರು ಆದೇಶಿಸುವುದರ ಬದಲಿಗೆ, ತಮ್ಮ ಸಚಿವ ಸಂಪುಟದ ಸದಸ್ಯರು ದೂರುದಾರರಿಗೇ ಕಿರುಕುಳ ನೀಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಭ್ರಷ್ಟಾಚಾರಕ್ಕೆ ತಡೆ ಒಡ್ಡಲು ಬಂದಿರುವ ದೇವದೂತ ಎಂದು ತಮ್ಮನ್ನು ಬಿಂಬಿಸಿಕೊಂಡಿದ್ದ ಮೋದಿ ಅವರು ಕೂಡ ನಿರಾಶೆ ಉಂಟು ಮಾಡಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳಲು ಈಗಲೂ ಕಾಲ ಮಿಂಚಿಲ್ಲ.

ದಿನದ ಟ್ವೀಟ್

ಇಂತಹ ಪೂರ್ವಗ್ರಹವೇಕೆ?



ಎಂದಾದರೂ ನೀವು ಮಳಿಗೆಯೊಂದರ ಆಟಿಕೆ ವಿಭಾಗಕ್ಕೆ ಹೋಗಿದ್ದೀರಾ ಮತ್ತು ಅಲ್ಲಿ ಅಡುಗೆಮನೆಯ ಆಟಿಕೆ ಸೆಟ್‌ಗಳು, ಗೊಂಬೆಗಳನ್ನು ಹುಡುಗಿಯರಿಗೆ; ಕಾರುಗಳು, ರಾಕೆಟ್‌ಗಳನ್ನು ಹುಡುಗರಿಗೆ ಎಂಬಂತೆ ಜೋಡಿಸಿಟ್ಟಿರುವುದನ್ನು ಗಮನಿಸಿದ್ದೀರಾ? ಈ ಹಳೆಯ ಲಿಂಗ ತಾರತಮ್ಯದ ರೂಢಿಗತ ಮಾದರಿಗೆ ಯಾವುದೇ ಅರ್ಥವಿಲ್ಲ! ಹೆಣ್ಣೋ ಗಂಡೋ ಎಂಬುದನ್ನು ಲೆಕ್ಕಿಸದೆ ಮಕ್ಕಳು ತಮಗೆ ಆಸಕ್ತಿ ಇರುವ ಯಾವುದೇ ಆಟಿಕೆಗಳನ್ನು ಹುಡುಕಿಕೊಳ್ಳಲು ಅವಕಾಶ ಮುಕ್ತವಾಗಿರಬೇಕು.

ವಿವೇಕ್ ಠಾಕೂರ್, ಉದ್ಯಮಿ

ಕಿಡಿನುಡಿ



ಅಟಲ್ ಬಿಹಾರಿ ವಾಜಪೇಯಿ ಅವರ ಸಮಾಧಿಗೆ ಮಗ ಭೇಟಿ ನೀಡುತ್ತಾರೆ. ಆದರೆ, 24 ಅಕ್ಬರ್ ರಸ್ತೆಯಲ್ಲಿರುವ ಎಐಸಿಸಿ ಪ್ರಧಾನ ಕಚೇರಿಗೆ ಪಿ.ವಿ.ನರಸಿಂಹ ರಾವ್ ಅವರ ಪಾರ್ಥಿವ ಶರೀರವನ್ನು ತರಲು ತಾಯಿ ಅನುಮತಿ ನೀಡುವುದಿಲ್ಲ. 'ತಾಯಿ– ಮಗ'ನ ನಡುವೆ ಈ ಇಬ್ಬಗೆಯ ನಿಲುವೇಕೆ? ಅಟಲ್‌ಜಿ ಮತ್ತು ಪಿ.ವಿ.ಎನ್. ರಾವ್ ಇಬ್ಬರೂ ಪ್ರಧಾನಿಯಾಗಿದ್ದವರು. ಹಾಗೆಯೇ ಹೈದರಾಬಾದ್‌ನಲ್ಲಿರುವ ಪಿವಿಎನ್ ಸಮಾಧಿಗೆ ಮಗ ಭೇಟಿ ನೀಡಲಿಲ್ಲವೇಕೆ?

ಆರ್.ರಾಜಗೋಪಾಲನ್, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 28-12-1997

- **ಗುಜರಾತ್ ಕಾಂಗ್ರೆಸ್ ಇಬ್ಭಾಗ: ಹೊಸ ಪಕ್ಷ ರಚನೆ**

ಅಹಮದಾಬಾದ್, ಡಿಸೆಂಬರ್ 27 (ಪಿಟಿಐ): ಗುಜರಾತ್ ಪ್ರದೇಶ ಕಾಂಗ್ರೆಸ್‌ನ ಹಲವು ಹಿರಿಯ ನಾಯಕರು ಇಂದು ರಾತ್ರಿ ಪಕ್ಷ ತ್ಯಜಿಸಿ 'ಗುಜರಾತ್ ಸರ್ದಾರ್ ಕಾಂಗ್ರೆಸ್ ಪಕ್ಷ'ವನ್ನು ರಚಿಸಿಕೊಂಡಿದ್ದಾರೆ.

ರಾಜ್ಯ ವಿಧಾನಸಭೆಯ ಮಾಜಿ ಸ್ಪೀಕರ್ ಹಿಮತ್‌ಲಾಲ್ ಮಲಾನಿ ಅವರು ಇಂದು ಮಧ್ಯರಾತ್ರಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿ, ಸುಮಾರು 40 ಪ್ರಮುಖ ನಾಯಕರು ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್ ಪಕ್ಷ ತ್ಯಜಿಸಿರುವುದಾಗಿ ಹೇಳಿದರು.

ಕಾಂಗ್ರೆಸ್ ತ್ಯಜಿಸಿದವರಲ್ಲಿ ಪ್ರಮುಖರೆಂದರೆ; ಭೀಂಭಾಯಿ ಪಟೇಲ್, ಲೀಲಾಧರ್ ವಾಘೇಲಾ, ದೇವ್ಜಿ ಪರ್ಮಾರ್, ಉಮಾಕಾಂತ್ ಜೋಷಿ, ಪ್ರಭಾತ್ ಸಿನ್ಹ ಚೌವಾಣ್ ಹಾಗೂ ದಲ್‌ಸಂಗ್ ಭಾಯಿ ಚೌಧರಿ.

- **'ಸುಪ್ರೀಂ ಕೋರ್ಟ್‌ನಲ್ಲಿ ಖಟ್ಲೆಗಳ ಸಂಖ್ಯೆ ಕುಸಿತ'**

ಬೆಂಗಳೂರು, ಡಿಸೆಂಬರ್ 27– ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಈಗ 20 ಸಾವಿರಕ್ಕೂ ಕಡಿಮೆ ಇದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಜೆ.ಎಸ್. ವರ್ಮಾ ಅವರು ಇಂದು ಇಲ್ಲಿ ಹೇಳಿದರು.

ಬೆಂಗಳೂರು ವಕೀಲರ ಸಂಘದ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಅವರು, 1989ರಲ್ಲಿ ಒಟ್ಟು 1.35 ಲಕ್ಷ ಮೊಕದ್ದಮೆಗಳಿದ್ದವು. ಗಣನೀಯವಾಗಿ ಈ ಸಂಖ್ಯೆಯಲ್ಲಿ ಇಳಿಮುಖವಾಗಿ ಈಗ 20 ಸಾವಿರಕ್ಕಿಂತ ಕಡಿಮೆ ಮೊಕದ್ದಮೆಗಳು ಬಾಕಿ ಉಳಿದಿವೆ ಎಂದರು.

50 ವರ್ಷಗಳ ಹಿಂದೆ

ಗುರುವಾರ, 28-12-1972

- **ಅಡಿಪಾಯದಿಂದ ಮತ್ತೆ ಪಕ್ಷ ಕಟ್ಟಲು ಇಂದಿರಾ ಸಿದ್ಧ**

ಬಿಧಾನ್‌ನಗರ, ಡಿಸೆಂಬರ್ 27– ಕಾಂಗ್ರೆಸ್ ಪಕ್ಷವನ್ನು ಸಣ್ಣ ಪ್ರಮಾಣದಿಂದ ಮತ್ತೆ ಮೊದಲಿನಿಂದ ಪ್ರಾರಂಭಿಸುವಂತಾದರೆ ಅದಕ್ಕೆ ತಾವು ಹಿಂದೆಗೆಯುವುದಿಲ್ಲವೆಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಲ್ಲಿ ಹೇಳಿದರು.

ಅದರಿಂದ ಪಕ್ಷದ ತತ್ವಕ್ಕೆ ಮತ್ತು ಕಾರ್ಯಕ್ರಮಗಳಿಗೆ ಕಟ್ಟುಬಿದ್ದ ಸದಸ್ಯರಿಂದ ಪಕ್ಷವನ್ನು ಮತ್ತೆ ಕಟ್ಟಲೂ ಗುಂಪುಗಾರಿಕೆಗೆ ಕಾರಣವಾದ ಅಂಶಗಳನ್ನು ತೊಡೆದುಹಾಕಲೂ ಸಾಧ್ಯವಾಗಬಹುದೆಂದು ಅವರು ಅಭಿಪ್ರಾಯಪಟ್ಟರು.

- **ಅನಂತಪುರದಲ್ಲಿ ಕಲ್ಲೆಸೆತ: ಗೋಲಿಬಾರ್‌ನಲ್ಲಿ 5 ಸಾವು**

ಹೈದರಾಬಾದ್, ಡಿಸೆಂಬರ್ 27– ಇಂದು ಅನಂತಪುರದಲ್ಲಿ ಕಲ್ಲೆಸೆತದಲ್ಲಿ ತೊಡಗಿದ್ದ ಪ್ರತ್ಯೇಕ ಆಂಧ್ರ ಚಳವಳಿಗಾರರ ಮೇಲೆ ಪೊಲೀಸರು ಗುಂಡು ಹಾರಿಸಿದಾಗ ಐದು ಜನ ಸತ್ತು, ಮೂವರಿಗೆ ಗಾಯವಾಯಿತೆಂದು ಇಲ್ಲಿಗೆ ಬಂದಿರುವ ಅಧಿಕೃತ ವರದಿಗಳು ತಿಳಿಸಿವೆ.

ತಲೆಯ ಮೇಲೆ ಕಲ್ಲೇಟು ಬಿದ್ದು ಒಬ್ಬ ಕಾನ್‌ಸ್ಟೆಬಲ್ ಸತ್ತರೆಂದೂ ಹೇಳಲಾಗಿದೆ.

ಕುಲಪತಿ ಆಯ್ಕೆ: ಕಾಂಚಾಣದ ಗಮ್ಮತ್ತು, ಮೆರಿಟ್‌ಗಿಲ್ಲ ಕಿಮ್ಮತ್ತು

ತೆರೆದ ಗುಟ್ಟು, ದಾಖಲೆಯಿರದ 'ಡೀಲ್'



ವಿಶ್ಲೇಷಣೆ

ಡಾ. ಬಿ.ಸಿ.ಪ್ರಭಾಕರ್

ವಿಶ್ವವಿದ್ಯಾಲಯಗಳ ಕುಲಪತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ವಿಷಯ ಮತ್ತೊಮ್ಮೆ ಚರ್ಚೆಯ ಮುನ್ನೆಲೆಗೆ ಬಂದಿದೆ. ಆಶ್ಚರ್ಯವೆಂದರೆ, ಆಡಳಿತಾರೂಢ ಪಕ್ಷದವರೇ ಆದ ಸಂಸದ ಪ್ರತಾಪ ಸಿಂಹ ಅವರು ಇದನ್ನು ಪ್ರಸ್ತಾಪಿಸಿದ್ದಾರೆ. ಉನ್ನತ ಶಿಕ್ಷಣ ಸಚಿವರು 'ಅದಕ್ಕೆ ದಾಖಲೆಯಿದ್ದರೆ ಬಹಿರಂಗಪಡಿಸಲಿ' ಎಂಬ ಮಾಮೂಲು ಹೇಳಿಕೆಯನ್ನು ನೀಡಿ ಕೈತೊಳೆದುಕೊಂಡಿದ್ದಾರೆ. ಈ ರೀತಿ ದಾಖಲೆ ಕೇಳುವ ಪರಿಯೇ ಹಾಸ್ಯಾಸ್ಪದ. ಕುಲಪತಿಯ ಆಕಾಂಕ್ಷಿಯೊಬ್ಬರು ಸಂಬಂಧಪಟ್ಟವರಿಗೆ ಗುಟ್ಟಾಗಿ ರಖಂ ಸಂದಾಯ ಮಾಡಿದ್ದರೆ ಅದಕ್ಕೆ ದಾಖಲೆ ಏನಿರುತ್ತದೆ?!

ತಮ್ಮ ಸಂಕಟ ತೋಡಿಕೊಳ್ಳಲೋ ಅಥವಾ ಹೆಮ್ಮೆಯಿಂದಲೋ ಇಂತಿಷ್ಟು ಕೊಟ್ಟಿದ್ದಾಗಿ ಆಕಾಂಕ್ಷಿಯೊಬ್ಬರು ತಮ್ಮ ಆಪ್ತರಲ್ಲಿ ಹೇಳಿಕೊಳ್ಳುವುದು, ತದನಂತರದಲ್ಲಿ ಅದು ಎಲ್ಲರಿಗೂ ಗೊತ್ತಾಗುವುದು ಅಚ್ಚರಿಯ ಸಂಗತಿಯೇನಲ್ಲ. ಇನ್ನು ಹಣ ಪಡೆದವರಂತೂ ಸಂಪನ್ನರಂತೆ ವರ್ತಿಸುತ್ತಾರೆ. ಹೀಗಿರುವಾಗ ದಾಖಲೆ ಎಲ್ಲಿಂದ ಬರಬೇಕು? ಆದರೂ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕುಲಪತಿ ಆಯ್ಕೆಯಲ್ಲಿ ನಡೆಯುವ ಅವ್ಯವಹಾರಗಳನ್ನು ಕೆದಕುತ್ತಾ ಹೋದರೆ, ಅದರ ದಾಖಲೆಗಳು ಬೇರೊಂದು ರೂಪ ಪಡೆದು, ಆಕಾಂಕ್ಷಿಗಳ ಅರ್ಜಿಗಳ ಮೂಲಕ ಉನ್ನತ ಶಿಕ್ಷಣ ಇಲಾಖೆಯ ಕಡತಗಳಲ್ಲಿ ತಣ್ಣಗೆ ಮಲಗಿರುವುದು ಗೋಚರಿಸುತ್ತದೆ. ನಿಯಮಾನುಸಾರ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಯುಜಿಸಿ ನಿಯಮಾವಳಿಯಂತೆ ಅಭ್ಯರ್ಥಿಗಳ ಅರ್ಹತೆ, ಅಂದರೆ ಸಂಶೋಧನಾ ಲೇಖನಗಳು, ಸೇವಾ ಅವಧಿ, ಆಡಳಿತದ ಅನುಭವ, ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆಯಂತಹ ಮಾನದಂಡಗಳ ಮೂಲಕ ಜೇಷ್ಠತಾ ಪಟ್ಟಿ ಸಿದ್ಧಪಡಿಸಿ, ಅದನ್ನು ಶೋಧನಾ ಸಮಿತಿ ಪರಾಮರ್ಶಿಸಿ, ಮೂವರು ಅಭ್ಯರ್ಥಿಗಳ ಕಿರುಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.

ಆದರೆ ಹಾಲಿ ವ್ಯವಸ್ಥೆ ಹೇಗಿದೆಯೆಂದರೆ, ಮೆರಿಟ್‌ಗೆ ಯಾವ ಕಿಮ್ಮತ್ತನ್ನೂ ಕೊಡದೆ ತಮಗೆ 'ಸೂಕ್ತ'ವೆನಿಸಿದ ಅಭ್ಯರ್ಥಿಯನ್ನು 'ಶೋಧನಾ ಸಮಿತಿ'ಯ ಮೂಲಕ ಆಯ್ಕೆ ಮಾಡಿಸಿ ಕುಲಪತಿಯನ್ನಾಗಿಸುವುದು ಎಗ್ಗಿಲ್ಲದೆ ನಡೆಯುತ್ತಿದೆ. ಶೋಧನಾ ಸಮಿತಿಯ ಅಧ್ಯಕ್ಷ ಅಥವಾ ಸದಸ್ಯರಲ್ಲಿ ಅನೇಕರು ತಮ್ಮನ್ನು ಆ ಸ್ಥಾನಗಳಿಗೆ ನೇಮಿಸಿದ ಋಣಕ್ಕೆ, ಸರ್ಕಾರ ಹೇಳಿದ ಹೆಸರನ್ನು ಕಿರುಪಟ್ಟಿಗೆ ಸೇರಿಸಿ ಕೈತೊಳೆದುಕೊಳ್ಳುತ್ತಾರೆ. ಮೆರಿಟ್ ಇದ್ದರೂ ತಮ್ಮನ್ನು ಆಯ್ಕೆ ಮಾಡದ್ದನ್ನು ಹೆಚ್ಚಿನ ಆಕಾಂಕ್ಷಿಗಳು ಪ್ರಶ್ನಿಸುವುದೇ ಇಲ್ಲ. ಏಕೆಂದರೆ ಸರ್ಕಾರದ ವಿರುದ್ಧ ಹೋಗದೆ ಸುಮ್ಮನಿದ್ದರೆ, ಮತ್ತೊಂದು ಪ್ರಯತ್ನದಲ್ಲಾದರೂ ಯಶಸ್ವಿಯಾಗಬಹುದೆಂಬ ಆಸೆ!

ಕುಲಪತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದು ನಿನ್ನೆ ಮೊನ್ನೆಯ ಮಾತಲ್ಲ. ಪತ್ರಿಕೆಗಳಲ್ಲಿ ವಿಸ್ತೃತ ಲೇಖನಗಳು ಪ್ರಕಟವಾಗಿವೆ. ಅನೇಕ ಬಾರಿ ಸದನದಲ್ಲೂ ಚರ್ಚೆಗಳಾಗಿವೆ. ಆದರೆ ಇದ್ಯಾವುದಕ್ಕೂ ಪಕ್ಷಾತೀತವಾಗಿ ಸ್ವಲ್ಪವೂ ವಿಚಲಿತವಾಗದ ಅಧಿಕಾರಸ್ಥರು ತಮ್ಮ ಮಾಮೂಲಿ 'ವ್ಯವಹಾರ'ವನ್ನು ಎಗ್ಗಿಲ್ಲದಂತೆ ಮುಂದುವರಿಸಿಕೊಂಡು ಬಂದಿದ್ದಾರೆ.

10–15 ವರ್ಷಗಳಿಂದ ಈಚೆಗಿನ ಕುಲಪತಿಗಳ ಆಯ್ಕೆ ಪ್ರಕ್ರಿಯೆಯನ್ನು ಅವಲೋಕಿಸಿದರೆ, ಅಪವಾದಕ್ಕೆನ್ನುವಂತೆ ಅಲ್ಲೊಬ್ಬರು ಇಲ್ಲೊಬ್ಬರು ತಮ್ಮ ಅರ್ಹತೆಯಿಂದ ಮಾತ್ರವೇ ಕುಲಪತಿಯಾಗಿರಬಹುದಾದದ್ದು ಕಂಡುಬರುತ್ತದೆ. ಅದನ್ನು ಬಿಟ್ಟರೆ, ಬಹುತೇಕರ ಆಯ್ಕೆಯ ಹಿಂದೆ ಕಾಂಚಾಣ ಕೆಲಸ ಮಾಡಿರುವುದು ಅಕಡೆಮಿಕ್ ವಲಯದಲ್ಲಿ ಗುಟ್ಟಾಗೇನೂ ಉಳಿದಿಲ್ಲ.

ಶೋಧನಾ ಸಮಿತಿಯ ಅಧ್ಯಕ್ಷರನ್ನಾಗಿ ನಿವೃತ್ತ ಕುಲಪತಿಯೊಬ್ಬರನ್ನು ನೇಮಿಸಬೇಕೆಂಬ ಪರಿಪಾಟ ಇದ್ದರೂ ಸರ್ಕಾರವು ಕೆಲವೊಮ್ಮೆ ಸೇವೆಯಲ್ಲಿರುವ ಕುಲಪತಿಯನ್ನೇ ಆ ಸ್ಥಾನಕ್ಕೆ ನೇಮಿಸುತ್ತದೆ. ಏಕೆಂದರೆ ಅವರು ಒಂದಲ್ಲ ಒಂದು ಕಾರಣಕ್ಕೆ ಸರ್ಕಾರದ ಮರ್ಜಿಯಲ್ಲಿ ಇರುವುದರಿಂದ, ಹೇಳಿದಂತೆ ಕೇಳುತ್ತಾರೆ ಎಂಬ ಮರ್ಮ ಇದರ ಹಿಂದಿದೆ. ಇನ್ನು ತಮಗೆ ಬೇಕಾದ ಸದಸ್ಯರನ್ನು ಶೋಧನಾ ಸಮಿತಿಯಲ್ಲಿ ಹಾಕಿಸಿಕೊಳ್ಳುವಷ್ಟರ ಮಟ್ಟಿಗೂ ಕೆಲವು ಆಕಾಂಕ್ಷಿಗಳು ಬಲಾಢ್ಯರಿದ್ದಾರೆ. ಇದೆಲ್ಲದರ ಒಟ್ಟಾರೆ ಅರ್ಥ, ಇಂದು ಕುಲಪತಿಯಾಗುವುದು ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಬಲಾಢ್ಯರಾದ ಪ್ರಾಧ್ಯಾಪಕರಿಗೆ ಮಾತ್ರ ಸಾಧ್ಯವಿದೆ.

20 ವರ್ಷಗಳ ಹಿಂದೆ ಕುಲಪತಿ ಆಯ್ಕೆಯ ಎಲ್ಲ ಪ್ರಕ್ರಿಯೆಗಳು ಬಹುತೇಕ ಪಾರದರ್ಶಕವಾಗಿ ಇರುತ್ತಿದ್ದವು. ಅರ್ಜಿ ಹಾಕುವ ಪ್ರಮೇಯ ಇರಲಿಲ್ಲ. ಶೈಕ್ಷಣಿಕ ಕ್ಷೇತ್ರಕ್ಕೆ ಕೊಡುಗೆ ನೀಡಿದ ವ್ಯಕ್ತಿಗಳನ್ನು ಶೋಧನಾ ಸಮಿತಿ ಶಿಫಾರಸು ಮಾಡುತ್ತಿತ್ತು. ಅದೊಂದು ಅತ್ಯಂತ ಉನ್ನತ ಹಾಗೂ ಗೌರವಾನ್ವಿತ ಹುದ್ದೆ ಎನಿಸಿಕೊಂಡಿತ್ತು. ಅದರಲ್ಲಿ ರಾಜಕೀಯ, ಹಣ, ಜಾತಿ, ಶಿಫಾರಸು ಹೆಚ್ಚಾಗಿ ಮೂಗು ತೂರಿಸುತ್ತಿರಲಿಲ್ಲ. ಆದರೆ ಬರಬರುತ್ತಾ ಅದರ ಸಮೀಕರಣ ಬದಲಾಗಿ, 'ಓಹ್, ಇಲ್ಲಿಯೂ ದುಡ್ಡು ಮಾಡಬಹುದು' ಎಂಬ 'ಜ್ಞಾನೋದಯ' ರಾಜಕೀಯ ಧುರೀಣರಿಗೆ ಉಂಟಾಗಿ, ಈ ಹಂತಕ್ಕೆ ತಂದು ನಿಲ್ಲಿಸಿದ್ದಾರೆ.

ಒಬ್ಬ ಕುಲಪತಿಯ ಸೇವೆ ಒಂದು ಅವಧಿಗೆ ಮಾತ್ರ ಎಂಬ ಕಾನೂನು ಇದ್ದರೂ ಎರಡನೆಯ ಬಾರಿಗೆ ಮತ್ತೊಂದು ವಿಶ್ವವಿದ್ಯಾಲಯಕ್ಕೆ ನೇಮಕ ಮಾಡುವ ಮೂಲಕ ತಮ್ಮ ವ್ಯವಹಾರ ಕುದುರಿಸಿಕೊಳ್ಳುವ ಹೊಸ ಮಾರ್ಗವನ್ನು ಅನ್ವೇಷಿಸಿದ್ದಾರೆ. ಈ ಎಲ್ಲ ಅನ್ಯಮಾರ್ಗಗಳ ಕುಟಿಲತೆಯನ್ನು ಅನಾವರಣಗೊಳಿಸಬೇಕಾದರೆ, ಕರ್ನಾಟಕದಲ್ಲಿನ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿ ಆಕಾಂಕ್ಷಿಗಳ ಅರ್ಜಿಗಳನ್ನು ಮೆರಿಟ್ ಆಧಾರದಲ್ಲಿ ಪುನರ್ ಪರಿಶೀಲಿಸಿ ವೆಬ್‌ಸೈಟ್‌ನಲ್ಲಿ ಹಾಕಬೇಕು. ಆದರೆ ಅದನ್ನು ಸರ್ಕಾರ ಮಾಡೀತೆ?



ಕುಲಪತಿ ಆಯ್ಕೆ ಪ್ರಕ್ರಿಯೆಯ ಅವ್ಯವಹಾರದ ಕಮಟು ವಾಸನೆಯಿಂದ ರಾಜ್ಯಪಾಲರ ಕಚೇರಿಯೇನೂ ಮುಕ್ತವಾಗಿಲ್ಲ. ಏಕೆಂದರೆ ಸರ್ಕಾರ ಶಿಫಾರಸು ಮಾಡಿದ ಹೆಸರಿಗೆ ಅಂತಿಮ ಅಂಕಿತ ಹಾಕುವವರು ಅವರೇ ತಾನೆ! ಹಿಂದೆ ಈ ರಾಜ್ಯದ ರಾಜ್ಯಪಾಲರಾಗಿದ್ದವರೊಬ್ಬರು ಉನ್ನತ ಶಿಕ್ಷಣದ ಬಗ್ಗೆ ಭಾಷಣಗಳಲ್ಲಿ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿದ್ದರು. ಆಕ್ಸ್‌ಫರ್ಡ್, ಕೇಂಬ್ರಿಜ್‌ನಂತಹ ವಿಶ್ವವಿದ್ಯಾಲಯಗಳ ಶ್ರೇಷ್ಠತೆಯನ್ನು ಇಂದಿನ ನಮ್ಮ ವಿಶ್ವವಿದ್ಯಾಲಯಗಳಿಗೆ ಹೋಲಿಸಿ 'ನಮ್ಮ ಗುಣಮಟ್ಟ ಹೀಗೇಕಾಯಿತು' ಎಂದು 'ಮರುಗುತ್ತಿದ್ದರು'. ಆದರೆ ವಿಶ್ವವಿದ್ಯಾಲಯಗಳ ಗುಣಮಟ್ಟ ವೃದ್ಧಿಸುವ ಮೇಟಿಯಂತೆ ಇರಬೇಕಾದ ಕುಲಪತಿಯ ಆಯ್ಕೆ ವಿಚಾರ ಬಂದಾಗ ಅವರು ತಮ್ಮ ಪರಮಾಪ್ತರೊಬ್ಬರನ್ನು ಏಜೆಂಟರಂತೆ ನೇಮಿಸಿಕೊಂಡು, ಅವರ ಮೂಲಕ ಕುಲಪತಿಗಳ ಆಯ್ಕೆ 'ಡೀಲ್' ನಡೆಸುತ್ತಿದ್ದುದು ತೆರೆದ ಗುಟ್ಟಾಗಿತ್ತು. ತಮಗೆ 'ಸೂಕ್ತ'ವಾದ ಅಭ್ಯರ್ಥಿಯನ್ನು ಶೋಧನಾ ಸಮಿತಿಯೇನಾದರೂ ಕೈಬಿಟ್ಟಿದ್ದರೆ ಆ ಪಟ್ಟಿಯನ್ನು ತಿರಸ್ಕರಿಸಿ ತಮಗೆ ಸೂಕ್ತವೆನಿಸಿದ ಅಭ್ಯರ್ಥಿಯನ್ನು ಸೇರಿಸಿ ಮತ್ತೊಂದು ಪಟ್ಟಿ ತಯಾರಿಸುವಂತೆ ಒತ್ತಡ ಹೇರುತ್ತಿದ್ದ 'ಖ್ಯಾತಿ'ಯೂ ಈ ರಾಜ್ಯಪಾಲರಿಗಿತ್ತು.

ಕುಲಪತಿ ಆಯ್ಕೆಯಲ್ಲಿನ ಅವ್ಯವಹಾರಗಳ ಮಜಲಿಗೆ ಮತ್ತೊಂದು ಸೇರ್ಪಡೆ ಎಂದರೆ, ಖಾಸಗಿ ಕಾಲೇಜುಗಳ ಪ್ರಾಧ್ಯಾಪಕರ ಪರಿಗಣಿಸುವಿಕೆ. ಅವರಿಗೆ ಕುಲಪತಿಯಾಗಲು ಅರ್ಹತೆ ಇಲ್ಲವೆಂದಲ್ಲ. ಆದರೆ ಕೆಲವು ಖಾಸಗಿ ಕಾಲೇಜುಗಳ ಆಡಳಿತ ವರ್ಗ, ಯುಜಿಸಿ ನಿಗದಿಪಡಿಸಿರುವ ಮೆರಿಟ್ ಆಗಲಿ, ಸೇವಾವಧಿಯಾಗಲಿ ಇಲ್ಲದಿದ್ದರೂ ಯಾವ ಶಿಕ್ಷಕನಿಗೆ ಬೇಕಾದರೂ ತನ್ನ ಮರ್ಜಿಗೆ ಅನುಸಾರವಾಗಿ 'ಪ್ರಾಧ್ಯಾಪಕ'ರ ಪದನಾಮ ದಯಪಾಲಿಸಬಲ್ಲದು. ಆದರೆ ಅದೇ ಸರ್ಕಾರಿ ಕಾಲೇಜು ಅಥವಾ ವಿಶ್ವವಿದ್ಯಾಲಯದಲ್ಲಿ ಅದು ಸಾಧ್ಯವಿಲ್ಲ. ಈ ಪ್ರಾಧ್ಯಾಪಕ ಪದನಾಮವನ್ನೇ ಆಧಾರವಾಗಿಟ್ಟು ಸರ್ಕಾರಗಳು ಕುಲಪತಿಗಳನ್ನು ಆಯ್ಕೆ ಮಾಡಿರುವುದೂ ಇದೆ.

ಈ ವಿಷಮ ಸನ್ನಿವೇಶದಲ್ಲಿ, ಕುಲಪತಿಯ ಆಯ್ಕೆ ಪಾರದರ್ಶಕವಾಗಿ ನಡೆಯಬೇಕಾದರೆ, ಯುಜಿಸಿ ನಿಗದಿಪಡಿಸಿರುವ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸು ವುದು, ಆಕಾಂಕ್ಷಿಗಳ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅರ್ಹತಾ ಪಟ್ಟಿಯನ್ನು ಮೆರಿಟ್ ಆಧಾರದಲ್ಲಿ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು, ಅದನ್ನೇ ಆಧರಿಸಿ ಮೂವರನ್ನೊಳಗೊಂಡ ಕಿರುಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ವ್ಯಕ್ತಿತ್ವ ಸಂದರ್ಶನದ ಮೂಲಕ ಅವರಲ್ಲಿ ಒಬ್ಬರನ್ನು ಆರಿಸುವ ಕ್ರಮ ಜಾರಿಗೆ ಬರಬೇಕು. ಇವೆಲ್ಲಕ್ಕೂ ಮಿಗಿಲಾಗಿ, ಸಮಾಜ ಮತ್ತು ದೇಶದ ಏಳಿಗೆಯು ನಾವು ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷಣವನ್ನು ಅವಲಂಬಿಸಿರುವುದರಿಂದ, ಅಂತಹ ವಿದ್ಯಾಕ್ಷೇತ್ರಕ್ಕೆ ಅರ್ಹರನ್ನು ಆರಿಸುವ ಪ್ರಜ್ಞಾ ಸಂಸ್ಕೃತಿಯನ್ನು ನೇತಾರರು ಎನಿಸಿಕೊಂಡವರು ಬೆಳೆಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ಲೇಖಕ: ನಿವೃತ್ತ ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ

ಚುರುಮುರಿ



ನುಡಿ ಕೈಗಾರಿಕೆ

• ಮಣ್ಣೆ ರಾಜು

'ಸಾಹಿತ್ಯ ಸಮ್ಮೇಳನಕ್ಕೆ ಬಂದಾಗ ನಮ್ಮ ಮನೆಯಲ್ಲೇ ವಾಸ್ತವ್ಯ ಮಾಡು ಅಂತ ಹಾವೇರಿ ಗೆಳೆಯ ಫೋನ್ ಮಾಡಿದ್ದ...' ಅಂದ ಶಂಕ್ರಿ.

'ಒಳ್ಳೆಯದಾಯ್ತು, ಸಾಹಿತ್ಯ ಪರಿಷತ್ ಅಧ್ಯಕ್ಷರೂ ಹಾವೇರಿಯಲ್ಲಿ ಜನಸಾಮಾನ್ಯರ ಮನೆಯಲ್ಲಿ ವಾಸ್ತವ್ಯ ಮಾಡ್ತಾರಂತೆ' ಅಂದಳು ಸುಮಿ.

'ಅಧ್ಯಕ್ಷರ ಪ್ರೇರಣೆಯಿಂದ ಪರಿಷತ್ತಿನ ಪದಾಧಿಕಾರಿಗಳೂ ವಾಸ್ತವ್ಯ ಆರಂಭಿಸಿ ಮನೆಮನೆಗಳಲ್ಲಿ ಕನ್ನಡ ಜಾಗೃತಿ ಪಾಠ ಹೇಳುವಂತಾಗಬೇಕು'.

'ಹೌದು, ಇಂಗ್ಲಿಷ್ ಮೀಡಿಯಂ ಭ್ರಮೆಗೆ ಒಳಗಾಗಿ ಕನ್ನಡ ಕಡೆಗಣಿಸಿರುವವರಿಗೆ ಮೊದಲು ತಕ್ಕ ಪಾಠ ಕಲಿಸಬೇಕು'.

ಅಷ್ಟರಲ್ಲಿ ಗೆಳತಿ ಪದ್ಮಾ ಬಂದು, 'ನುಡಿ ಕೈಗಾರಿಕೆ ಶುರುಮಾಡಿದ್ದೇನೆ...' ಎಂದು ಸ್ವೀಟ್ ಕೊಟ್ಟಳು.

'ಗುಡಿ ಕೈಗಾರಿಕೆ ಗೊತ್ತು, ಇದೇನು ನುಡಿ ಕೈಗಾರಿಕೆ?' ಸುಮಿ ಕೇಳಿದಳು.

'ಕನ್ನಡೇತರರಿಗೆ ವ್ಯವಹಾರಗನ್ನಡ ಕಲಿಸುವ ಕಾಯಕ. ಕನ್ನಡ ಗೊತ್ತಿಲ್ಲದೆ ಅವರಿಗೆ ದೈನಂದಿನ ವ್ಯವಹಾರಕ್ಕೆ ಸಮಸ್ಯೆಯಾಗಿತ್ತಂತೆ. ದಿನಬಳಕೆ ಪದಾರ್ಥಗಳ ಕನ್ನಡದ ಹೆಸರು ಹೇಳಿಕೊಟ್ಟಿದ್ದೇನೆ, ಮಳಿಗೆ, ಮಾರ್ಕೆಟ್‌ನಲ್ಲಿ ಕನ್ನಡದಲ್ಲಿ ಚೌಕಾಸಿ ಮಾಡುವ ಕಲೆಗಾರಿಕೆ, ಕೂಡಿ, ಕಳೆಯುವ ಕನ್ನಡದ ಲೆಕ್ಕವನ್ನೂ ಕಲಿಸಿದ್ದೇನೆ'.

'ನೆರೆಹೊರೆಯವರೊಂದಿಗೆ ಸಹಬಾಳ್ವೆ ಕನ್ನಡ, ಜಗಳದ ಸಂದರ್ಭಕ್ಕೆ ಕನ್ನಡ ಬೈಗುಳ ಕಲಿಸಿದ್ದೀರಾ' ಶಂಕ್ರಿ ಕೇಳಿದ.

'ಹೌದು, ಕನ್ನಡ ಬರೆಯುವ, ಕನ್ನಡಿಗರೊಂದಿಗೆ ಬೆರೆಯುವುದನ್ನು ಕಲಿಸಿ ಅವರ ವ್ಯವಹಾರ, ಸಂಸಾರವನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ'.

'ವೆರಿಗುಡ್...'

'ಕನ್ನಡಿಗರಿಗೆ ಉದ್ಯೋಗ ಕೊಟ್ಟರೆ ಸಾಲದು, ಕನ್ನಡ ಬಳಸಿ, ಗಳಿಸುವ ನುಡಿ ಕೈಗಾರಿಕೆಗಳನ್ನು ಸರ್ಕಾರ ರೂಪಿಸಬೇಕು...' ಎನ್ನುತ್ತಾ ಪದ್ಮಾ ಹೊರಟಳು.

ಸಂಗತ

ದನ: ಏನೀ ಮೂಕರೋದನ?

ಕೊರೊನಾ ಮನುಕುಲವನ್ನು ಕಾಡಿದಂತೆ ಎಲ್‌ಎಸ್‌ಡಿ ವೈರಾಣುಗಳು ಜಾನುವಾರುಗಳ ಆರೋಗ್ಯಕ್ಕೆ ಕಂಟಕಕಾರಿಯಾಗುತ್ತಿರುವುದು ಸದ್ಯದ ವಾಸ್ತವ

• ಡಾ. ಮುರಳೀಧರ ಕಿರಣಕೆರೆ

'ನಮ್ ದನಕ್ಕೆ ಮೈತುಂಬಾ ಸಿಡುಬು ಥರದ ಗುಳ್ಳೆ ಎದ್ದಿದೆ. ನೋಡಕ್ಕೆ ತುಂಬಾ ಹಿಂಸೆ ಆಗುತ್ತೆ. ನಮ್ಗೂ ಅಂಟುತ್ತಾ? ಅದ್ರ ಹಾಲು ಕುಡೀಬಹುದಾ?' ರೈತರೊಬ್ಬರ ಆತಂಕದ ಪ್ರಶ್ನೆ. ಇಂತಹ ಅನುಮಾನ ಅವರದ್ದಷ್ಟೇ ಅಲ್ಲ, ಚರ್ಮಗಂಟು ರೋಗ (ಎಲ್‌ಎಸ್‌ಡಿ) ಎಂಬ ಮಹಾರೋಗ ಎಲ್ಲೆಡೆ ವ್ಯಾಪಿಸಿ ಜಾನುವಾರುಗಳ ಜೀವ ಹಿಂಡುತ್ತಿರುವ ಈ ಹೊತ್ತಿನಲ್ಲಿ ಬಹುತೇಕ ಹೈನುಗಾರರದ್ದೂ ಆಗಿದೆ.

'ಈ ಕಾಯಿಲೆ ಮನುಷ್ಯರಿಗೆ ದಾಟಲ್ಲ. ಹಾಲಿಗೂ ದೋಷವಿಲ್ಲ. ಧೈರ್ಯವಾಗಿ ಉಪಯೋಗಿಸಿ, ಏನೂ ತೊಂದ್ರೆ ಇಲ್ಲ' ಎಂದು ಎಷ್ಟೇ ವಿಶ್ವಾಸ ತುಂಬಿದರೂ ಕೆಲವರು ಬಾಧಿತ ಜಾನುವಾರುಗಳ ಹಾಲು ಬಳಸಲು ಹಿಂದೇಟು ಹಾಕುತ್ತಿದ್ದಾರೆ.

ಗೋಪಾಲಕರ ಈ ಪರಿಯ ಹೆದರಿಕೆಗೆ ಕಾರಣ ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ಸುದ್ದಿ. ಮಾನವನ ಚರ್ಮದ ಮೇಲೆ ದೊಡ್ಡ ಗುಳ್ಳೆಗಳೆದ್ದು ಕೆಂಪಾಗಿರುವ ಭಯಾನಕ ಚಿತ್ರವೊಂದು ಮೊಬೈಲುಗಳಲ್ಲಿ ಓಡಾಡುತ್ತಿದೆ. ಚರ್ಮಗಂಟು ರೋಗಬಾಧಿತ ಹಸುವಿನ ಹಾಲು ಕುಡಿದಿದ್ದರಿಂದ ಹೀಗಾಗಿದ್ದು ಎಂಬ ಸುದ್ದಿ ಸುಳ್ಳೆಂದು ನಂಬದ ಹಲವರು ಭೀತಿಯಿಂದಾಗಿ ಹಾಲು ಉಪಯೋಗಿಸುತ್ತಿಲ್ಲ.

ಪರಿಚಯದ ಕೃಷಿಕರೊಬ್ಬರು ತಮ್ಮ ಮಿಶ್ರತಳಿ ಹಸು ರೋಗದಿಂದ ಚೇತರಿಸಿಕೊಂಡಿದ್ದರೂ ಗಾಯಗಳು ಇನ್ನೂ ಪೂರ್ಣವಾಗಿ ಮಾಯದ ಕಾರಣ, ದಿನನಿತ್ಯ ಹದಿನೈದು ಲೀಟರ್ ಹಾಲನ್ನು ಹೊರಗೆ ಸುರಿಯುತ್ತಿದ್ದಾರೆ! ಮನೆಯವರಿಗೆ ಎಷ್ಟೇ ತಿಳಿಸಿ ಹೇಳಿದರೂ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿರುವ ಸುದ್ದಿ ಅವರ ತಲೆಯಲ್ಲಿ ಪಟ್ಟಾಗಿ ಕುಳಿತಿದೆ.

ಈ ರೋಗವೆಂದಲ್ಲ, ಸದಾ ಕಾಯಿಸಿ ಬಳಸಿದಾಗ ಹಾಲು ಸುರಕ್ಷಿತ. ಕುದಿಸುವ ಕ್ರಿಯೆ ಹಾಲಿನಲ್ಲಿರುವ ಹಾನಿಕಾರಕ ಬ್ಯಾಕ್ಟೀರಿಯ, ವೈರಸ್, ಶಿಲೀಂಧ್ರಗಳನ್ನು ಸಾಯಿಸುತ್ತದೆ. ಪ್ಯಾಶ್ಚರೀಕರಣ ಎಂಬ ಈ ಪ್ರಕ್ರಿಯೆ ಹಾಲಿನಿಂದ ಅಂಟಬಹುದಾದ ಕ್ಷಯ, ಬ್ರುಸೆಲ್ಲಾ, ಇ-ಕೋಲೈ, ಸಾಲ್ಮೊನೆಲ್ಲಾದಂತಹ ಹಲವು ರೋಗಾಣುಗಳನ್ನಲ್ಲದೆ ಜಂತುಗಳ ಮೊಟ್ಟೆಯನ್ನೂ ನಾಶಪಡಿಸುತ್ತದೆ. ಹಸಿ ಹಾಲು ಕುಡಿಯುವ ಪದ್ಧತಿ ಮಾತ್ರ ಅಪಾಯಕ್ಕೆ ಒಡ್ಡಿಕೊಂಡಂತೆ.

ಹೌದು, ದೇಹದ ಮೇಲೆಲ್ಲಾ ಗುಳ್ಳೆಗಳೆದ್ದು ಒಡೆದು ವ್ರಣವಾಗಿರುವ ದೃಶ್ಯವು ಭೀತಿ ತರುವುದು ಸಹಜವೇ. ಜ್ವರ, ನೋವು, ಬಾವು, ಉರಿ, ಸಿಡಿತಗಳಿಂದ ಮೂಕವೇದನೆ ಅನುಭವಿಸುವ ದನಕರುಗಳ ಈ ದಾರುಣ ಪರಿಸ್ಥಿತಿ ನಿಜಕ್ಕೂ ಮನಕಲಕುವಂತಹದ್ದು! ಸಾಂಕ್ರಾಮಿಕದ ಸ್ವರೂಪ ಪಡೆದು ಎಲ್ಲೆಡೆ ತೀವ್ರವಾಗಿ ವ್ಯಾಪಿಸುತ್ತಿರುವ ಚರ್ಮಗಂಟು ರೋಗ ಒಂದು ವೈರಲ್ ವ್ಯಾಧಿ. ಜಾನುವಾರುಗಳನ್ನು ಈ ಪರಿಯಲ್ಲಿ ಹಿಂಸಿಸುವ ಮತ್ತೊಂದು ರೋಗ ಇರಲಾರದು ಎನಿಸುವಷ್ಟರ ಮಟ್ಟಿಗೆ ಇದರ ಬಾಧೆ ಸಾಗಿದೆ. ಸೋಂಕಿತ ಹಸುಗಳ ಸಂಖ್ಯೆ, ಸಾವಿನ ಪ್ರಮಾಣ ದಿನದಿಂದ ದಿನಕ್ಕೆ ಏರುತ್ತಿದ್ದರೂ ಎಮ್ಮೆಗಳಲ್ಲಿ ಮಾತ್ರ ಪ್ರಕರಣಗಳ ಸಂಖ್ಯೆ ಆಶ್ಚರ್ಯವೆನಿಸುವಷ್ಟು ಕಡಿಮೆಯಿದೆ.

ಚರ್ಮಗಂಟು ರೋಗ ಹೊಸ ಕಾಯಿಲೆಯೇನೂ ಅಲ್ಲ. 1929ರಲ್ಲೇ ಆಫ್ರಿಕಾದಲ್ಲಿ ವರದಿಯಾಗಿತ್ತು. ನಮ್ಮ ದೇಶಕ್ಕೆ ಕಾಲಿಟ್ಟಿದ್ದು ಮಾತ್ರ ಹೆಚ್ಚುಕಮ್ಮಿ ಕೊರೊನಾ ವೈರಾಣುಗಳ ಜೊತೆಯಲ್ಲೆ. ಒಂದೂವರೆ ವರ್ಷದ ಹಿಂದೆ ನಮ್ಮ ರಾಜ್ಯದಲ್ಲಿ ಕಾಣಿಸಿಕೊಂಡ ಮೊದಲ ಅಲೆಯು ಅದೃಷ್ಟವಶಾತ್ ಹೆಚ್ಚು ಹಾನಿ ಮಾಡಿರಲಿಲ್ಲ. ಆದರೆ ಈಗ್ಗೆ ಎರಡು– ಮೂರು ತಿಂಗಳಿಂದ ಕಾಡುತ್ತಿರುವ ಎರಡನೆಯ ಅಲೆ ತುಂಬಾ ಪ್ರಬಲವಾಗಿದ್ದು, ಮಿಶ್ರತಳಿ ರಾಸುಗಳನ್ನಲ್ಲದೆ ಸ್ಥಳೀಯ ಹಸುಕರುಗಳನ್ನೂ ಅಧಿಕ ಪ್ರಮಾಣದಲ್ಲಿ ಬಾಧಿಸುತ್ತಿದೆ. ಜೀವಹಾನಿಯೂ ದೊಡ್ಡ ಪ್ರಮಾಣದಲ್ಲಿದೆ!



ಗಾಯಗಳ ನಿರ್ವಹಣೆಯೇ ಜಾನುವಾರುಗಳಲ್ಲಿ ದೊಡ್ಡ ಸವಾಲು. ಅದರಲ್ಲೂ ಈ ಕಾಯಿಲೆಯಲ್ಲಿ ಗಂಟುಗಳು ಒಡೆದಾಗ ಆ ಜಾಗವೆಲ್ಲಾ ಕೊಳೆತಂತಾಗಿ ಕುಳಿ ಬೀಳುವುದು. ಮತ್ತೆ ಗಾಯ ಮುಚ್ಚಿಕೊಂಡು ಮೊದಲಿನಂತಾಗಲು ದೀರ್ಘ ಸಮಯ ಹಿಡಿಯುತ್ತದೆ. ಪ್ರತಿನಿತ್ಯ ಗಾಯ ಶುಚಿಗೊಳಿಸುವುದು, ಪದೇ ಪದೇ ಔಷಧ ಹಚ್ಚುವುದು ನಿಜಕ್ಕೂ ಸಮಯ, ತಾಳ್ಮೆ ಬೇಡುವ ಕೆಲಸ. ಒಂದು ದಿನ ನಿಗಾ ತಪ್ಪಿದರೂ ನೊಣಗಳು ಮೊಟ್ಟೆ ಇಟ್ಟು ಹುಳ ಮಾಡುತ್ತವೆ. ಗಾಯ ಮತ್ತಷ್ಟು ಆಳವಾಗುತ್ತದೆ. ಕೆಲವು ರಾಸುಗಳಲ್ಲಿ ಚರ್ಮದ ಮೇಲಷ್ಟೇ ಅಲ್ಲ ಒಳಾಂಗಗಳಲ್ಲೂ ಗಂಟುಗಳಾಗಿ ಪರಿಸ್ಥಿತಿಯನ್ನು ಗಂಭೀರವಾಗಿಸುತ್ತಿವೆ.

ರೋಗವು ವೈರಾಣುಜನ್ಯವಾದ್ದರಿಂದ ನಿರ್ದಿಷ್ಟ ಚಿಕಿತ್ಸೆಯೆಂಬುದಿಲ್ಲ. ಲಕ್ಷಣಗಳನ್ನು ಆಧರಿಸಿ ಮದ್ದು ನೀಡಬೇಕಿದೆ. ಸದ್ಯದಲ್ಲಿ ಈ ಕಾಯಿಲೆಗೆ ಉಪಯೋಗಿಸುತ್ತಿರುವ ಲಸಿಕೆಯೂ ಪೂರ್ಣ ಪರಿಣಾಮಕಾರಿಯಲ್ಲ. ರೋಗದ ಸಮಗ್ರ ನಿಯಂತ್ರಣಕ್ಕೆ ಅಲೋಪಥಿ ಪದ್ಧತಿಯೊಂದೇ ಸಾಕಾಗುತ್ತಿಲ್ಲ. ಪಾರಂಪರಿಕ ಜ್ಞಾನದ ಗಿಡಮೂಲಿಕೆಗಳ ಜೊತೆಗೆ ಆಯುರ್ವೇದ, ಹೋಮಿಯೋಪತಿ ಔಷಧೋಪಚಾರದಿಂದ ಮಾತ್ರ ವ್ಯಾಧಿಯನ್ನು ಹದ್ದುಬಸ್ತಿಗೆ ತಂದು ದನಕರುಗಳ ಜೀವ ಉಳಿಸಲು ಸಾಧ್ಯ.

ದನಕರುಗಳು ಕಾಯಿಲೆಯಿಂದ ಚೇತರಿಸಿಕೊಂಡರೂ ಹೈನುಗಾರರಿಗೆ ಆಗುತ್ತಿರುವ ಆರ್ಥಿಕ ನಷ್ಟ ತುಂಬಾ ದೊಡ್ಡದು. ಹೆಚ್ಚು ಸೊರಗುವಿಕೆ, ಹಾಲು ಉತ್ಪಾದನೆಯಲ್ಲಿ ಕುಸಿತ, ಗರ್ಭಪಾತ, ಪುನಃ ಗರ್ಭ ಕಟ್ಟದಿರುವುದು ಜೊತೆಗೆ ಚರ್ಮವೂ ವಿರೂಪವಾಗುವುದರಿಂದ ರಾಸುಗಳ ಮೌಲ್ಯದಲ್ಲೂ ಇಳಿಕೆಯಾಗುವುದು. ಕೊರೊನಾ ಮನುಕುಲವನ್ನು ಕಾಡಿದಂತೆ ಎಲ್‌ಎಸ್‌ಡಿ ವೈರಾಣುಗಳು ಜಾನುವಾರುಗಳ ಆರೋಗ್ಯಕ್ಕೆ ಕಂಟಕಕಾರಿಯಾಗುತ್ತಿರುವುದು ಸದ್ಯದ ವಾಸ್ತವ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ವಸತಿ ಪ್ರದೇಶದ ನಿವಾಸಿಗಳಿಗೆ ನೆಮ್ಮದಿ ಕರುಣಿಸಿ

ಬೆಂಗಳೂರಿನ ವಸತಿ ಪ್ರದೇಶಗಳಲ್ಲಿ ಕಟ್ಟಡ ನಕ್ಷೆ ಮಂಜೂರಾತಿ ಉಲ್ಲಂಘಿಸಿ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಬಿಬಿಎಂಪಿ ನಿರ್ಧರಿಸಿರುವುದು (ಪ್ರ.ವಾ., ಡಿ. 26) ಒಳ್ಳೆಯ ಬೆಳವಣಿಗೆ. ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳಿಂದಾಗಿ ಮನೆಗಳಲ್ಲಿ ನೆಮ್ಮದಿಯೇ ಇಲ್ಲದಂತಾಗಿದೆ. ಮಕ್ಕಳು, ವೃದ್ಧರು ನಿರಾಳವಾಗಿ ರಸ್ತೆಗಳಲ್ಲಿ ಓಡಾಡಲು ಆಗುತ್ತಿಲ್ಲ. ಯಾರ್‍ಯಾರೋ ವಾಹನಗಳನ್ನು ತಂದು ಯಾರದೋ ಮನೆಯ ಮುಂದೆ ನಿಲ್ಲಿಸಿ ಹೋಗುತ್ತಾರೆ. ಕೇಳಿದರೆ ಜಗಳಕ್ಕೆ ಬರುತ್ತಾರೆ. ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿಕೊಂಡಿರುವುದಿಲ್ಲ. ವಿಪರೀತ ಗೌಜು–ಗದ್ದಲ. ಆದಕಾರಣ ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ನಿರ್ಬಂಧಿಸುವ ಕೆಲಸ ಅಗತ್ಯವಾಗಿ ಆಗಬೇಕು.

ಟಿ.ಆರ್. ರಘುನಾಥ್, ಬೆಂಗಳೂರು

ಕಣ್ಣು ಒದ್ದೆಯಾಯಿತು

ಮದುವೆ ಮಾಡಿದ ಎರಡು ವರ್ಷಗಳಲ್ಲಿ ಮರಣ ಹೊಂದಿ ಸೊಸೆ ಮತ್ತು ಮೊಮ್ಮಗನನ್ನು ಅನಾಥರನ್ನಾಗಿ ಮಾಡಿದ ಮದ್ಯವ್ಯಸನಿ ಮಗನ ತಂದೆಯಾದ ಕೇಂದ್ರ ಸಚಿವ ಕೌಶಲ್ ಕಿಶೋರ್ ಅವರು ವ್ಯಥೆಯಿಂದ 'ಮದ್ಯವ್ಯಸನಿಗಳಿಗೆ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡಬೇಡಿ' ಎಂದು ಹೇಳಿರುವುದನ್ನು (ಪ್ರ.ವಾ., ಡಿ. 26) ಓದಿ ಮನಕಲಕಿ ಕಣ್ಣುಗಳು ಒದ್ದೆಯಾದವು. ಮಗನನ್ನು ಉತ್ತಮ ನಾಗರಿಕನನ್ನಾಗಿ ಮಾಡುವಲ್ಲಿ ವಿಫಲರಾದುದರ ಹೊಣೆ ಹೊತ್ತು, ತಮ್ಮ ನೋವನ್ನು ರಾಷ್ಟ್ರದ ಜನರೊಂದಿಗೆ ಸಚಿವರು ಮುಕ್ತವಾಗಿ ಹಂಚಿಕೊಂಡಿದ್ದಾರೆ. ಮಕ್ಕಳ ಬೆಳವಣಿಗೆಯನ್ನು ಪೋಷಕರು ಸೂಕ್ಷ್ಮವಾಗಿ ಮತ್ತು ಹತ್ತಿರದಿಂದ ಗಮನಿಸಬೇಕಾದ ಅಗತ್ಯವನ್ನು ಈ ವಿದ್ಯಮಾನವು ನಮ್ಮ ಮುಂದಿಡುತ್ತದೆ.

ಪ.ಚಂದ್ರಕುಮಾರ ಗೌನಹಳ್ಳಿ, ಹಿರಿಯೂರು

ಯಾವ ಸಮರ್ಥನೆ ಇದೆ?

ರಾಜ್ಯ ಸಚಿವ ಸಂಪುಟಕ್ಕೆ ಇನ್ನೂ ಐವರನ್ನು ಸೇರಿಸಿಕೊಳ್ಳಲು ಅವಕಾಶ ಇದೆ. ಈ ಸ್ಥಾನಗಳನ್ನು ತುಂಬಲು ಆಗಿಂದಾಗ್ಗೆ ದೆಹಲಿ ಧಣಿಗಳ ಒಪ್ಪಿಗೆಗೆ ಮಾಡಿದ ಪ್ರಯತ್ನಗಳು ಇದುವರೆಗೂ ಫಲ ನೀಡಿಲ್ಲ; ಕಟ್ಟಕಡೆಯ ಪ್ರಯತ್ನ ಎಂಬಂತೆ ಮುಖ್ಯಮಂತ್ರಿಯವರು ದೆಹಲಿಯಲ್ಲಿ ಈಗ ವರಿಷ್ಠರೊಡನೆ ಮಾತುಕತೆ ನಡೆಸಿದ್ದಾರೆ. ಈ ಪ್ರಯತ್ನ ಫಲಿಸೀತೇ? ಅನುಮಾನ! ವಿಧಾನಸಭೆಗೆ ಮುಂದಿನ ವರ್ಷ ಮೇ ತಿಂಗಳಿನಲ್ಲಿ ಚುನಾವಣೆ ನಡೆಯಲಿದೆ. ಹೀಗಾಗಿ ಕೇವಲ ನಾಲ್ಕು ತಿಂಗಳ ಅವಧಿಗಾಗಿ ಮೂರು–ನಾಲ್ಕು ಮಂದಿ ಸಚಿವರಾದರೂ ಆಡಳಿತದ ದೃಷ್ಟಿಯಿಂದ ಮತ್ತು ರಾಜ್ಯದ ಜನರಿಗಾಗುವ ಪ್ರಯೋಜನವೇನು?

ಈ ಹಂತದಲ್ಲಿ ಸಂಪುಟ ವಿಸ್ತರಣೆ ಮಾಡುವುದರ ಹಿಂದೆ ಬರೀ ರಾಜಕೀಯ ಪ್ರಯೋಜನದ ಲೆಕ್ಕಾಚಾರ ಮಾತ್ರ ಇದೆ. ಇದನ್ನು ಬಿಟ್ಟರೆ ಬೇರೆ ಯಾವ ಸಮರ್ಥನೆಯೂ ಇಲ್ಲ. ಜನರ ತೆರಿಗೆ ಹಣ ಪೋಲಾಗಲು ದಾರಿ ಮಾಡಿಕೊಡುವ ಇಂತಹ ಕಸರತ್ತು ಬೇಡ.

ಸಾಮಗ ದತ್ತಾತ್ರಿ, ಬೆಂಗಳೂರು

ಮಾಮೂಲಿ ವಸೂಲಿಯ ಪಾತ್ರವಿಲ್ಲವೇ?

ಬೆಂಗಳೂರಿನ ವಸತಿ ಪ್ರದೇಶಗಳಲ್ಲಿ ಕಟ್ಟಡ ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ವಸತಿಯೇತರ ಚಟುವಟಿಕೆಗಳನ್ನು ನಡೆಸುತ್ತಿರುವವರ ಮೇಲೆ ಕ್ರಮ ಜರುಗಿಸುವುದೇನೋ ಸರಿ. ಆದರೆ 2015ರಲ್ಲೇ ಈ ಸಂಬಂಧದ ನಿಯಂತ್ರಣ ಮಾರ್ಗಸೂಚಿ ಪ್ರಕಟವಾದರೂ ನ್ಯಾಯಾಲಯದ ಆದೇಶ ಬಂದರೂ ಬಿಬಿಎಂಪಿ ಹಾಗೂ ಸಂಬಂಧಪಟ್ಟ ಇಲಾಖೆಗಳು ಕಣ್ಣುಮುಚ್ಚಿ ಕುಳಿತು, ಈಗ ತರಾತುರಿಯಲ್ಲಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಲು ಮುಂದಾಗಿರುವುದು ಅನ್ಯಾಯದ ಪರಮಾವಧಿಯೇ ಸರಿ.

ಈ ವ್ಯವಸ್ಥೆಯಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಪರವಾನಗಿ ಕೊಡುವ ಅಧಿಕಾರಿಗಳದ್ದೂ ತಪ್ಪಿದೆ. ಹೀಗಿದ್ದೂ ಈಗ ದಿಢೀರನೆ ನೋಟಿಸ್ ನೀಡಿರುವುದರಿಂದ ಸಣ್ಣಪುಟ್ಟ ಅಂಗಡಿ ಮಾಲೀಕರಿಗೆ ಕಿರುಕುಳ ನೀಡಿದಂತಾಗಿದೆ ಹಾಗೂ ಗ್ರಾಹಕರಿಗೂ ತೊಂದರೆಯಾಗಿದೆ. ಮೇಲಾಗಿ ಸಮಯ ಬಂದಾಗ ಬಿಬಿಎಂಪಿ ಹುಲಿಯಂತೆ ಗರ್ಜಿಸುತ್ತದೆ ಮತ್ತೆ ಇಲಿಯಂತೆ ಮುದುಡುತ್ತದೆ. ಇಂಥ ನಡೆಯಿಂದ ಜನರಲ್ಲಿ ಗೊಂದಲ ಮೂಡುತ್ತದೆ. ಇದುವರೆಗೂ ಕಂಡಕಂಡಲ್ಲಿ ಅಂಗಡಿ ಪ್ರಾರಂಭಿಸಲು ಪರವಾನಗಿ ಕೊಟ್ಟದ್ದು, ಕಿಷ್ಕಿಂಧೆಯಂತಹ ಸ್ಥಳದಲ್ಲಿ ವ್ಯಾಪಾರ ನಡೆಸಲು ಬಿಟ್ಟದ್ದು ನ್ಯಾಯಾಲಯದ ಆದೇಶದ ಉಲ್ಲಂಘನೆಯಲ್ಲವೇ? ಕಣ್ಣುಮುಚ್ಚಿ ಕುಳಿತು ಕರ್ತವ್ಯಭ್ರಷ್ಟತೆ ತೋರಿದ ಅಧಿಕಾರಿಗಳಿಗೆ ಯಾವ ಶಿಕ್ಷೆಯೂ ಇಲ್ಲವೇ? ಹಾಗೆ ನೋಡಿದರೆ ಮೇಲ್ನೋಟಕ್ಕೆ ಇದರಲ್ಲಿ 'ಮಾಮೂಲಿ' ವಸೂಲಿಯ ಪಾತ್ರವೂ ಇಣುಕದೇ ಇರದು. ಅಕ್ರಮಕ್ಕೆ ಅನುವು ಮಾಡಿಕೊಟ್ಟ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಮೊದಲು ಕ್ರಮ ಜರುಗಿಸಲಿ, ನಂತರ ಮುಚ್ಚಿಸಲು ಮುಂದಾಗಲಿ.

ಕೆ.ಸದಾನಂದ ಶಾಸ್ತ್ರಿ, ಬೆಂಗಳೂರು

ಕಲ್ಲುಕ್ವಾರಿ ಕಾರ್ಯನಿರ್ವಹಣೆ: ಇರಲಿ ನಿಗಾ

ಚಾಮರಾಜನಗರ ತಾಲ್ಲೂಕಿನ ಬಿಸಲವಾಡಿ ಗ್ರಾಮದ ಬಿಳಿಕಲ್ಲು ಕ್ವಾರಿಯೊಂದರಲ್ಲಿ ಕಲ್ಲು ಕುಸಿದು ಮೂವರು ಕಾರ್ಮಿಕರು ಸಾವಿಗೀಡಾಗಿರುವುದು (ಪ್ರ.ವಾ., ಡಿ. 27) ನೋವಿನ ಸಂಗತಿ. ಇದರಿಂದ, ಅವರನ್ನೇ ನಂಬಿಕೊಂಡಿದ್ದ ಕುಟುಂಬಗಳ ಸ್ಥಿತಿ ಶೋಚನೀಯವಾಗುತ್ತದೆ. ರಾಜ್ಯದ ವಿವಿಧೆಡೆ ಈ ಹಿಂದೆ ಇಂತಹ ಪ್ರಕರಣಗಳು ನಡೆದಿದ್ದರೂ ಕಲ್ಲುಕ್ವಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದೇ ಇರುವುದು ದುರದೃಷ್ಟಕರ.

ಈ ರೀತಿಯ ಅವಘಡಗಳಿಗೆ ಅವೈಜ್ಞಾನಿಕ ಕಾರ್ಯನಿರ್ವಹಣೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ. ಕಲ್ಲುಕ್ವಾರಿಗಳ ಕಾರ್ಯನಿರ್ವಹಣೆಯ ಬಗ್ಗೆ ನಿಗಾ ವಹಿಸಿ, ಜನವಸತಿ ಪ್ರದೇಶಗಳ ಸಮೀಪದಲ್ಲಿ ಮತ್ತು ಅವೈಜ್ಞಾನಿಕವಾಗಿ ನಡೆಯುತ್ತಿರುವ ಕಲ್ಲುಕ್ವಾರಿಗಳ ಪರವಾನಗಿಯನ್ನು ರದ್ದು ಮಾಡಿದರೆ ಅಮಾಯಕ ಜೀವಗಳು ಬಲಿಯಾಗುವುದನ್ನು ತಡೆಗಟ್ಟಬಹುದಾಗಿದೆ.

ನಿರಂಜನ್ ಮೂರ್ತಿ ಆರ್.ಕೆ., ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚೀನಾದಲ್ಲಿ ಕೋವಿಡ್ ಈಗ ವ್ಯಾಪಕವಾಗಿ ಹರಡುತ್ತಿದೆ. ಚೀನಾದಿಂದ ಬೇರೆ ದೇಶಗಳಿಗೂ ಕೋವಿಡ್ ಹರಡಬಹುದು ಎಂಬ ಭಯ ವ್ಯಕ್ತವಾಗಿದೆ. ಈ ಭಯಕ್ಕೆ ಭಾರತವೂ ಹೊರತಲ್ಲ. ಆದರೆ, ಅಷ್ಟು ಭಯಪಡುವ ಅವಶ್ಯಕತೆಯಿಲ್ಲ. ಬದಲಿಗೆ ಎಚ್ಚರಿಕೆಯಿಂದ ಇದ್ದರೆ ಸಾಕು ಎನ್ನುತ್ತಾರೆ ತಜ್ಞರು. ಭಾರತವು ಈಗಾಗಲೇ ಕೋವಿಡ್‌ನ ಮೂರು ಅಲೆಗಳನ್ನು ದಾಟಬಂದಿದೆ. ಜತೆಗೆ 220 ಕೋಟಿಗೂ ಹೆಚ್ಚು ಡೋಸ್‌ಗಳಷ್ಟು ಕೋವಿಡ್ ಲಸಿಕೆ ನೀಡಲಾಗಿದೆ. ಕೊರೊನಾ ಸೋಂಕಿನ ಸಂಪರ್ಕದಿಂದ ಸಹಜವಾಗಿ ಬಂದಿರುವ ಪ್ರತಿರೋಧ ಶಕ್ತಿಯ ರಕ್ಷಣೆಯೂ ನಮಗೆ ಇದೆ. ಹೀಗಾಗಿ ಜನರು ಗಾಬರಿ ಬೀಳುವ ಅಗತ್ಯ ಇಲ್ಲ, ಎಚ್ಚರಿಕೆ ವಹಿಸಿದರೆ ಸಾಕು ಎಂಬುದು ತಜ್ಞರ ಕಿವಿಮಾತು

ಕೋವಿಡ್ ಭೀತಿ ಬೇಡ, ಇರಲಿ ಎಚ್ಚರ



ಪ್ರಜಾವಾಣಿ ವಾರ್ತೆ

ಚೀನಾದಲ್ಲಿ ಕೋವಿಡ್ ವ್ಯಾಪಕವಾಗಿ ಹರಡುತ್ತಿದೆ. ಕೋವಿಡ್‌ನ ಮತ್ತೊಂದು ಅಲೆ ಭಾರತಕ್ಕೂ ತಟ್ಟಲಿದೆಯೇ? ಮತ್ತೆ ಲಾಕ್‌ಡೌನ್ ಹೇರಲಾಗುತ್ತದೆಯೇ? ಸೋಂಕಿತರು ಮತ್ತೆ ಪ್ರತ್ಯೇಕವಾಸಕ್ಕೆ ಹೋಗಬೇಕಾಗುತ್ತದೆಯೇ ಎಂಬ ಹಲವು ಪ್ರಶ್ನೆಗಳು ಭಾರತದಲ್ಲಿ ಮತ್ತೆ ಚರ್ಚೆಗೆ ಬರುತ್ತಿವೆ. ಬಹಳಷ್ಟು ಮಂದಿ ಸಾಮಾಜಿಕ ಜಾಲತಾಣಗಳಲ್ಲಿ ಈ ವಿಚಾರವನ್ನು ಚರ್ಚಿಸುತ್ತಿದ್ದಾರೆ. ಕೋವಿಡ್ ತಡೆಗಟ್ಟಲು ಏನೆಲ್ಲಾ ಮನೆಮದ್ದು ಮಾಡಬೇಕು ಎಂಬುದೂ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಕೋವಿಡ್ ಕುರಿತು ಭಯ ಮತ್ತು ಗಾಬರಿಯ ವಾತಾವರಣ ಸೃಷ್ಟಿಯಾಗುತ್ತಿದೆ. ಆದರೆ, ಕೋವಿಡ್ ಕುರಿತು ಈಗ ಅಷ್ಟು ಭಯ ಮತ್ತು ಗಾಬರಿ ಪಡುವ ಅವಶ್ಯಕತೆ ಇಲ್ಲ ಎಂಬುದು ತಜ್ಞರ ಸಲಹೆ.

ಚೀನಾದಲ್ಲಿ ಡಿಸೆಂಬರ್ ಮೂರನೇ ವಾರದಲ್ಲಿ ಒಂದೇ ದಿನ 2.7 ಕೋಟಿ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಕೋವಿಡ್ ರೋಗ ಎಂದು ಪರಿಗಣಿಸುವ ಮಾನದಂಡಗಳನ್ನು ವಿಸ್ತರಿಸಿದ ಕಾರಣ, ಕೋವಿಡ್ ಎಂದು ಪರಿಗಣಿಸದೇ ಇದ್ದ ಪ್ರಕರಣಗಳನ್ನೂ ಕೋವಿಡ್ ವ್ಯಾಪ್ತಿಗೆ ತರಲಾಯಿತು. ಹೀಗಾಗಿ ಒಂದೇ ದಿನ ಅಷ್ಟೊಂದು ಪ್ರಕರಣಗಳು ಪತ್ತೆಯಾದವು ಎಂದು ವರದಿಯಾಗಿದೆ. ಚೀನಾವೇ ಹೇಳುತ್ತಿರುವ ಪ್ರಕಾರ ಅಲ್ಲಿ ಪ್ರತಿದಿನ ಈಗ ಸರಾಸರಿ 2,700 ಪ್ರಕರಣಗಳು ಪತ್ತೆಯಾಗುತ್ತಿವೆ. ಚೀನಾದ ಮಟ್ಟಿಗೆ ಇದು ಗಾಬರಿಯಾಗುವ ವಿಚಾರವೇ ಆಗಿದೆ. ಏಕೆಂದರೆ, ಚೀನಾದಲ್ಲಿ ಕೋವಿಡ್‌ನ ಮೊದಲ ಅಲೆಯೇ ಕೊನೆಗೊಂಡಿಲ್ಲ. ಕೋವಿಡ್ ಹರಡುವುದನ್ನು ತಡೆಗಟ್ಟಿದ್ದರಿಂದ ಅಲ್ಲಿ ಈವರೆಗೆ ಕೋವಿಡ್ ವ್ಯಾಪಕವಾಗಿ ಹರಡಿರಲೇ ಇಲ್ಲ. ಈಗ ಕೋವಿಡ್ ನಿಯಂತ್ರಣ ಕ್ರಮಗಳನ್ನು ಸಡಿಲಿಸಿದ ಕಾರಣ ವ್ಯಾಪಕವಾಗಿ ಹರಡುತ್ತಿದೆ. ಆದರೆ, ಭಾರತದ ಸ್ಥಿತಿ ಇದಕ್ಕಿಂತ ಭಿನ್ನವಾಗಿದೆ ಎನ್ನುತ್ತಾರೆ ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಜೆನೆಟಿಕ್ಸ್ ಅಂಡ್ ಸೊಸೈಟಿಯ ನಿರ್ದೇಶಕ ರಾಕೇಶ್ ಮಿಶ್ರಾ.

ಭಾರತದಲ್ಲಿ ಕೋವಿಡ್ ಸಂಬಂಧಿತ ದತ್ತಾಂಶಗಳೂ ಮಿಶ್ರಾ ಅವರ ಪ್ರತಿಪಾದನೆಯನ್ನೇ ಪುಷ್ಟೀಕರಿಸುತ್ತವೆ. ಭಾರತದಲ್ಲಿ ಕಳೆದ 15 ದಿನಗಳಲ್ಲಿ ಪ್ರತಿದಿನ ಪತ್ತೆಯಾದ ಕೋವಿಡ್ ಪ್ರಕರಣಗಳ ಸಂಖ್ಯೆಯು 250 ದಾಟಿಲ್ಲ. ಈಗಲೂ ಪ್ರತಿದಿನ 160–170 ಹೊಸ ಪ್ರಕರಣಗಳಷ್ಟೇ ಪತ್ತೆಯಾಗುತ್ತಿವೆ. ಜತೆಗೆ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 3,500ಕ್ಕಿಂತ ಕಡಿಮೆ ಇದೆ. ಸೋಮವಾರ ಇದ್ದ ಸಕ್ರಿಯ ಪ್ರಕರಣಗಳ ಸಂಖ್ಯೆ 3,421. ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳಿಗೆ ಹೋಲಿಸಿದರೆ, ಪ್ರತಿದಿನ ರೋಗದಿಂದ ಮುಕ್ತರಾಗಿ ಆಸ್ಪತ್ರೆಗಳಿಂದ ಮನೆಗೆ ಹೋಗುತ್ತಿರುವವರ ಸಂಖ್ಯೆಯೇ ಹೆಚ್ಚು ಇದೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಯೂ ಕಡಿಮೆ ಇದೆ. ಭಾರತದಲ್ಲಿ ಕೋವಿಡ್ ಮತ್ತೆ ತೀವ್ರತೆ ಪಡೆಯುವುದಿಲ್ಲ ಎಂಬುದನ್ನು ಇವೆಲ್ಲವೂ ಸೂಚಿಸುತ್ತದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಹೀಗೆಂದು ಭಾರತದಲ್ಲಿ ಮತ್ತೆ ಕೋವಿಡ್ ಹರಡುವುದಿಲ್ಲ ಎಂದು ತಜ್ಞರು ಹೇಳಿಲ್ಲ. ಕೋವಿಡ್ ಮತ್ತೆ ಹರಡುವ ಅಪಾಯ ಇದ್ದೇ ಇದೆ. ಆದರೆ, ಈಗಾಗಲೇ ಹಲವು ಅಲೆಗಳು ಮತ್ತು ಲಸಿಕೆಯ ಕಾರಣ ಭಾರತೀಯರಲ್ಲಿ ಕೋವಿಡ್ ಪ್ರತಿರೋಧಕ ಶಕ್ತಿ ಅಭಿವೃದ್ಧಿಯಾಗಿದೆ. ಹೀಗಾಗಿ ಕೋವಿಡ್ ತಗುಲಿದರೂ, ಅದು ಉಂಟು ಮಾಡುವ ಅನಾರೋಗ್ಯದ ಪ್ರಮಾಣ ಕಡಿಮೆ ಇರುವ ಸಾಧ್ಯತೆ ಇರುತ್ತದೆ. ಆದರೂ, ಕೋವಿಡ್ ನಿಯಂತ್ರಣ ಕ್ರಮಗಳನ್ನು ಪಾಲಿಸುವುದು ಒಳಿತು ಎಂದು ತಜ್ಞರು ಹೇಳಿದ್ದಾರೆ.

ಭಾರತದಲ್ಲಿ ಬಿಎಫ್.7

ಚೀನಾದಲ್ಲಿ ಈಗ ವ್ಯಾಪಕವಾಗಿ ಹರಡುತ್ತಿರುವ ಓಮೈಕ್ರಾನ್‌ನ ಉಪತಳಿ ಬಿಎಫ್.7ನ ಕೆಲವು ಪ್ರಕರಣಗಳು ಈ ಹಿಂದೆಯೇ ಭಾರತದಲ್ಲೂ ಪತ್ತೆಯಾಗಿವೆ. ಇದೇ ಜುಲೈನಲ್ಲಿ ಗುಜರಾತ್‌ನಲ್ಲಿ ಎರಡು, ಒಡಿಶಾದಲ್ಲಿ ಎರಡು ಪ್ರಕರಣಗಳು ಪತ್ತೆಯಾಗಿದ್ದವು. ಆದರೆ, ಅವು ಹೆಚ್ಚಿನ ಜನರಿಗೆ ಹರಡಿಲ್ಲ ಎಂದು ದಾಖಲೆಗಳು ಹೇಳುತ್ತವೆ. ಭಾರತದಲ್ಲಿ ಈಗ ಇದೇ ಉಪತಳಿಯ ಇನ್ನೊಂದು ಪ್ರಕರಣ ಪತ್ತೆಯಾಗಿದೆ.

ಭಾರತದಲ್ಲಿ ಕೋವಿಡ್ ಸ್ಥಿತಿಗತಿ

156 ಸೋಮವಾರ ಪತ್ತೆಯಾದ ಪ್ರಕರಣಗಳ ಸಂಖ್ಯೆ


163 ಸೋಮವಾರ ಕೋವಿಡ್‌ನಿಂದ ಗುಣಮುಖರಾಗಿ ಮನೆಗೆ ತೆರಳಿದವರ ಸಂಖ್ಯೆ

0 ಸೋಮವಾರ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ

3,421 ಸೋಮವಾರ ದೇಶದಲ್ಲಿದ್ದ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ



49,464 ಸೋಮವಾರ ದೇಶದಲ್ಲಿ ನಡೆಸಲಾದ ಕೋವಿಡ್ ಪತ್ತೆ ಪರೀಕ್ಷೆಗಳ ಸಂಖ್ಯೆ



ಆಧಾರ: ಕೇಂದ್ರ ಆರೋಗ್ಯ ಸಚಿವಾಲಯದ ಕೋವಿಡ್ ಡ್ಯಾಶ್‌ಬೋರ್ಡ್, ಕೋವಿನ್ ಡ್ಯಾಶ್‌ಬೋರ್ಡ್, ಪಿಟಿಐ, ಐಸಿಎಂಆರ್

‘ಕೋವಿಡ್ ಅಲೆ ಮತ್ತೆ ಬಾರದು’

‘ದೇಶದಲ್ಲಿ ಕೋವಿಡ್ ಪ್ರಕರಣಗಳ ಏರಿಕೆ ಅಷ್ಟಾಗಿ ಕಂಡುಬಂದಿಲ್ಲ. ಹೀಗಾಗಿ ಲಾಕ್‌ಡೌನ್ ಅಥವಾ ವಿಮಾನ ಸಂಚಾರ ನಿರ್ಬಂಧ ಸದ್ಯಕ್ಕೆ ಅಗತ್ಯವಿಲ್ಲ’ ಎಂದು ಏಮ್ಸ್ ಮಾಜಿ ನಿರ್ದೇಶಕ ಡಾ. ರಣದೀಪ್ ಗುಲೇರಿಯಾ ಹೇಳಿದ್ದಾರೆ. ‘ಸೋಂಕು ಪ್ರಸರಣ ತಡೆಗೆ ವಿಮಾನ ಸಂಚಾರ ನಿರ್ಬಂಧಿಸುವುದು ಅಷ್ಟೊಂದು ಪರಿಣಾಮಕಾರಿ ವಿಧಾನ ಅಲ್ಲ ಎಂಬುದು ಈ ಹಿಂದಿನ ವಿದ್ಯಮಾನಗಳಲ್ಲಿ ದೃಢಪಟ್ಟಿದೆ. ಚೀನಾದಲ್ಲಿ ಈಗ ಪ್ರಕರಣ ಹೆಚ್ಚಳಕ್ಕೆ ಕಾರಣವಾಗಿರುವ ಬಿಎಫ್.7 ಉಪತಳಿ ಈಗಾಗಲೇ ದೇಶದಲ್ಲಿ ಇದೆ. ಆದರೆ ಅದು ಅಲ್ಲಿಯಷ್ಟು ಪಸರಿಸಿಲ್ಲ’ ಎಂದು ಅವರು ಕಾರಣ ನೀಡಿದ್ದಾರೆ.

ದೇಶದಲ್ಲಿ ಕೋವಿಡ್ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ರೋಗನಿರೋಧಕ ಶಕ್ತಿ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಮಂಡಳಿಯ ಮುಖ್ಯಸ್ಥ ಡಾ. ಎನ್.ಕೆ. ಅರೋರಾ ಅಭಿಪ್ರಾಯಪಟ್ಟಿದ್ದಾರೆ.

‘ಓಮೈಕ್ರಾನ್ ಉಪತಳಿಗಳು ಹರಡುವಿಕೆ ವಿಚಾರದಲ್ಲಿ ಅಪಾಯಕಾರಿ ಎನಿಸಿವೆ. ಚೀನಾದಲ್ಲಿ ಈಗ ಕೋಲಾಹಲಕ್ಕೆ ಕಾರಣವಾಗಿರುವ ಉಪತಳಿಯು ಹಲವು ರೂಪಾಂತರಗಳನ್ನು ಸೃಷ್ಟಿಸಲಿದೆ. ಈ ವೈರಾಣುಗಳು ರೂಪಾಂತರವಾದಾಗ, ವೇಗವಾಗಿ ಹರಡುವ ಗುಣದ ಜೊತೆಗೆ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುವ ಶಕ್ತಿಯನ್ನೂ ಗಳಿಸಿಕೊಂಡಾಗ ಅಪಾಯ ಎದುರಾಗುತ್ತದೆ’ ಎಂದು ರಾಕೇಶ್ ಮಿಶ್ರಾ ಅವರು ಎಚ್ಚರಿಸಿದ್ದಾರೆ.

ಹೊಸ ಹೊಸ ಉಪತಳಿಗಳ ಸೃಷ್ಟಿ ಪ್ರಕ್ರಿಯೆ ನಡೆಯುತ್ತಿದ್ದು, ಪ್ರತಿಯೊಂದು ಉಪತಳಿಗಳ ವಂಶವಾಹಿ ಸಂರಚನೆ ವಿಶ್ಲೇಷಣೆಯ ಮೇಲೆ ನಿಗಾ ಇಡಬೇಕಾದುದು ತೀರಾ ಅಗತ್ಯ ಎಂದು ಅವರು ಒತ್ತಿ ಹೇಳಿದ್ದಾರೆ.

‘ಚೀನಾದಲ್ಲಿ ಜಾರಿಯಲ್ಲಿದ್ದ ‘ಕೋವಿಡ್ ಝೀರೊ ನೀತಿ’ಯು, ದೇಶದಲ್ಲಿ ವೈರಾಣು ಹರಡಲು ಅವಕಾಶ ನೀಡಿರಲಿಲ್ಲ. ಹೀಗಾಗಿ, ಸೋಂಕು ಹೊಸದಾಗಿ ಹರಡುತ್ತಿದೆ. ಈವರೆಗೆ ಕೋವಿಡ್‌ನ ಯಾವುದೇ ಅಲೆಯನ್ನು ಚೀನಾ ಎದುರಿಸಿಲ್ಲ. ಜನರಿಗೆ ಸೋಂಕು ತಟ್ಟಿಯೇ ಇರಲಿಲ್ಲ. ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ಸಹ ಲಾಕ್‌ಡೌನ್ ಹಾಗೂ ಕ್ವಾರಂಟೈನ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದವು. ಜೊತೆಗೆ ಲಸಿಕೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮಾಡಿದ್ದವು. ಆದರೆ ಲಸಿಕೆ ವಿಚಾರದಲ್ಲಿ ಚೀನಾ ವೈಫಲ್ಯ ಕಂಡಿದ್ದರಿಂದ ಈಗ ಪರಿಸ್ಥಿತಿ ಕೈಮೀರಿದೆ’ ಎಂದು ಅವರು ವಿವರಿಸಿದ್ದಾರೆ.

ಲಸಿಕಾ ಕಾರ್ಯಕ್ರಮ ಹಾಗೂ ಕೊರೊನಾ ವಿರುದ್ಧದ ಹೋರಾಟದಲ್ಲಿ ಭಾರತ ಉತ್ತಮವಾಗಿದ್ದು, ಚೀನಾದ ಪರಿಸ್ಥಿತಿ ಇಲ್ಲಿ ಎದುರಾಗುವುದಿಲ್ಲ ಎಂದು ಕೋವಿಡ್ ತಡೆ ಲಸಿಕೆಯನ್ನು ಅಭಿವೃದ್ಧಿಪಡಿಸಿರುವ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್‌ನ ಸಿಇಒ ಅದಾರ್ ಪೂನಾವಾಲಾ ಅವರು ಹೇಳಿದ್ದಾರೆ. ಆದರೂ ಜನರು ನಿರ್ಲಕ್ಷ್ಯ ವಹಿಸದೇ, ನಿಯಮಾವಳಿಗಳನ್ನು ಪಾಲಿಸಬೇಕು ಎಂದು ಹೇಳಿದ್ದಾರೆ.


ಇಂತಹ ವೈರಾಣುಗಳು ವೇಗವಾಗಿ ಹರಡುವ ಗುಣ ಹೊಂದಿದ್ದರೂ, ಕಟ್ಟುನಿಟ್ಟಿನ ಕ್ರಮಗಳಿಂದ ಅವುಗಳ ಪ್ರಸರಣವನ್ನು ನಿಯಂತ್ರಿಸಬಹುದು ಎಂದು ಸಾಂಕ್ರಾಮಿಕ ರೋಗ ಶಾಸ್ತ್ರಜ್ಞ ಡಾ. ಆರ್.ಆರ್. ಗಂಗಖೇಡ್ಕರ್ ಅವರು ಹೇಳಿದ್ದಾರೆ. ‘ಅವು ದೀರ್ಘಕಾಲದವರೆಗೆ ಅದೇ ವೇಗದಲ್ಲಿ ಹರಡುತ್ತದೆ ಎಂದು ಹೇಳಲಾಗುವುದಿಲ್ಲ. ಕಡಿಮೆ ಅವಧಿಯಲ್ಲಿ ಅವುಗಳ ಪ್ರಸರಣವನ್ನು ನಿಯಂತ್ರಿಸಿದರೆ, ರೂಪಾಂತರ ಹೊಂದಲು ಅವುಗಳಿಗೆ ಸಮಯ ಸಿಗುವುದಿಲ್ಲ’ ಎಂದು ಹೇಳಿದ್ದಾರೆ.

‘ದೇಶದಲ್ಲಿ 220 ಕೋಟಿಯಷ್ಟು ಲಸಿಕೆ ಡೋಸ್‌ಗಳನ್ನು ನೀಡಲಾಗಿದ್ದು, ಲಸಿಕೆ ಪಡೆದವರಿಗೆ ಸೋಂಕಿನಿಂದ ರಕ್ಷಣೆ ಸಿಗಲಿದೆ. ಹೀಗಾಗಿ ಮತ್ತೊಂದು ಕೋವಿಡ್ ಅಲೆಯ ಸಾಧ್ಯತೆ ಇಲ್ಲ’ ಎಂದು ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್‌ಐಆರ್) ಮಹಾನಿರ್ದೇಶಕ ಡಾ. ಶೇಖರ್ ಮಂದೆ ಅವರು ಹೇಳಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ರಾಜ್ಯ ಸರ್ಕಾರ ಹೊಸ ವರ್ಷಾಚರಣೆಗಾಗಿ ಹೊಸ ಮಾರ್ಗಸೂಚಿ ಜೊತೆಗೆ ಮಾಸ್ಕ್ ಕಡ್ಡಾಯಗೊಳಿಸಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಬೂಸ್ಟರ್ ಡೋಸ್ ಆಗಿ ಇನ್‌ಕೊವ್ಯಾಕ್ ಮೂಗಿನ ಮೂಲಕ ನೀಡುವ ಲಸಿಕೆ ಜನವರಿಯಲ್ಲಿ ಲಭ್ಯ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಭಾರತ್ ಬಯೋಟೆಕ್ ಕಂಪನಿ ಅಭಿವೃದ್ಧಿಪಡಿಸಿರುವ, ಮೂಗಿನ ಮೂಲಕ ನೀಡಬಹುದಾದ ಕೋವಿಡ್ ತಡೆ ಲಸಿಕೆ ‘ಇನ್‌ಕೊವ್ಯಾಕ್’ (ಬಿಬಿವಿ154) ಮುಂದಿನ ತಿಂಗಳು ಬಳಕೆಗೆ ಲಭ್ಯವಾಗಲಿದೆ. ಮುಕ್ತ ಮಾರುಕಟ್ಟೆಯಲ್ಲಿ ಲಸಿಕೆಯ ಒಂದು ಡೋಸ್‌ಗೆ ₹800 ನಿಗದಿಪಡಿಸಲಾಗಿದೆ. ಸರ್ಕಾರದ ಆರೋಗ್ಯ ಕೇಂದ್ರಗಳಲ್ಲಿ ಇದು ₹325ಕ್ಕೆ ಲಭ್ಯವಾಗಲಿದೆ.



18 ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ (ಬೂಸ್ಟರ್) ಆಗಿ ಈ ಲಸಿಕೆಯನ್ನು ನೀಡಲಾಗುತ್ತದೆ. ಈಗಾಗಲೇ, ಕೋವಿಶೀಲ್ಡ್ ಅಥವಾ ಕೊವ್ಯಾಕ್ಸಿನ್ ಲಸಿಕೆಯ ಎರಡು ಡೋಸ್‌ಗಳನ್ನು ಪಡೆದವರು, ಮೂರನೇ ಡೋಸ್ ಆಗಿ ಇನ್‌ಕೊವ್ಯಾಕ್ ಲಸಿಕೆ ಪಡೆಯಬಹುದು.

ಖಾಸಗಿ ಆಸ್ಪತ್ರೆಗಳಲ್ಲಿ ಇನ್‌ಕೊವ್ಯಾಕ್ ಲಸಿಕೆ ಪಡೆಯಬೇಕಿದ್ದರೆ, ₹990 ಪಾವತಿಸಬೇಕು. ಜಿಎಸ್‌ಟಿ ಹಾಗೂ ಲಸಿಕೆ ನೀಡಿಕೆ ಶುಲ್ಕವನ್ನು ಇದು ಒಳಗೊಂಡಿದೆ. ಇದು ಸೂಜಿರಹಿತ ಹಾಗೂ ನೋವುರಹಿತ ಲಸಿಕೆ. ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ತುರ್ತು ಬಳಕೆಗೆ ಕಳೆದ ತಿಂಗಳು ಅನುಮತಿ ನೀಡಿತ್ತು. ಈ ಸ್ವರೂಪದ ಲಸಿಕೆಯನ್ನು ಬೂಸ್ಟರ್ ಡೋಸ್ ಆಗಿ ಬಳಸಲು ಅನುಮತಿ ನೀಡಿದ್ದು ಇದೇ ಮೊದಲು.

ಓಮೈಕ್ರಾನ್‌ನ ಉಪತಳಿ ಬಿಎಫ್.7 ಚೀನಾದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಸಂದರ್ಭದಲ್ಲಿ ಭಾರತ್ ಬಯೋಟೆಕ್ ಸಂಸ್ಥೆಯು ಮೂಗಿನ ಮೂಲಕ ನೀಡಬಹುದಾದ ಲಸಿಕೆಯನ್ನು ಮಾರುಕಟ್ಟೆಗೆ ಪರಿಚಯಿಸಿದೆ.

- ಬೂಸ್ಟರ್ ಡೋಸ್ ಆಗಿ ಮಾತ್ರವಲ್ಲದೇ, ಪ್ರಾಥಮಿಕ ಡೋಸ್ ಆಗಿ ಬಳಸುವ ಬಗ್ಗೆ ಪ್ರಾಯೋಗಿಕ ಪರೀಕ್ಷೆ ನಡೆಯುತ್ತಿದೆ
- ಈ ಲಸಿಕೆಯನ್ನು ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಲಾಗಿದೆ
- ಲಸಿಕೆಯ ದಾಸ್ತಾನು ಹಾಗೂ ಸರಬರಾಜು ಸಮಯದಲ್ಲಿ 2ರಿಂದ 8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಅಗತ್ಯ

ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಪಡೆಯಲು ಇಚ್ಛಿಸುವವರು, ಕೇಂದ್ರ ಸರ್ಕಾರದ ‘ಕೋವಿನ್’ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು ಎಂದು ಸಂಸ್ಥೆಯ ವಕ್ತಾರರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ. ಜನವರಿ ಕೊನೆಯ ವಾರದಲ್ಲಿ ಲಸಿಕೆಯು ಲಭ್ಯವಾಗಲಿದೆ. ಅದಕ್ಕೆ ಇನ್ನೂ ಒಂದು ತಿಂಗಳು ಸಮಯಾವಕಾಶವಿದ್ದು, ಬೇಡಿಕೆಗೆ ಅನುಗುಣವಾಗಿ ಲಸಿಕೆಯ ತಯಾರಿಕೆ ಪ್ರಮಾಣ ಹಾಗೂ ದೇಶದಾದ್ಯಂತ ಪೂರೈಕೆಯನ್ನು ನಿರ್ಧರಿಸಲಾಗುತ್ತದೆ.

ಸಂಸ್ಥೆಯು ಕೋವ್ಯಾಕ್ಸಿನ್ ಮತ್ತು ಇನ್‌ಕೊವ್ಯಾಕ್ ಎಂಬ ಎರಡು ವಿಭಿನ್ನ ಮಾದರಿಯ ಕೋವಿಡ್ ತಡೆ ಲಸಿಕೆಗಳನ್ನು ಅಭಿವೃದ್ಧಿಪಡಿಸಿದೆ. ಮೂಗಿನ ಮೂಲಕ ನೀಡುವ ಲಸಿಕೆಯನ್ನು ಕಡಿಮೆ ಅವಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲು ಸಾಧ್ಯವಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ಅಧ್ಯಕ್ಷ ಡಾ. ಕೃಷ್ಣ ಎಲ್ಲ ಅವರು ಹೇಳಿದ್ದಾರೆ. ಲಸಿಕೆಯನ್ನು ವಾಷಿಂಗ್ಟನ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಲಸಿಕೆಯ ಮೂರನೇ ಹಂತದ ಪರೀಕ್ಷೆಯನ್ನು ದೇಶದ ವಿವಿಧ ಸ್ಥಳಗಳಲ್ಲಿ ಕೈಗೊಳ್ಳಲಾಗಿತ್ತು. ಲಸಿಕೆಯ ಅಭಿವೃದ್ಧಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳಿಗೆ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ಹಣಕಾಸು ನೆರವು ಒದಗಿಸಿದೆ.

ಲಸಿಕೆ ಪಡೆದವರಲ್ಲಿ ಮ್ಯೂಕೋಸಲ್ ಐಜಿಎ ಪ್ರತಿಕಾಯಗಳು ಗಮನಾರ್ಹ ಮಟ್ಟದಲ್ಲಿ ಏರಿಕೆಯಾಗಿರುವುದು ಪ್ರಾಯೋಗಿಕ ಪರೀಕ್ಷೆಯ ವೇಳೆ ಕಂಡುಬಂದಿದೆ ಎಂದು ಸಂಸ್ಥೆ ತಿಳಿಸಿದೆ. ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಮ್ಯೂಕೋಸಲ್ ಐಜಿಎ ಪ್ರತಿಕಾಯಗಳು ನೆರವಾಗುತ್ತವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸುರಕ್ಷತಾ ಜಾಕೆಟ್ ಧರಿಸಿದ್ದ ಕೆಲವು ವ್ಯಕ್ತಿಗಳು ಪ್ಯಾರಿಸ್ ನಗರದ ರಸ್ತೆಯೊಂದರಲ್ಲಿ ವಾಹನ ಸಂಚಾರಕ್ಕೆ ತಡೆಯೊಡ್ಡಿದ್ದಾರೆ ಎನ್ನಲಾದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಸ್ತೆ ಮೇಲೆ ನಮಾಜ್ ಮಾಡುವ ಉದ್ದೇಶದಿಂದ ವಾಹನಗಳನ್ನು ತಡೆಯುತ್ತಿದ್ದ ಅವರನ್ನು ಸ್ವಯಂಸೇವಕರು ರಸ್ತೆಬದಿಗೆ ಎಳೆದೊಯ್ದರು ಎಂದೂ ಹೇಳಲಾಗಿದೆ. ‘ಜಗತ್ತಿನ ಎಲ್ಲ ಪ್ರಜಾಪ್ರಭುತ್ವ ಸರ್ಕಾರಗಳು ಮತಬ್ಯಾಂಕ್ ಉದ್ದೇಶದಿಂದ ಹೇಡಿಗಳಂತೆ ನಡೆದುಕೊಳ್ಳುತ್ತಿವೆ’ ಎಂದು ಮಧುಪೂರ್ಣಿಮಾ ಕಿಶ್ವಾರ್ ಎಂಬವರು ಟ್ವೀಟ್ ಮಾಡಿದ್ದಾರೆ. ಹಲವು ಜನರು ಈ ವಿಡಿಯೊವನ್ನು ಮರು ಟ್ವೀಟ್ ಮಾಡಿದ್ದಾರೆ. ಆದರೆ ಇದು ಸುಳ್ಳು.



ರಸ್ತೆ ಮೇಲೆ ನಮಾಜ್ ಮಾಡಲು ವಾಹನಗಳಿಗೆ ತಡೆ ಒಡ್ಡಲಾಯಿತು ಎಂಬುದು ಸತ್ಯಕ್ಕೆ ದೂರವಾದ ಮಾತು ಎಂದು ‘ಆಲ್ಟ್ ನ್ಯೂಸ್’ ವರದಿ ಮಾಡಿದೆ. ‘ಸರ್ಕಾರದ ಪರಿಸರ ನೀತಿ ವಿರೋಧಿಸಿ ಇದೇ ನ.26ರಂದು ರಸ್ತೆ ತಡೆದು ಪ್ರತಿಭಟನೆ ನಡೆಸಿದ ಕಾರ್ಯಕರ್ತರನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಯಿತು’ ಎಂದು ಪ್ಯಾರಿಸ್‌ನ ‘ಮಿಡಿ ಲಿಬ್ರೆ’ ಎಂಬ ಸುದ್ದಿಮಾಧ್ಯಮ ವರದಿ ಮಾಡಿದೆ. ಪತ್ರಕರ್ತ ಕ್ಲಮೆಟ್ ಲಾನೆಟ್ ಎಂಬುವರು ವಿಡಿಯೊವನ್ನು ಟ್ವೀಟ್ ಮಾಡಿದ್ದು, ಪ್ರತಿಭಟನೆಯ ಬಗ್ಗೆ ಉಲ್ಲೇಖಿಸಿದ್ದಾರೆ. ‘ಎಕ್ಸ್‌ಪ್ರೆಸ್’ ವೆಬ್‌ಸೈಟ್ ಕೂಡಾ ಪರಿಸರ ಕಾರ್ಯಕರ್ತರ ಪ್ರತಿಭಟನೆಯನ್ನು ವರದಿ ಮಾಡಿದೆ. ಪರಿಸರ ಸಂಬಂಧಿ ಪ್ರತಿಭಟನೆಯನ್ನೇ ನಮಾಜ್ ಮಾಡುವ ಯತ್ನ ಎಂಬುದಾಗಿ ತಪ್ಪಾಗಿ ಬಿಂಬಿಸಲಾಗಿದೆ ಎಂದು ಆಲ್ಟ್ ನ್ಯೂಸ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಕಾತರತೆ ಕಳೆದ ಸುಖ

ಶೀತಾಳೆ ಸಿಡುಬು ಶಿಶುಗಳ ಕುಲುಕಿ ತೆರಳುವುದು |
ಪ್ರೀತಿ ಕಾಮನೆಗಳಷ್ಟಿಷ್ಟು ಬೆಳೆದವರ ||
ಯಾತನೆಗಳಿಂ ಕುದಿಸಿ ಕುಲುಕಿ ಬಳಿಕಾರುವುವು |
ಕಾತರತೆ ಕಳೆಯೆ ಸುಖ – ಮಂಕುತಿಮ್ಮ || 787 ||

ಪದ-ಅರ್ಥ: ಶೀತಾಳೆ ಸಿಡುಬು = ಮೈಮೇಲೆ ದದ್ದು ಬರುವ ರೋಗ. ಯಾತನೆಗಳಿಂದ = ನೋವಿನಿಂದ, ಕುಲುಕಿ = ಅಲುಗಾಡಿಸಿ, ಬಳಿಕಾರುವುವು = ಬಳಿಕ + ಆರುವುವು, ಕಾತರತೆ = ಆತಂಕ.

ವಾಚ್ಯಾರ್ಥ: ಮಕ್ಕಳಿಗೆ ಬರುವ ಶೀತಾಳೆ ಸಿಡುಬು ರೋಗ ಅವರನ್ನು ಹೈರಾಣಗೊಳಿಸಿ ನಂತರ ಕಡಿಮೆಯಾಗುತ್ತದೆ. ಅಂತೆಯೇ ಪ್ರೀತಿ, ಕಾಮಗಳು ಅವುಗಳನ್ನು ಬೆಳೆಸಿದವರನ್ನು ಕಾಡುತ್ತವೆ. ನೋವನ್ನು ನೀಡಿ, ಅವರನ್ನು ಅಲುಗಾಡಿಸಿ ನಂತರ ತಣ್ಣಗಾಗುತ್ತವೆ. ಆ ಆತಂಕ ಕಳೆದಾಗ ಸುಖ.

ವಿವರಣೆ: ಇಲ್ಲೊಂದು ಸುಂದರ ಉದಾಹರಣೆಯೊಂದಿಗೆ ಕಗ್ಗ ದೊಡ್ಡ ತತ್ವವೊಂದನ್ನು ವಿವರಿಸುತ್ತದೆ. ಮಕ್ಕಳು ಬೆಳೆಯುವ ಹಂತದಲ್ಲಿ ಶೀತಾಳೆ ಸಿಡುಬು ರೋಗ ಬರುವುದುಂಟು. ಆಗ ಅವರ ಮೈಮೇಲೆ ದದ್ದುಗಳು ಎದ್ದು, ವಿಪರೀತ ಜ್ವರ ಬರುತ್ತದೆ. ಅದು ಸುಮಾರು ಆರೇಳು ದಿನ ಮಕ್ಕಳನ್ನು ಹಣ್ಣು ಮಾಡುತ್ತದೆ. ನಂತರ ಅದು ಕಡಿಮೆಯಾಗಿ ಮಾಯವಾಗುತ್ತದೆ. ಒಮ್ಮೆ ಬಂದು ಹೋದರೆ ಅದು ಮತ್ತೊಮ್ಮೆ ಮರಳಿ ಬಂದು ಕಾಡುವುದಿಲ್ಲವೆಂಬ ನಂಬಿಕೆ ಇದೆ. ಹೀಗಾಗಿ ಒಮ್ಮೆ ಸಿಡುಬು ಬಂದು ಹೋದ ಮೇಲೆ ಆತಂಕ ಕಡಿಮೆಯಾಗಿ ಸಂತೋಷ ಬರುತ್ತದೆ. ಶೀತಾಳೆ ಸಿಡುಬು ಒಂದು ದೃಷ್ಟಾಂತ ಮಾತ್ರ. ಕಗ್ಗ ಅದನ್ನು ಬಳಸಿ ಹೇಳುತ್ತದೆ, ಈ ಶೀತಾಳೆ ಸಿಡುಬು ಹೇಗೆ ಮಗುವನ್ನು ಕೆಲಕಾಲ ಬಳಲಿಸಿಬಿಡುತ್ತದೋ ಅಂತೆಯೇ ಪ್ರೀತಿ, ಕಾಮನೆಗಳು ಅಷ್ಟಿಷ್ಟು ಮನುಷ್ಯರನ್ನು ಕುಲಕಾಡಿಸಿಬಿಡುತ್ತವೆ. ಕಗ್ಗ, ಇಲ್ಲೊಂದು ವಿಶೇಷ ಪದ “ಬೆಳೆದವರ” ಎನ್ನುವುದನ್ನು ಬಳಸುತ್ತದೆ. ಅದಕ್ಕೆ ಎರಡು ಅರ್ಥಗಳನ್ನು ಕಲ್ಪಿಸಿಕೊಳ್ಳಬಹುದು. ಮೊದಲನೆಯದು, “ಬೆಳೆದವರ’ ಎಂದರೆ, ಸಂಯಮದಿಂದ, ಸಾಧನೆಯಿಂದ, ಪರಿಶ್ರಮದಿಂದ ಬೆಳೆದವರು ಈ ಪ್ರೇಮ, ಕಾಮಗಳ ಹೊಡೆತಗಳಿಂದ ಪಾರಾಗುವವರು ಎಂಬರ್ಥ. ಎರಡನೆಯದು, ‘ಬೆಳೆದವರ’ ಎಂದರೆ ಬೆಳೆಸಿಕೊಂಡವರು. ಯಾರು ಪ್ರೀತಿ, ಕಾಮನೆಗಳನ್ನು ಹೆಚ್ಚೆಚ್ಚಾಗಿ ಬೆಳೆಸಿಕೊಂಡಿದ್ದಾರೋ ಅವರಿಗೇ ಹೆಚ್ಚಿನ ನೋವು,ಕುಲುಕಾಟ. ಹೀಗೆ ಪರಿಶ್ರಮದಿಂದ ಎತ್ತರಕ್ಕೆ ಬೆಳೆದವರು ಹೆಚ್ಚು ನೋವಿಲ್ಲದೆ ಅಥವಾ ನೋವನ್ನು ಮೀರಿ ಅವುಗಳ ಪರಿಣಾಮದಿಂದ ಪಾರಾದರೆ, ಕಾಮನೆಗಳನ್ನು ಹೆಚ್ಚೆಚ್ಚಾಗಿ ಬೆಳೆಸಿಕೊಂಡವರು, ಅತಿಯಾದ ನೋವು, ಸಂಕಟಗಳನ್ನು ಅನುಭವಿಸಿ, ಕೊನೆಗೆ ಪಾರಾಗುತ್ತಾರೆ. ಒಂದು ಸಂತೋಷದ ವಿಷಯವೆಂದರೆ, ಎಷ್ಟೇ ಯಾತನೆ, ನೋವುಗಳಿಂದ ಈ ಕಾಮನೆಗಳು ಮನುಷ್ಯನನ್ನು ಕುದಿಸಿ, ಬೇಯಿಸಿದರೂ ಒಂದಲ್ಲ ಒಂದು ದಿನ ಮರೆಯಾಗುತ್ತವೆ, ಆರಿ ಹೋಗುತ್ತವೆ. ಹೀಗೆ ಮನುಷ್ಯನನ್ನು ಭಾವ, ಉದ್ವೇಗಗಳಲ್ಲಿ ಬೇಯಿಸಿದ ಕಾಮನೆಗಳು ಕೊನೆಗೆ ಅವನನ್ನು ಗಟ್ಟಿಮಾಡಿ, ಪಕ್ವಗೊಳಿಸುತ್ತವೆ. ಪಕ್ವತೆಯ ಇನ್ನೊಂದು ದಂಡೆಯ ಮೇಲೆ ನಿಂತವನಿಗೆ ನಿರಾಳ, ಸಂತೋಷ. ಆತಂಕ ಕಳೆದ ಮೇಲೆಬರುವ ಸುಖವೇ ಆತ್ಯಂತಿಕವಾದದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಡಿಸೆಂಬರ್ 28, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಷಷ್ಠಿ ಗಂ. 20-45 ನಕ್ಷತ್ರ: ಶತಭಿಷ ಗಂ. 12-46 ಯೋಗ: ಸಿದ್ಧಿ(ಅಸ್ರಿಕ್) ಗಂ. 14-20, ಕರಣ: ಕೌಲವ ಗಂ. 09-44, ಧನುರ್ ಮಾಸದ 12 ನೇ ದಿನ.
ರಾಹುಕಾಲ : ಮಧ್ಯಾಹ್ನ 12-00–01-30
ಸೂರ್ಯೋದಯ : 06-55 ಸೂರ್ಯಾಸ್ತ : 06-08
ಮುಸ್ಲಿಂ ದಿನಾಂಕ : 04 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 1, 10

ಮೇಷ: ವೃತ್ತಿಯ ಮತ್ತು ಮುಂದಿನ ಬದುಕಿನ ಬಗ್ಗೆ ಗಂಭಿರವಾಗಿ ಚಿಂತಿಸಬೇಕಾದ ಅಗತ್ಯವಿದೆ. ಖಾದಿ ಉದ್ಯಮದವರಿಗೆ ಬೇಡಿಕೆ ಪೂರೈಸಲು ಸಾಧ್ಯವಾಗದ ರೀತಿಯಲ್ಲಿ ವ್ಯಾಪಾರ ನಡೆಯುವುದು.

ವೃಷಭ: ವೃತ್ತಿಯನ್ನು ಅಭಿವೃದ್ಧಿ ಮಾಡುವ ಸಂಕಲ್ಪದಿಂದ ಈ ದಿನ ಪ್ರಾರಂಭಿಸಿ, ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು. ದೈವಾನುಗ್ರಹದ ಜತೆಯಲ್ಲಿ ಮನುಷ್ಯಪ್ರಯತ್ನದಿಂದ ಅಭೀಷ್ಟ ನೆರವೇರುವುದು.

ಮಿಥುನ: ಮಿತ್ರವರ್ಗದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳು ನಿಮಗೊದಗಿ ಬರುವವು. ಗುಡಿ ಕೈಗಾರಿಕೆಯವರಿಗೆ ಈ ದಿನ ಸಾಕಷ್ಟು ಲಾಭ ಸಿಗಲಿದೆ. ಆರಕ್ಷಕ ಅಧಿಕಾರಿಗಳಿಗೆ ಕೆಲಸಗಳ ಒತ್ತಡ ಕಡಿಮೆಯಾಗಲಿದೆ.

ಕರ್ಕಾಟಕ: ಜೀವನಶೈಲಿಯನ್ನು ಸುಸಂಸ್ಕೃತವಾಗಿ ಬದಲಾಯಿಸಿಕೊಳ್ಳಲು ಈ ದಿನದಿಂದ ಪ್ರಾರಂಭಿಸಿ. ಕೃಷಿಕರಿಗೆ ಕಾಡು ಪ್ರಾಣಿಗಳಿಂದ ತೊಂದರೆಗಳು ಸಂಭವಿಸಬಹುದು. ಕೆಲಸಗಾರರಿಂದ ಅಸಹಕಾರ ಕಂಡುಬರಲಿದೆ.

ಸಿಂಹ: ಸ್ನೇಹಿತನ ಹಣವನ್ನು ದಿನಾಂತ್ಯಕ್ಕೆ ಹಿಂದಿರುಗಿಸುವಿರಿ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹಾಗೂ ಪಕ್ಷನಿಷ್ಠೆ, ಸೇವಾಮನೋಭಾವದಿಂದ ಅಧಿಕಾರ ಪಡೆದುಕೊಳ್ಳುವಿರಿ. ಮಕ್ಕಳಿಗಾಗಿ ಹೊಸ ವಸ್ತ್ರ ಖರೀದಿಸಬಹುದು.

ಕನ್ಯಾ: ಸಂಬಂಧಿಕರ ವಲಯದಲ್ಲಿ ತಪ್ಪು ಅಭಿಪ್ರಾಯಗಳು ದೂರಾಗುವುದು. ಹೊಸಮನೆಯ ಅಲಂಕಾರಕ್ಕಾಗಿ ಹೆಚ್ಚಿನ ವಸ್ತುಗಳನ್ನು ಕೊಳ್ಳುವಿರಿ. ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ ಉಂಟಾಗಲಿದೆ.

ತುಲಾ: ಕಟ್ಟಡ ಗುತ್ತಿಗೆದಾರರಿಗೆ ಆರ್ಥಿಕವಾಗಿ ನಷ್ಟ ಮತ್ತು ಕಾರ್ಮಿಕರ ಕೊರತೆ ಉಂಟಾಗುವುದು. ಜತೆಗೆ ಕಾರ್ಮಿಕರಲ್ಲಿನ ಭಿನ್ನಾಭಿಪ್ರಾಯಗಳು ಬಾರದಂತೆ ಎಚ್ಚರವಹಿಸಿ. ಕುಲದೇವರ ಸೇವೆಯಿಂದ ಹೆಚ್ಚಿನ ಫಲ ಲಭಿಸಲಿದೆ.

ವೃಶ್ಚಿಕ: ಬಾಕಿ ಇರಿಸಿದ ಕೆಲಸ ಕಾರ್ಯಗಳು ಸದ್ಯದಲ್ಲೇ ಪೂರ್ಣಗೊಳ್ಳಲಿದೆ. ಪರಸ್ಪರ ಕಾಳಜಿಗಳ ಬಗ್ಗೆ ಪಾಲುದಾರರು ಸಂತಸದ ಒಪ್ಪಿಗೆ ನೀಡುತ್ತಾರೆ. ಎಚ್ಚರಿಕೆ ಅಗತ್ಯವಿದೆ. ವಾತ-ಪಿತ್ತಗಳ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ.

ಧನು: ಆಲಸ್ಯತನವನ್ನು ದೂರಮಾಡಿಕೊಳ್ಳುವುದು ಒಳ್ಳೆಯದು. ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ಅನುಭವಕ್ಕೆ ಬರಲಿವೆ. ಎಂಜಿನಿಯರಿಂಗ್ ವ್ಯಾಸಂಗ ಮಾಡುವವರಿಗೆ ಉತ್ತೇಜನ ದೊರೆಯುವುದು.

ಮಕರ: ವಾಣಿಜ್ಯೋದ್ಯಮ ಮಂದಿಗೆ ಇಂದು ವ್ಯವಹಾರದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಲು ಉತ್ತಮ ದಿನವಾಗಿರುವುದು. ನೂತನ ಯೋಜನೆ ಕಾರ್ಯಗತಗೊಳಿಸಲು ಸಿಬ್ಬಂದಿವರ್ಗ ಆನಂದದಿಂದ ಸಹಕರಿಸಲಿದ್ದಾರೆ.

ಕುಂಭ: ದಿನದ ಪ್ರಾರಂಭದಲ್ಲಿ ಸವಿತೃ ಸೂರ್ಯ ನಾರಾಯಣನಿಗೆ ನಮಸ್ಕರಿಸುವುದರಿಂದ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದಗಳಿರುವುದಿಲ್ಲ. ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸಗಳು ದೊರೆಯಲಿದೆ.


ಮೀನ: ಮನೆಯವರೊಡನೆ ತಾಳ್ಮೆಯಿಂದ ನಡೆದುಕೊಳ್ಳಿ. ಬದುಕಿಗೆ ತಿರುವು ನೀಡುವ ಅವಕಾಶಗಳು ಬರಲಿವೆ. ಬಂದಂತಹ ಅವಕಾಶ ವಿವೇಚನೆಯಿಂದ ಉಪಯೋಗಿಸಿ ಕೊಳ್ಳುವ ಪ್ರಯತ್ನ ನಡೆಸಿ

ಪದಬಂಧ 5182

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸವತಿಯ ಪುತ್ರ (4)
3.ರಾಜನ ದರ್ಬಾರು (4)
5.ಒಲುಮೆಯಿಂದಲೇ ಮಾಡಿದ ಒತ್ತಾಯ(3)
6.ಅಶ್ವವನ್ನೇರಲು ಬಳಸುವ ಬಳೆ (3)
8.ಮರುಳನ ಹತ್ತಿರವೇ ನೀಚ ವ್ಯಕ್ತಿ ನಿಂತಿದ್ದಾನಲ್ಲಾ! (3)
9.ಕಣ್ಣು ಮುಚ್ಚಿ ತೆಗೆಯುವಷ್ಟು ಕಾಲ (3)
10.ಕೈಯ್ಯಲ್ಲಿರುವ ಹಣ (3)
12.ಇದು ಒದಗಬಹುದಾದದ್ದು (3)
14.ಯುದ್ಧದ ನಗಾರಿ (4)
15.ಅದೃಷ್ಟವೇ ಇಲ್ಲದವ (4)

ಮೇಲಿಂದ ಕೆಳಕ್ಕೆ
1.ಮತ್ತೇರಿದ ಆನೆ (4)
2.ಛೇ!ಗಲ್ಲಿಯ ಆಜುಬಾಜು ಎಲ್ಲಾ ಕಡೆ ಕೊಳೆ! (3)
3.ಜುಲುಮೆಯಿಂದ ಮೂಡಿತೇ ಈ ಪ್ರೀತಿ?(3)
4.ಕುಳ್ಳನಲ್ಲ!ಭಾರೀ ಶ್ರೀಮಂತ! (4)
7.ಹರುಷ ತೋರುತ್ತಿರುವ ಗಂಡು ವ್ಯಕ್ತಿ (3)
8.ಸನ್ಮಾನ ಮಾಡಿದರೂ ಹೀಗೆ ದುಗುಡವೇ? (3)
9.ಉತ್ತರವೇ ಇಲ್ಲದ ಮೌನ (4)
11.ಕೆಟ್ಟ ಅದೃಷ್ಟವಿದು (4)
12.ತಿರುಗುತ್ತಲೇ ಇರುವವನು (3)
13.ವ್ಯವಸಾಯಗಾರನು ತೋಡಿಕೊಂಡ ದುಃಖ (3)



5181ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಮಪದ
4.ಪರೋಕ್ಷ 5.ನಿಘಂಟು
6.ಸರಸ 10.ವಿನಿಯೋಗ
11.ಜೀವಚ್ಛವ 12.ಸುದಿನ
14.ವಲ್ಲಭ 16.ಬುರುಜು
17.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಪಕ್ಷ 2.ಮಧುರ
3.ದನಿ 6.ಸವಿಗನಸು
7.ಸಹಜೀವನ 8.ಹವಿಸ್ಸು 9.ಬವಣೆ
13.ದಿವಾನ 15.ಭವಿ
16.ಬುಧ

ಸುಡೊಕು 5568

		1		8				
			1		6			
3		5		2			8	
	8	7					1	
		4	7	6	3	8		9
5	9						7	
		2		7		1		5
1			2		5		9	
	5			4		2		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5567 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18014
ಇಂದಿನ ಅಂತ್ಯ	18132
▲	117
ದಿನದ ಕನಿಷ್ಠ	18149

ವಿನಿಮಯ ದರ

$ ಡಾಲರ್	82.90
£ ಪೌಂಡ್	100.24
€ ಯುರೊ	88.26
¥ ಯೆನ್ (100ಕ್ಕೆ)	62.05

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹560
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ಫಿಲ್ಟರ್)	₹1615(1615)
ಸೋಯಾ (ಫಿಲ್ಟರ್)	₹1300(1275)
ಸೂರ್ಯಕಾಂತಿ (ಫಿಲ್ಟರ್)	₹1320(1330)
ಪಾಮೋಲಿನ್	₹955(938)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1800-2500
ಮಧ್ಯಮ	₹1500-1800
ಸಣ್ಣ	₹1000-1500

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹132
ಆರ್‌ಎಸ್‌ಎಸ್-5	₹124
ರಬ್ಬರ್ ಲಾಟ್	₹118

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹ 355-670

ದ್ವಿತಳಿ (ಬಿ.ವಿ) ₹422-748

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹13500
ಎಸಿ	₹7000
ಆರ್‌ಪಿ	₹8000
ಆರ್‌ಸಿ	₹4510

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಅಧ್ಯಯನ

ಗಿಗ್ ಕೆಲಸ: ಓಲಾ, ಉಬರ್, ಶೂನ್ಯ ಅಂಕ

ನವದೆಹಲಿ (ಪಿಟಿಐ): ಗಿಗ್ ಕೆಲಸಗಾರರಿಗೆ ಒಳ್ಳೆಯ ಕೆಲಸದ ವಾತಾವರಣ ಕಲ್ಪಿಸಿಕೊಡುವ ವಿಚಾರದಲ್ಲಿ ಓಲಾ, ಉಬರ್, ಡಂಜೊ, ಫಾರ್ಮ್‌ಈಸಿ ಮತ್ತು ಅಮೆಜಾನ್ ಫ್ಲೆಕ್ಸ್ ಅತ್ಯಂತ ಕಡಿಮೆ ಅಂಕ ಗಳಿಸಿವೆ.

ಓಲಾ ಮತ್ತು ಉಬರ್ ಕ್ಯಾಬ್ ಸೇವೆಗಳನ್ನು ಒದಗಿಸುತ್ತವೆ, ಡಂಜೊ ದಿನಸಿ ಸಾಮಾನುಗಳನ್ನು ಮನೆಬಾಗಿಲಿಗೆ ತಲುಪಿಸುವ ಸೇವೆ ಒದಗಿಸುತ್ತದೆ, ಫಾರ್ಮ್‌ಈಸಿ ಆನ್‌ಲೈನ್ ಮೂಲಕ ಔಷಧಗಳನ್ನು ಖರೀದಿಸುವ ಸೌಲಭ್ಯ ಒದಗಿಸುತ್ತದೆ.

12 ಡಿಜಿಟಲ್ ವೇದಿಕೆಗಳಲ್ಲಿ ಕೆಲಸದ ವಾತಾವರಣ ಹೇಗಿದೆ ಎಂಬುದನ್ನು ಫೇರ್‌ವರ್ಕ್ ಇಂಡಿಯಾ ಸಂಸ್ಥೆಯು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಪರಿಶೀಲಿಸಿದೆ. ಫೇರ್‌ವರ್ಕ್ ಸಂಸ್ಥೆಯು ಡಿಜಿಟಲ್ ವೇದಿಕೆಗಳ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಶೀಲನೆ ನಡೆಸುತ್ತದೆ.

ನ್ಯಾಯಸಮ್ಮತ ಪಾವತಿ, ಕೆಲಸದ ಸ್ಥಿತಿ, ಗುತ್ತಿಗೆ, ಆಡಳಿತ ನಿರ್ವಹಣೆ ಮತ್ತು ಪ್ರಾತಿನಿಧ್ಯದ ಆಧಾರದಲ್ಲಿ ‘ಫೇರ್‌ವರ್ಕ್ ಇಂಡಿಯಾ ರೇಟಿಂಗ್ಸ್ 2022 ವರದಿ’ ಸಿದ್ಧಪಡಿಸಲಾಗಿದೆ. ಅಮೆಜಾನ್ ಫ್ಲೆಕ್ಸ್, ಡಂಜೊ, ಓಲಾ, ಫಾರ್ಮ್‌ಈಸಿ ಮತ್ತು ಉಬರ್ 10ರಲ್ಲಿ ಶೂನ್ಯ ಅಂಕ ಗಳಿಸಿವೆ.

‘ಯಾವ ವೇದಿಕೆಯೂ ಎಳಕ್ಕಿಂತ ಹೆಚ್ಚು ಅಂಕ ಪಡೆದಿಲ್ಲ’ ಎಂದು ವರದಿ ಹೇಳಿದೆ. ಅರ್ಬನ್ ಕಂಪನಿ (7), ಬಿಗ್‌ಬಾಸ್ಕೆಟ್ (6), ಫ್ಲಿಪ್‌ಕಾರ್ಟ್ (5), ಸ್ವಿಗ್ಗಿ (5), ಜೊಮಾಟೊ (4), ಜೆಪ್ಟೊ (2) ಮತ್ತು ಪೋರ್ಟರ್ (1) ಹೆಚ್ಚಿನ ಅಂಕ ಪಡೆದಿವೆ.

‘ಗಿಗ್ ಕೆಲಸಗಾರರ ಕೆಲಸದ ಸ್ಥಿತಿಯನ್ನು ಸುಧಾರಿಸಲು ಮೊದಲ ಹೆಜ್ಜೆಯಾಗಿ, ಅವರಿಗೆ ಗಂಟೆಗಳ ಲೆಕ್ಕದಲ್ಲಿ ಕನಿಷ್ಠ ವೇತನ ಸಿಗುವಂತೆ ಮಾಡಬೇಕು. ಅವರು ಸಾಮೂಹಿಕವಾಗಿ ಇರಿಸುವ ಬೇಡಿಕೆಗಳನ್ನು ಆಲಿಸಬೇಕು, ಅದನ್ನು ಪರಿಶೀಲಿಸಬೇಕು’ ಎಂದು ಕೆಲಸದ ಸ್ಥಿತಿ ಕುರಿತು ಪರಿಶೀಲನೆ ನಡೆಸಿದ ತಂಡದ ಮುಖ್ಯ ಪರಿಶೀಲಕ ಪ್ರೊ. ಬಾಲಾಜಿ ಪಾರ್ಥಸಾರಥಿ ಹೇಳಿದ್ದಾರೆ.

‘ಕೆಲಸಗಾರರು ಹಾಗೂ ಅವರ ಸಂಘಟನೆಗಳು, ಇಂತಹ ಡಿಜಿಟಲ್ ವೇದಿಕೆಗಳಿಗೆ ಕೆಲಸ ಮಾಡುವವರಿಗೆ ಸ್ಥಿರ ಆದಾಯ ಇರಬೇಕಾದುದರ ಮಹತ್ವವನ್ನು ಮತ್ತೆ ಮತ್ತೆ ಹೇಳುತ್ತಿದ್ದರೂ ಕಂಪನಿಗಳು ಮಾತ್ರ ಅದನ್ನು ಕಾರ್ಯರೂಪಕ್ಕೆ ತರಲು ಹಿಂದೇಟು ಹಾಕುತ್ತಿವೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ಆದರೆ, ಬಿಗ್‌ಬಾಸ್ಕೆಟ್, ಫ್ಲಿಪ್‌ಕಾರ್ಟ್ ಮತ್ತು ಅರ್ಬನ್ ಕಂಪನಿ ಈ ವರ್ಷ ತಮ್ಮ ಕೆಲಸಗಾರರಿಗೆ ಗಂಟೆಗಳ ಲೆಕ್ಕದಲ್ಲಿ ಕನಿಷ್ಠ ಸಂಭಾವನೆ ಸಿಗುವಂತೆ ಮಾಡುವ ನೀತಿಗಳನ್ನು ಕಾರ್ಯರೂಪಕ್ಕೆ ತಂದಿವೆ ಎಂದು ವರದಿ ತಿಳಿಸಿದೆ.

ಪರಿಶೀಲಿಸಲಾದ ಕಂಪನಿ

ಅಮೆಜಾನ್ ಫ್ಲೆಕ್ಸ್, ಬಿಗ್‌ಬಾಸ್ಕೆಟ್, ಡಂಜೊ, ಫ್ಲಿಪ್‌ಕಾರ್ಟ್, ಓಲಾ, ಫಾರ್ಮ್‌ಈಸಿ, ಪೋರ್ಟರ್, ಸ್ವಿಗ್ಗಿ, ಉಬರ್, ಅರ್ಬನ್ ಕಂಪನಿ, ಜೆಪ್ಟೊ ಮತ್ತು ಜೊಮಾಟೊ

ಗಿಗ್ ಕೆಲಸಗಾರರಿಗೆ ಪಿಂಚಣಿ: ಶಿಫಾರಸು

ಒಂದನೇ ಪುಟದಿಂದ...

ಗಿಗ್ ಕೆಲಸಗಾರರಲ್ಲಿ ಹೆಚ್ಚಿನವರು ಡೆಲಿವರಿ ಏಜೆಂಟ್‌ಗಳು, ಮಾರಾಟ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಬ್ರಿಟನ್‌ನಲ್ಲಿ ಇರುವ ವ್ಯವಸ್ಥೆಯ ಪ್ರಕಾರ, ಒಬ್ಬನೇ ಕೆಲಸಗಾರ ಇದ್ದರೂ ಕಂಪನಿಯು ಆತನನ್ನು ಪಿಂಚಣಿ ಯೋಜನೆಗೆ ಸೇರಿಸಬೇಕು ಹಾಗೂ ಆ ಕೆಲಸಗಾರನ ಹೆಸರಲ್ಲಿ ಪಿಂಚಣಿ ಯೋಜನೆಗೆ ವಂತಿಗೆ ನೀಡಬೇಕು.

ಎನ್‌ಪಿಎಸ್ ಯೋಜನೆಯನ್ನು ಇನ್ನಷ್ಟು ಆಕರ್ಷಕವಾಗಿಸಲು ಕೇಂದ್ರವು ಈ ಯೋಜನೆಯ ಅಡಿ ಮಾಡುವ ಹೂಡಿಕೆಗೆ ನೀಡುವ ಆದಾಯ ತೆರಿಗೆ ವಿನಾಯಿತಿಯನ್ನು ₹ 1 ಲಕ್ಷಕ್ಕೆ ಹೆಚ್ಚಿಸಬೇಕು ಎಂದೂ ಶಿಫಾರಸು ಮಾಡಲಾಗಿದೆ ಎಂದು ಬಂದ್ಯೋಪಾಧ್ಯಾಯ ತಿಳಿಸಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಮಕೃಷ್ಣ ಚಿಟ್ಟದಿಪ್ಪ, ಮೈಸೂರು

● **ಪ್ರಶ್ನೆ:** ನಾನು 2021ರ ಜುಲೈನಲ್ಲಿ ಒಂದು ಫ್ಲ್ಯಾಟ್ ಖರೀದಿಸಿದ್ದೆ. ಇದನ್ನು 2022ರ ಜುಲೈನಲ್ಲಿ ಮಾರಾಟ ಮಾಡಿ ₹ 9 ಲಕ್ಷ ಲಾಭ ಗಳಿಸಿದೆ. ತೆರಿಗೆ ಉಳಿತಾಯಕ್ಕೆ ಎಷ್ಟು ಸಮಯದೊಳಗೆ ನಾನು ಇನ್ನೊಂದು ಮನೆ ಖರೀದಿಸಬೇಕು? ನಾನು ಇದಕ್ಕೆ ಎಷ್ಟು ತೆರಿಗೆ ಪಾವತಿಸಬೇಕು?

ಉತ್ತರ: ಬಂಡವಾಳ ಆಸ್ತಿ ಮಾರಾಟ ಮಾಡಿದಾಗ, ಬಂಡವಾಳ ಲಾಭ ಅಥವಾ ಬಂಡವಾಳ ನಷ್ಟ ಉಂಟಾಗುತ್ತದೆ. ಬಂಡವಾಳ ಆಸ್ತಿಗಳ ವ್ಯಾಖ್ಯಾನವು ಜಮೀನು, ಕಟ್ಟಡ ಮತ್ತು ಮನೆ ಇತ್ಯಾದಿ ಸ್ಥಿರ ಸ್ವತ್ತುಗಳನ್ನು ಒಳಗೊಂಡಿದೆ. ಇವುಗಳ ಮಾರಾಟದಿಂದ ಉಂಟಾಗುವ ಯಾವುದೇ ಲಾಭ ಅಥವಾ ಆದಾಯವು ಅಲ್ಪಾವಧಿಯ ಬಂಡವಾಳ ಲಾಭ ಅಥವಾ ದೀರ್ಘಾವಧಿಯ ಬಂಡವಾಳ ಲಾಭ ಆಗಿರಬಹುದು. ಹೀಗಾಗಿ ತೆರಿಗೆಗೊಳಪಡಿಸುವ ಮೊದಲು ಯಾವುದೇ ಆಸ್ತಿ ಮಾರಾಟವಾದಾಗ, ಮೊದಲು ಅದು ಮೇಲೆ ಹೇಳಿರುವ ಯಾವ ಶೀರ್ಷಿಕೆಯಡಿ ತೆರಿಗೆಗೊಳಪಡಲು ಅರ್ಹ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಜಮೀನು ಅಥವಾ ಕಟ್ಟಡದಂತಹ ಸ್ಥಿರಾಸ್ತಿ ಮಾರಾಟ ಮಾಡಿದಾಗ, ಅಂತಹ ಆಸ್ತಿಯು ಮಾರಾಟ ಮಾಡುವವರ ಒಡೆತನದಲ್ಲಿ 24 ತಿಂಗಳ ಅವಧಿಗೆ ಮಾತ್ರ ಇದ್ದರೆ ಅದು ಅಲ್ಪಾವಧಿ ಬಂಡವಾಳ ಲಾಭದಡಿ ತೆರಿಗೆಗೊಳಪಡುತ್ತದೆ. ಈ ತೆರಿಗೆಯನ್ನು, ವ್ಯಕ್ತಿಯ ವೈಯಕ್ತಿಕ ಆದಾಯ ತೆರಿಗೆ ದರದ ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ.

ನೀವು ಒಂದು ವರ್ಷದ ಅವಧಿಯಲ್ಲಿ ನಿಮ್ಮ ಮನೆ ಮಾರಾಟ ಮಾಡಿರುತ್ತೀರಿ. ಹೀಗಾಗಿ ನೀವು ಗಳಿಸಿದ ಲಾಭವನ್ನು ಅಲ್ಪಾವಧಿ ಬಂಡವಾಳ ಲಾಭವೆಂದೇ ಪರಿಗಣಿಸಲಾಗುತ್ತದೆ. ನಿಮಗೆ ಬೇರೆ ಯಾವುದಾದರೂ ಆದಾಯವಿದೆಯೇ ಎನ್ನುವ ಬಗ್ಗೆ ನೀವು ತಿಳಿಸಿಲ್ಲ. ಇದರ ಪರಿಣಾಮ ನೀವು ಶೇ 20 ಅಥವಾ ಶೇ 30ರ ದರದಲ್ಲೂ ತೆರಿಗೆಗೊಳಪಡಬಹುದು. ಆದರೆ ಪ್ರಸ್ತುತ ಇರುವ ಮಾಹಿತಿಯಂತೆ, ಯಾವುದೇ ತೆರಿಗೆ ಉಳಿಸುವ ಹೂಡಿಕೆಗಳನ್ನು ಮಾಡಲು ಸಾಧ್ಯವಾಗದಿದ್ದರೆ (ಸೆಕ್ಷನ್ 80 ಸಿ ಇದರಡಿ) ಹೊಸ ತೆರಿಗೆ ದರವನ್ನು ಖಂಡಿತವಾಗಿಯೂ ಆಯ್ಕೆ ಮಾಡಬಹುದು. ಇದರಂತೆ ಮೂಲ ತೆರಿಗೆ ₹ 60,000 ಬರಲಿದೆ. ಒಂದು ವೇಳೆ ನೀವು ₹ 1.50 ಲಕ್ಷ ಹೂಡಿಕೆ ಮಾಡಿ ತೆರಿಗೆ ವಿನಾಯಿತಿ ಪಡೆಯಲು ಹಳೆಯ ತೆರಿಗೆ ದರ ಆಯ್ಕೆ ಮಾಡಿದರೂ ನಿಮ್ಮ ಮೂಲ ತೆರಿಗೆ ₹ 62,500 ಬರಲಿದೆ. ಇದಲ್ಲದೆ ಮೂಲ ತೆರಿಗೆಯ ಮೇಲೆ ಶೇ 4ರ ಸೆಸ್ ಕೂಡ ಅನ್ವಯವಾಗುತ್ತದೆ. ಯಾವುದೇ ತೆರಿಗೆ ದರ ಆಯ್ಕೆ ಮಾಡಿದರೂ, ಗರಿಷ್ಠ ತೆರಿಗೆ ವಿನಾಯಿತಿ ಆದಾಯ ಮಿತಿ ₹ 2.50 ಲಕ್ಷಕ್ಕೆ ವಿನಾಯಿತಿ ಸಿಗಲಿದೆ.

ನೀವು ಅಲ್ಪಾವಧಿಯಲ್ಲಿ ನಿಮ್ಮ ಮನೆಯನ್ನು ಮಾರಾಟ ಮಾಡಿರುವ ಕಾರಣ, ಹೊಸ ಮನೆ ಖರೀದಿ-ನಿರ್ಮಾಣಕ್ಕೆ ಸಂಬಂಧಿಸಿದಂತೆ ಹೂಡಿಕೆ ಮಾಡಿದರೂ ನಿಮ್ಮ ಲಾಭಕ್ಕೆ ಯಾವುದೇ ತೆರಿಗೆ ವಿನಾಯಿತಿ ಸಿಗದು. ಇದು ದೀರ್ಘಾವಧಿ ಬಂಡವಾಳ ಲಾಭಕ್ಕೆ ಸಂಬಂಧಿಸಿದ ವ್ಯವಹಾರಕ್ಕಷ್ಟೇ ಸೀಮಿತ. ಹೀಗಾಗಿ ನಿಮ್ಮ ತೆರಿಗೆ ನಿರ್ಣಯ ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ ಇರಲಿ.

ಶಿವಾನಂದ ಎಂ.

● **ಪ್ರಶ್ನೆ:** ಈಗ ನಮ್ಮ ಹತ್ತಿರ ಸುಮಾರು ₹ 40 ಲಕ್ಷ ಇದೆ. ಕೃಷಿ ಜಮೀನು ಖರೀದಿಸುವ ಯೋಚನೆ ಇದೆ. ಸದ್ಯಕ್ಕೆ ಹಣದುಬ್ಬರ ಕಡಿಮೆ ಆಗುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಜಮೀನು ಈಗಲೇ ಖರೀದಿಸಬೇಕೆ ಅಥವಾ ಹಣದುಬ್ಬರ ಶೇ 4ರಿಂದ ಶೇ 5ಕ್ಕೆ ಬಂದಾಗ ಖರೀದಿಸುವುದು ಒಳ್ಳೆಯದೋ?

ಉತ್ತರ: ಹೂಡಿಕೆಯ ಹಿಂದೆ ಒಂದಷ್ಟು ಉದ್ದೇಶ-ಆಕಾಂಕ್ಷೆಗಳಿರುತ್ತವೆ. ನಮ್ಮಲ್ಲಿರುವ ಹೆಚ್ಚುವರಿ ಹಣ ಸರಿಯಾದ ಪ್ರಮಾಣದಲ್ಲಿ ಸರಿಯಾದ ಆಸ್ತಿಗಳಲ್ಲಿ ಹೂಡಿಕೆಯಾಗಿದೆಯೇ ಎನ್ನುವುದರ ಜೊತೆ ಯಾವುದೇ ಹೂಡಿಕೆಯ ನಿರ್ಧಾರದ ಪ್ರಮುಖ ಮಾನದಂಡ. ಹೀಗಾಗಿ ನಿಮ್ಮ ಹೂಡಿಕೆಯ ಆಯ್ಕೆ ಕೃಷಿ ಜಮೀನು ಏಕಾಗಬೇಕು ಎಂಬುದನ್ನು ಮೊದಲು ನಿರ್ಧರಿಸಿ. ಒಂದು ವೇಳೆ ಕೃಷಿಯೇ ನಿಮ್ಮ ಆಸಕ್ತಿಯಾಗಿದ್ದು ಅದುವೇ ನಿಮ್ಮ ಆಯ್ಕೆಯ ಮೂಲ ಕಾರಣವಾಗಿದ್ದಲ್ಲಿ , ಕೃಷಿ ಜಮೀನು ಖರೀದಿಸಿ. ವಾಣಿಜ್ಯ ದೃಷ್ಟಿಯಿಂದ ಮಾರಾಟವಾಗುವ ಫ್ಲ್ಯಾಟ್-ಜಮೀನಿನ ಬೆಲೆ ಮೇಲೆ ಹಣದುಬ್ಬರದ ಪರಿಣಾಮ ಒಂದಷ್ಟು ಇರುತ್ತದೆ. ಆದರೆ, ನೀವು ಖರೀದಿಸಲು ಮುಂದಾಗಿರುವುದು ಕೃಷಿ ಜಮೀನನ್ನು. ಕೃಷಿ ಜಮೀನಿನ ಮೇಲೆ ಹಣದುಬ್ಬರದ ನೇರ ಪರಿಣಾಮ ಎಷ್ಟಿರಬಹುದು ಎಂದು ಹೇಳುವುದು ಕಷ್ಟ ಅಥವಾ ಅದರ ವಿಶ್ಲೇಷಣೆ ಕೆಲವೊಮ್ಮೆ ಅ ಸಂಗತವೆನಿಸಬಹುದು. ಕಾರಣ ಹಣದುಬ್ಬರದ ಪ್ರಮಾಣ ನಿರ್ಣಯಿಸುವ ಅಂಶಗಳು ಬಹಳಷ್ಟಿವೆ. ಒಂದು ವೇಳೆ ನಿಮಗೆ ಇಷ್ಟವಾದ ಜಮೀನು, ಹಣದುಬ್ಬರ ಕಡಿಮೆಯಾದಾಗ ಬೇರೆಯವರಿಗೆ ಮಾರಾಟವಾಗಿ ಹೋಗಲೂಬಹುದು. ಹೀಗಾಗಿ ಇಲ್ಲಿ ಕೊಡು-ಕೊಳ್ಳುವವರ ವ್ಯಾವಹಾರಿಕ ಕ್ಷಮತೆ, ಬೇಡಿಕೆ-ಪೂರೈಕೆ, ಕೃಷಿ ಜಮೀನಿನ ಗುಣಮಟ್ಟ, ನೀರು ಹಾಗೂ ರಸ್ತೆ ಸೌಲಭ್ಯ ಇತ್ಯಾದಿ ವಿಷಯಗಳೇ ಹಣದುಬ್ಬರಕ್ಕಿಂತ ಹೆಚ್ಚಾಗಿ ಬೆಲೆ ನಿರ್ಣಯಿಸುವ ಅಂಶಗಳು.

ಕೃಷಿ ಜಮೀನೇ ನಿಮ್ಮ ಆಯ್ಕೆ ಏಕಾಗಬೇಕು ಎಂಬ ಬಗ್ಗೆ ಒಂದಿಷ್ಟು ಪ್ರಶ್ನೆಗಳನ್ನು ನಿಮಗೆ ನೀವೇ ಹಾಕಿಕೊಳ್ಳಿ. ಒಂದು ವೇಳೆ ನಿಮ್ಮ ಆಸಕ್ತಿ ಕೃಷಿಯಾಗಿರದೆ, ಉತ್ತಮ ಆದಾಯ ಮಾತ್ರವೇ ಆಗಿದ್ದರೆ, ನೀವು ಬೇರೆ ಹೂಡಿಕೆ ಆಯ್ಕೆಗಳ ಬಗ್ಗೆ ಪರಿಶೀಲಿಸಿ.

ಕರ್ನಾಟಕ ಭೂಸುಧಾರಣಾ ಕಾಯ್ದೆಯನ್ನು 2020ರಲ್ಲಿ ತಿದ್ದುಪಡಿ ಮಾಡಲಾಗಿದೆ. ಇದರ ಪ್ರಕಾರ, ಕೃಷಿ ಜಮೀನು ಖರೀದಿಸಲು ಇದ್ದ ಕೃಷಿಯೇತರ ಆದಾಯದ ಮಿತಿ ಹಾಗೂ ಕೃಷಿಕರಷ್ಟೇ ಕೃಷಿ ಜಮೀನು ಖರೀದಿಸಬಹುದೆನ್ನುವ ಕಠಿಣ ನಿಯಮವನ್ನು ಒಂದಷ್ಟು ಸಡಿಲಿಸಲಾಗಿದೆ. ಇದರ ಪರಿಣಾಮವಾಗಿ, ಆರ್ಥಿಕವಾಗಿ ಸಬಲರಾದವರೂ ಕೃಷಿ ಜಮೀನು ಖರೀದಿಸಲು ಉತ್ಸಾಹ ತೋರಬಹುದು. ಪ್ರಮುಖ ನಗರಗಳ ಹೊರವಲಯಗಳಲ್ಲಿ ವಸತಿಗೆ ಹೆಚ್ಚುತ್ತಿರುವ ಬೇಡಿಕೆಯಿಂದಾಗಿ, ಅಂತಹ ಪ್ರದೇಶಗಳಲ್ಲಿ ಮುಂದೆ ಕೃಷಿ ಜಮೀನಿನ ಬೆಲೆ ಸಹಜವಾಗಿ ಹೆಚ್ಚಾಗಬಹುದು. ಅವು ಮುಂದೊಂದು ದಿನ ಭೂಪರಿವರ್ತನೆಗೆ ಒಳಗಾಗಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001 ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ

27-12-2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625(1625)
ಒಂದು ವಾರದ ಡೆಲಿವರಿ	1620(1620)
ಸೋಯಾ ಕಚ್ಚಾ	1220(1175)
ಪಾಮ್ ವಾರದ ಡೆಲಿವರಿ	960(936)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220(1220)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54350(54150)
ಬೆಳ್ಳಿ ಕೆ.ಜಿ 68750(67750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಎಫ್‌ಡಿಐ ಆಕರ್ಷಿಸಲಿದೆ ನವೋದ್ಯಮ ವಲಯ’

ನವದೆಹಲಿ (ಪಿಟಿಐ): ದೇಶದಲ್ಲಿ ನವೋದ್ಯಮಗಳನ್ನು ಗಟ್ಟಿಗೊಳಿಸಲು ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮವಾಗಿ ಈ ವಲಯವು 2023ರಲ್ಲಿ ಗಣನೀಯ ಪ್ರಮಾಣದಲ್ಲಿ ಎಫ್‌ಡಿಐ ಆಕರ್ಷಿಸಲಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಕಾರ್ಯದರ್ಶಿ ಅನುರಾಗ್ ಜೈನ್ ಹೇಳಿದ್ದಾರೆ

ಮಾರುಕಟ್ಟೆಗೆ 20 ಲಕ್ಷ ಟನ್ ಗೋಧಿ?



ನವದೆಹಲಿ (ಪಿಟಿಐ): ಕೇಂದ್ರ ಆಹಾರ ನಿಗಮದ (ಎಫ್‌ಸಿಐ) ದಾಸ್ತಾನಿನಲ್ಲಿ ಇರುವ ಗೋಧಿಯಲ್ಲಿ 15 ಲಕ್ಷದಿಂದ 20 ಲಕ್ಷ ಟನ್ ಗೋಧಿಯನ್ನು 2023ರಲ್ಲಿ ಸಗಟು ಖರೀದಿದಾರರಿಗೆ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಪರಿಶೀಲನೆ ನಡೆಸಿದೆ. ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯ (ಒಎಂಎಸ್‌ಎಸ್) ಅಡಿಯಲ್ಲಿ ಇದನ್ನು ಸಗಟು ಖರೀದಿದಾರರಿಗೆ ನೀಡಲಾಗುತ್ತದೆ.

ಗೋಧಿಯ ಚಿಲ್ಲರೆ ಮಾರಾಟ ದರ ಹೆಚ್ಚಳವನ್ನು ನಿಯಂತ್ರಿಸುವ ಉದ್ದೇಶದಿಂದ ಈ ರೀತಿ ಮಾಡಲು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಬಳಿ ಇರುವ ಮಾಹಿತಿ ಪ್ರಕಾರ, ಗೋಧಿಯ ಸರಾಸರಿ ಚಿಲ್ಲರೆ ಮಾರಾಟ ದರವು ಮಂಗಳವಾರದ ಹೊತ್ತಿಗೆ ಕೆ.ಜಿ.ಗೆ ₹ 32.25 ಆಗಿದೆ. ಇದು ಹಿಂದಿನ ವರ್ಷದ ಇದೇ ದಿನ ₹ 28.53 ಆಗಿತ್ತು. ಗೋಧಿ ಹಿಟ್ಟಿನ ಬೆಲೆಯು ಮಂಗಳವಾರ ಕೆ.ಜಿ.ಗೆ ₹ 37.25ಕ್ಕೆ ತಲುಪಿದೆ. ಹಿಂದಿನ ವರ್ಷದ ಇದೇ ದಿನ ಇದರ ಬೆಲೆ ₹ 31.74 ಆಗಿತ್ತು.

ಒಎಂಎಸ್‌ಎಸ್ ಯೋಜನೆಯ ಅಡಿಯಲ್ಲಿ ಕೇಂದ್ರವು, ಎಫ್‌ಸಿಐಗೆ ಆಹಾರ ಧಾನ್ಯಗಳನ್ನು (ಅದರಲ್ಲೂ ಮುಖ್ಯವಾಗಿ ಗೋಧಿ ಮತ್ತು ಅಕ್ಕಿಯನ್ನು) ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸುತ್ತದೆ. ಮಾರುಕಟ್ಟೆಯಲ್ಲಿ ಧಾನ್ಯ ಲಭ್ಯತೆ ಹೆಚ್ಚುವಂತೆ ಮಾಡಿ, ಅದರ ಬೆಲೆಯನ್ನು ನಿಯಂತ್ರಿಸುವುದು ಇದರ ಉದ್ದೇಶ.

ಕಳೆದ ಎರಡು ಹಂಗಾಮುಗಳಲ್ಲಿ ಬೆಳೆದ ಗೋಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ. ಆದರೆ ಬೆಲೆ ಕುರಿತು ಇನ್ನೂ ತೀರ್ಮಾನ ಆಗಿಲ್ಲ ಎಂದು ಗೊತ್ತಾಗಿದೆ.

ಎಫ್‌ಸಿಐ ಗೋದಾಮುಗಳಲ್ಲಿ ಇರುವ ಗೋಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕು ಎಂಬ ಬೇಡಿಕೆಯನ್ನು ಗಿರಣಿಗಳೂ ಸರ್ಕಾರದ ಮುಂದಿರಿಸಿವೆ. ಮುಕ್ತ ಮಾರುಕಟ್ಟೆಯಲ್ಲಿ ಗೋಧಿ ಲಭ್ಯತೆಯ ಕೊರತೆ ಇರುವ ಕಾರಣ ಗೋಧಿ ಹಾಗೂ ಗೋಧಿ ಹಿಟ್ಟಿನ ಬೆಲೆ ಹೆಚ್ಚಾಗಿದೆ.

ಜೈಲಿನಲ್ಲಿ ಭೇಟಿಗೆ ಯತ್ನಿಸಿದ್ದ ಶರಣರು: ಬಸವರಾಜನ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾರಾಗೃಹ ಅಧಿಕಾರಿಗಳ ಭೇಟಿಗೂ ಆಸ್ಪದ ಇಲ್ಲ
- ಸರ್ಕಾರದ ಮೇಲೆ ಒತ್ತಡ ಹೇರುವುದು ಸರಿ ಕ್ರಮವಲ್ಲ
- ಕಾನೂನು ಹೋರಾಟ ಮುಂದುವರಿಯಲಿದೆ

ಚಿತ್ರದುರ್ಗ: ‘ಮುರುಘಾ ಮಠದ ಶಿವಮೂರ್ತಿ ಶರಣರು ಜೈಲಿನಲ್ಲಿ ನನ್ನನ್ನು ಭೇಟಿ ಮಾಡುವ ಇಂಗಿತ ವ್ಯಕ್ತಪಡಿಸಿದರು. ಆದರೆ ನಾನು ಆಸಕ್ತಿ ತೋರಲಿಲ್ಲ. ಕಾರಾಗೃಹದ ಅಧಿಕಾರಿಗಳೂ ಭೇಟಿಗೆ ಆಸ್ಪದ ನೀಡಲಿಲ್ಲ’ ಎಂದು ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಹೇಳಿದರು.

ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಹಾಗೂ ಷಡ್ಯಂತ್ರ ರೂಪಿಸಿದ ಆರೋಪದಡಿ ಬಂಧಿತರಾಗಿದ್ದ ಅವರು, ಮಂಗಳವಾರ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಮಠಕ್ಕೆ ಆಡಳಿತಾಧಿಕಾರಿ ನೇಮಿಸಿರುವ ಸರ್ಕಾರದ ನಿರ್ಧಾರ ಸರಿ ಇದೆ. ಪ್ರಕರಣ ಕೋರ್ಟ್‌ನಲ್ಲಿ ಇತ್ಯರ್ಥ ಆಗುವವರೆಗೆ ಕಾಯುವುದು ಅನಿವಾರ್ಯ. ಸರ್ಕಾರದ ಮೇಲೆ ಒತ್ತಡ ಹೇರುವುದು ಸರಿಯಾದ ಕ್ರಮವಲ್ಲ’ ಎಂದು ಹೇಳಿದರು.

‘ಈ ಪ್ರಕರಣ ಜೀವನಕ್ಕೆ ಹೊಸ ತಿರುವು ನೀಡಿದ್ದು, ನನ್ನ ಕಾನೂನು ಹೋರಾಟ ಮುಂದುವರಿಯಲಿದೆ. ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದು, ಕಾಂಗ್ರೆಸ್ ಪಕ್ಷದ ಟಿಕೆಟ್ ನಿರೀಕ್ಷೆಯಲ್ಲಿದ್ದೇನೆ. ಶಾಸಕನಾಗಿ ಆಯ್ಕೆಯಾದರೆ, ಕಾರಾಗೃಹದಲ್ಲಿರುವ ಸಮಸ್ಯೆಗಳನ್ನು ಪರಿಹರಿಸುತ್ತೇನೆ’ ಎಂದು ಅವರು ತಿಳಿಸಿದರು.

ಕಾರಾಗೃಹದಿಂದ ನೇರವಾಗಿ ಮಠಕ್ಕೆ ತೆರಳಿದ ಅವರು, ಮುರುಗಿ ಶಾಂತವೀರ ಸ್ವಾಮೀಜಿ ಕರ್ತೃ ಗದ್ದುಗೆಯ ದರ್ಶನ ಪಡೆದರು. ಪೋಕ್ಸೊ ಕಾಯ್ದೆಯಡಿ ದಾಖಲಾದ 2ನೇ ಪ್ರಕರಣದಲ್ಲಿ ಪಿತೂರಿ ನಡೆಸಿದ ಆರೋಪದಲ್ಲಿ ನ.10ರಂದು ಬಸವರಾಜನ್ ಬಂಧಿಸಲಾಗಿತ್ತು. ಡಿ. 22ರಂದು ಹೈಕೋರ್ಟ್‌ನಲ್ಲಿ ಜಾಮೀನು ಸಿಕ್ಕಿತ್ತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಟ್ವೀಟ್

ಉಕ್ರೇನ್ ಸಂತ್ರಸ್ತ ವಿದ್ಯಾರ್ಥಿಗಳಿಗೆ ನೆರವು

ಪ್ರಜಾವಾಣಿ ವಾರ್ತೆ

ವಿಜಯಪುರ: ರಷ್ಯಾ-ಉಕ್ರೇನ್ ನಡುವಿನ ಯುದ್ಧದ ಸಂದರ್ಭದಲ್ಲಿ ತಾಯ್ನಾಡಿಗೆ ಮರಳಿದ ಸಂತ್ರಸ್ತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪಕ್ಷದಿಂದ ಅಗತ್ಯ ಸಹಾಯ, ಸಹಕಾರ ನೀಡಲು ಸಿದ್ಧವಿರುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಮಂಗಳವಾರ ಪ್ರಕಟವಾದ ‘ವಿದೇಶಗಳತ್ತ ಉಕ್ರೇನ್ ಸಂತ್ರಸ್ತ ವೈದ್ಯ ವಿದ್ಯಾರ್ಥಿಗಳು’ ವಿಶೇಷ ವರದಿಯನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಟ್ಯಾಗ್ ಮಾಡಿಕೊಂಡಿರುವ ಶಿವಕುಮಾರ್, ‘ವಿದ್ಯಾರ್ಥಿಗಳ ಭವಿಷ್ಯ ರಕ್ಷಣೆಗೆ ಪಕ್ಷ ಬದ್ಧ’ ಎಂದರು.

‘ಯುದ್ಧ ಸಂತ್ರಸ್ತ ವಿದ್ಯಾರ್ಥಿಗಳು ರಾಜ್ಯದಲ್ಲೇ ಶಿಕ್ಷಣ ಮುಂದುವರಿಸಲು ಪರಿಹಾರವೇನು? ನನ್ನಿಂದ ಹಾಗೂ ಪಕ್ಷದಿಂದ ಏನೇ ಸಹಾಯ ಕೇಳಿದರೂ ಮಾಡಲು ಖಂಡಿತವಾಗಿಯೂ ಸಿದ್ಧ’ ಎಂದು ಭರವಸೆ ನೀಡಿದ್ದಾರೆ.

ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಹಲವರು ಪ್ರತಿಕ್ರಿಯಿಸಿದ್ದು, ‘ನಮ್ಮ ದೇಶದಲ್ಲಿ ಯಾರು ಉನ್ನತ ವ್ಯಾಸಂಗ ಮಾಡುತ್ತಾರೋ ಅವರಿಗೆ ಉಚಿತ ಶಿಕ್ಷಣ ನಮ್ಮ ದೇಶದಲ್ಲೇ ದೊರೆಯುವಂತಾಗಬೇಕು’ ಎಂದು ಸಂತೋಷ ವರವಜ್ಜಿ ಎನ್ನುವವರು ಒತ್ತಾಯಿಸಿದ್ದಾರೆ.

‘ಯಾವುದೇ ದೇಶದಲ್ಲಿ ನಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರೆ ಅದು ನಮ್ಮ ದೇಶದ ಏಳಿಗಾಗಿ ಅಂತ ಪ್ರಧಾನಮಂತ್ರಿಯವರು ತಿಳಿದುಕೊಳ್ಳಬೇಕು’ ಎಂದು ಸತೀಶ್ ಡಿ.ಎಸ್. ಎಂಬುವವರು ಹೇಳಿದ್ದಾರೆ.

ಮಿಕ್ಸಿ ಸ್ಫೋಟ: ಇಬ್ಬರು ವಶಕ್ಕೆ

ಹಾಸನ: ಇಲ್ಲಿನ ಕೊರಿಯರ್ ಅಂಗಡಿಯಲ್ಲಿ ಮಿಕ್ಸಿ ಸ್ಫೋಟದ ಸಂಬಂಧ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ‘ಇದರಲ್ಲಿ ಉಗ್ರರ ಕೃತ್ಯದ ಶಂಕೆ ಇಲ್ಲ’ ಎಂದು ಎಸ್.ಪಿ ಹರಿರಾಮ್ ಶಂಕರ್ ಅವರು ಸ್ಪಷ್ಟಪಡಿಸಿದ್ದಾರೆ.

ನಗರದ ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯ ಕುವೆಂಪು ನಗರದಲ್ಲಿ ಕೃತ್ಯ ನಡೆದಿತ್ತು. ಸುದ್ದಿಗಾರರಿಗೆ ಮಾಹಿತಿ ನೀಡಿದ ಎಸ್.ಪಿ ಅವರು, ‘ಕೊರಿಯರ್ ಮಾಲೀಕ, ಸಿಬ್ಬಂದಿಯಿಂದ ಮಾಹಿತಿ ಪಡೆಯಲಾಗಿದೆ. ವೈಯಕ್ತಿಕ ದ್ವೇಷದಿಂದ ಮಿಕ್ಸಿ ಕೊರಿಯರ್ ಮಾಡಿದ್ದು, ಇಬ್ಬರನ್ನು ತನಿಖೆಗೆ ಒಳಪಡಿಸಲಾಗಿದೆ. ಸಾರ್ವಜನಿಕರು ಊಹಾಪೋಹವನ್ನು ನಂಬಬಾರದು’ ಎಂದರು.

‘ಮಿಕ್ಸಿ ಚಾಲನೆ ಮಾಡಿದ ಕೂಡಲೇ ಸ್ಫೋಟವಾಗುವಂತೆ ಸಣ್ಣ ಪ್ರಮಾಣದ ಸ್ಫೋಟಕ ಬಳಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ. ಮೈಸೂರಿನ ಎಫ್‌ಎಸ್‌ಎಲ್ ತಂಡದ ಅಧಿಕಾರಿಗಳು ಸ್ಫೋಟದ ಸ್ಥಳದಲ್ಲಿ ಕೆಲ ವಸ್ತುಗಳನ್ನು ಸಂಗ್ರಹಿಸಿದ್ದಾರೆ. ಗಾಯಗೊಂಡಿರುವ ಸಿಬ್ಬಂದಿ ಶಶಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುಪ್ತ ದಳ, ಆಂತರಿಕ ಭದ್ರತೆ ವಿಭಾಗದ ಎಸ್ಪಿ ಪ್ರಕಾಶ್ ಗೌಡ ಹಾಗೂ ಕರ್ನಲ್ ಬಾಲಕೃಷ್ಣ ನೇತೃತ್ವದಲ್ಲಿ ತನಿಖೆ ಚುರುಕುಗೊಂಡಿದೆ’ ಎಂದರು.

ಡಿ.ಜೆ.ಹಳ್ಳಿ ಗಲಭೆ ಎಸ್‌ಡಿಪಿಐ ಸಂಚು: ವರದಿ

ಒಂದನೇ ಪುಟದಿಂದ...

ಈ ಗಲಭೆಗಳಿಗೆ ನವೀನ್ ಎಂಬಾತನ ಪ್ರಚೋದನಾತ್ಮಕ ಫೇಸ್‌ಬುಕ್ ಸಂದೇಶ ಒಂದೇ ಕಾರಣವಾಗಿರದೆ, ಎಸ್‌ಡಿಪಿಐ ಸದಸ್ಯರ ಸಂಚೂ ಕಾರಣ’ ಎಂದು ವಿಚಾರಣೆಯಿಂದ ಗೊತ್ತಾಗಿದೆ ಎಂದು ವರದಿಯಲ್ಲಿದೆ.

ವರದಿಯ ಅಂತಿಮ ನಿರ್ಣಯ: ಪೊಲೀಸರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲು ಮತ್ತು ಪೊಲೀಸ್ ಠಾಣೆಗಳ ಮೇಲೆ ದಾಳಿ ನಡೆಸಿ ನಾಶಪಡಿಸಲು ದುಷ್ಕರ್ಮಿಗಳು ಉದ್ರಿಕ್ತರ ಗುಂಪನ್ನು ಪ್ರಚೋದಿಸುತ್ತಿದ್ದರು. ಗಲಭೆ ಶುರುವಾದಾಗ ಗುಂಪನ್ನು ಚದುರಿಸಲು ಪ್ರಯತ್ನಿಸಿದರೂ ಉದ್ರಿಕ್ತ ಗುಂಪು ಚದುರದೇ ಪೊಲೀಸರ ಮೇಲೆ ದಾಳಿ ನಡೆಸುತ್ತಾ ವಾಹನಗಳನ್ನು, ಆಸ್ತಿಗಳನ್ನು ನಾಶಪಡಿಸುತ್ತಾ ಭಯಾನಕ ವಾತಾವರಣ ನಿರ್ಮಿಸಿತ್ತು.

ಹಾರ್ದಿಕ್ ಪಾಂಡ್ಯ ನೇತೃತ್ವ

ಲಂಕಾ ಸರಣಿ: ಟಿ20 ತಂಡದಲ್ಲಿ ಹಿರಿಯರಿಗೆ ಸ್ಥಾನವಿಲ್ಲ

ನವದೆಹಲಿ (ಪಿಟಿಐ): ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಶ್ರೀಲಂಕಾ ವಿರುದ್ಧ ತವರಿನಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ಸರಣಿಗೆ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ಹಿರಿಯ ಆಟಗಾರರಾದ ರೋಹಿತ್ ಶರ್ಮ, ವಿರಾಟ್ ಕೊಹ್ಲಿ ಮತ್ತು ಕರ್ನಾಟಕದ ವಿಕೆಟ್‌ಕೀಪರ್ ಬ್ಯಾಟರ್ ಕೆ.ಎಲ್. ರಾಹುಲ್ ಅವರನ್ನು ಚುಟುಕು ಕ್ರಿಕೆಟ್ ಸರಣಿಗೆ ಪರಿಗಣಿಸಿಲ್ಲ.

ಲಂಕಾ ವಿರುದ್ಧದ ಏಕದಿನ ಸರಣಿಗೆ ರೋಹಿತ್ ಶರ್ಮ ತಂಡವನ್ನು ಮುನ್ನಡೆಸಲಿದ್ದು, ಕೊಹ್ಲಿ ಮತ್ತು ರಾಹುಲ್ ಆಡಲಿದ್ದಾರೆ. ಬಿಸಿಸಿಐ ರಾಷ್ಟ್ರೀಯ ಆಯ್ಕೆ ಸಮಿತಿಯು 2024ರ ಟಿ20 ವಿಶ್ವಕಪ್ ಟೂರ್ನಿಗೆ ಈಗಿನಿಂದಲೇ ತಂಡವನ್ನು ಕಟ್ಟುವ ನಿಟ್ಟಿನಲ್ಲಿ ಯುವ ಆಟಗಾರರಿಗೆ ಮಣೆ ಹಾಕಿದೆ.

ಸೂರ್ಯಕುಮಾರ್ ಮತ್ತು ಹಾರ್ದಿಕ್ ಕ್ರಮವಾಗಿ ಟಿ20 ಮತ್ತು ಏಕದಿನ ತಂಡದಲ್ಲಿ ಉಪನಾಯಕನ ಜವಾಬ್ದಾರಿ ನಿರ್ವಹಿಸಲಿದ್ದಾರೆ.

‘ರೋಹಿತ್ ಅವರನ್ನು ಟಿ20 ನಾಯಕತ್ವ ಸ್ಥಾನದಿಂದ ಅಧಿಕೃತವಾಗಿ ತೆಗೆದುಹಾಕಿಲ್ಲ ನಿಜ. ಅದರೆ ಚುಟುಕು ಕ್ರಿಕೆಟ್ ತಂಡದಲ್ಲಿ ಯುವ ಆಟಗಾರರಿಗೆ ಅವಕಾಶ ನೀಡಲು ರೋಹಿತ್, ಕೊಹ್ಲಿ ಮತ್ತು ರಾಹುಲ್ ಅವರನ್ನು ಹೊರಗಿಡಲಾಗಿದೆ’ ಎಂದು ಬಿಸಿಸಿಐ ಮೂಲಗಳು ಹೇಳಿವೆ.

ವೇಗದ ಬೌಲರ್‌ಗಳಾದ ಶಿವಂ ಮವಿ ಮತ್ತು ಮುಖೇಶ್ ಕುಮಾರ್ ಅವರು ಇದೇ ಮೊದಲ ಬಾರಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.



ಹಾರ್ದಿಕ್ ಪಾಂಡ್ಯ

ರಿಷಭ್ ಅಲಭ್ಯ: ಮಂಡಿನೋವಿನಿಂದ ಬಳಲಿದ್ದ ರಿಷಭ್ ಪಂತ್ ಅವರನ್ನು ಲಂಕಾ ವಿರುದ್ಧದ ಸರಣಿಗೆ ಸರಣಿಗೆ ಪರಿಗಣಿಸಿಲ್ಲ. ಅವರು ಎನ್‌ಸಿಎನಲ್ಲಿ ಎರಡು ವಾರ ಮರುಚೈತನ್ಯ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ತಂಡ ಹೀಗಿದೆ: ಟಿ20 ಸರಣಿ: ಹಾರ್ದಿಕ್ ಪಾಂಡ್ಯ (ನಾಯಕ), ಇಶಾನ್ ಕಿಶನ್ (ವಿಕೆಟ್ ಕೀಪರ್), ಋತುರಾಜ್ ಗಾಯಕವಾಡ್, ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ (ಉಪನಾಯಕ), ದೀಪಕ್ ಹೂಡಾ, ರಾಹುಲ್ ತ್ರಿಪಾಠಿ, ಸಂಜು ಸ್ಯಾಮ್ಸನ್, ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್, ಉಮ್ರನ್ ಮಲಿಕ್, ಶಿವಂ ಮವಿ, ಮುಖೇಶ್ ಕುಮಾರ್

ಏಕದಿನ ಸರಣಿ: ರೋಹಿತ್ ಶರ್ಮ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿಕೆಟ್ ಕೀಪರ್), ಇಶಾನ್ ಕಿಶನ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ (ಉಪನಾಯಕ), ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮ್ರನ್ ಮಲಿಕ್, ಅರ್ಷದೀಪ್ ಸಿಂಗ್

ಧವನ್‌ಗೆ ಕೊಕ್

ಆರಂಭಿಕ ಬ್ಯಾಟರ್ ಶಿಖರ್ ಧವನ್ ಅವರು ಲಂಕಾ ವಿರುದ್ಧದ ಸರಣಿಗೆ ಎರಡೂ ಮಾದರಿಯ ತಂಡದಲ್ಲಿ ಸ್ಥಾನ ಪಡೆದಿಲ್ಲ. ಇದರೊಂದಿಗೆ ಅವರ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನ ಬಹುತೇಕ ಕೊನೆಗೊಂಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಸತತ ಬ್ಯಾಟಿಂಗ್ ವೈಫಲ್ಯ ಮತ್ತು ಯುವ ಆಟಗಾರರಾದ ಶುಭಮನ್ ಗಿಲ್ ಹಾಗೂ ಇಶಾನ್ ಕಿಶನ್ ಅವರ ಉತ್ತಮ ಪ್ರದರ್ಶನ, ಧವನ್ ಸ್ಥಾನಕ್ಕೆ ಕುತ್ತು ತಂದಿತ್ತಿದೆ.

ಗೋವಾ ಎದುರು ಮೊದಲ ದಿನ ಕರ್ನಾಟಕ ಉತ್ತಮ ಮೊತ್ತ: ಮಯಂಕ್, ವಿಶಾಲ್ ಅರ್ಧಶತಕ

ಸಮರ್ಥ್ ಶತಕದ ‘ಹ್ಯಾಟ್ರಿಕ್’

ಪ್ರಜಾವಾಣಿ ವಾರ್ತೆ

ಪಣಜಿ: ಅಮೋಘ ಲಯದಲ್ಲಿರುವ ಆರಂಭಿಕ ಬ್ಯಾಟರ್ ಆರ್. ಸಮರ್ಥ್ ಶತಕಗಳ ‘ಹ್ಯಾಟ್ರಿಕ್’ ಸಾಧನೆ ಮಾಡಿದರು.

ಪೊರ್ವರಿಯಂ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೂರನೇ ಪಂದ್ಯದಲ್ಲಿ ಸಮರ್ಥ್ (140; 238ಎ, 4X14) ಶತಕ ದಾಖಲಿಸಿದರು. ಈ ಋತುವಿನಲ್ಲಿ ಅವರು ಸತತ ಮೂರನೇ ಬಾರಿ ಶತಕ ಸಾಧನೆ ಮಾಡಿದರು. ಬೆಂಗಳೂರಿನಲ್ಲಿ ನಡೆದಿದ್ದ ಸರ್ವಿಸಸ್ ಹಾಗೂ ಪುದುಚೇರಿ ತಂಡಗಳ ಎದುರೂ ಅವರು ನೂರರ ಗಡಿ ದಾಟಿದ್ದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ (50; 82ಎ, 4X5, 6X2) ಮತ್ತು ಸಮರ್ಥ್ ಇನಿಂಗ್ಸ್‌ಗೆ ಗಟ್ಟಿ ಬುನಾದಿ ಹಾಕಿದರು. ಇದರಿಂದಾಗಿ ತಂಡವು ದಿನದಾಟದ ಕೊನೆಗೆ 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 294 ರನ್ ಗಳಿಸಿತು.

ಆರಂಭಿಕ ಜೋಡಿಯು ಮೊದಲ ವಿಕೆಟ್ ಜೊತೆಯಾಟದಲ್ಲಿ 116 ರನ್ ಸೇರಿಸಿತು. ಯುವಪ್ರತಿಭೆ ವಿಶಾಲ್ ಒಣತ್ (ಬ್ಯಾಟಿಂಗ್ 73, 172ಎ, 4X9) ಮತ್ತು ಮನೀಷ್ ಪಾಂಡೆ (ಬ್ಯಾಟಿಂಗ್ 8) ಕ್ರೀಸ್‌ನಲ್ಲಿದ್ದಾರೆ.

ಶತಕದ ಜೊತೆಯಾಟ: ಮಯಂಕ್ ಮತ್ತು ಸಮರ್ಥ್ ಸತತ ಎರಡನೇ ಪಂದ್ಯದಲ್ಲಿಯೂ ಶತಕದ ಜೊತೆಯಾಟವನ್ನು ದಾಖಲಿಸಿದರು. 116 ರನ್‌ಗಳನ್ನು ಸೇರಿಸಿದರು.



ಗೋವಾ ವಿರುದ್ಧದ ರಣಜಿ ಕ್ರಿಕೆಟ್ ಪಂದ್ಯದಲ್ಲಿ ಶತಕ ಗಳಿಸಿದ ಕರ್ನಾಟಕದ ಬ್ಯಾಟರ್ ಆರ್. ಸಮರ್ಥ್

ಆತಿಥೇಯ ಬೌಲರ್‌ಗಳನ್ನು 30 ಓವರ್‌ಗಳ ವರೆಗೂ ಕಾಡಿದರು. ಮಯಂಕ್ ಎರಡು ಚೆಂದದ ಸಿಕ್ಸರ್‌ಗಳನ್ನು ಸಿಡಿಸಿದರು. ಅಲ್ಲಿಯವರೆಗೂ ರನ್ ಗಳಿಕೆಯ ವೇಗ ಹೆಚ್ಚಿತ್ತು. ಮಧ್ಯಮವೇಗಿ ಲಕ್ಷ್ಯ ಗರ್ಗ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದ ಮಯಂಕ್ ನಿರ್ಗಮಿಸಿದರು. ಇದರೊಂದಿಗೆ ಜೊತೆಯಾಟವೂ ಮುರಿಯಿತು.

ಕ್ರೀಸ್‌ನಲ್ಲಿದ್ದ ಸಮರ್ಥ್ ಇದೇ ಟೂರ್ನಿಯಲ್ಲಿ ಪದಾರ್ಪಣೆ ಮಾಡಿರುವ ವಿಶಾಲ್ ಒಣತ್ ಅವರೊಂದಿಗೆ ಇನಿಂಗ್ಸ್‌ಗೆ ಮತ್ತಷ್ಟು ಬಲ ತುಂಬಿದರು. ಹೆಚ್ಚು ಎಸೆತಗಳನ್ನು ಆಡಿ ತಾಳ್ಮೆ ತೋರಿದ ಇಬ್ಬರೂ ಬ್ಯಾಟರ್‌ಗಳು ಎರಡನೇ ವಿಕೆಟ್ ಜೊತೆಯಾಟದಲ್ಲಿ 143 ರನ್ ಸೇರಿಸಿದರು. ಇದರಿಂದಾಗಿ ಚಹಾ ಸಮಯದವರೆಗೂ ಈ ಜೊತೆಯಾಟ ಬೆಳೆಯಿತು.

ವಿರಾಮದ ನಂತರ ಅರ್ಜುನ್ ತೆಂಡೂಲ್ಕರ್ ಬೌಲಿಂಗ್‌ನಲ್ಲಿ ಫೀಲ್ಡರ್ ಏಕನಾಥ್ ಕೆರ್ಕರ್ ಪಡೆದ ಕ್ಯಾಚ್‌ಗೆ ಸಮರ್ಥ್ ಔಟಾದರು. ಅವರ ಸುಂದರ ಇನಿಂಗ್ಸ್‌ಗೂ ತೆರೆಬಿತ್ತು.

ಕ್ರೀಸ್‌ಗೆ ಬಂದ ನಿಕಿನ್ ಜೋಸ್ ಮತ್ತು ವಿಶಾಲ್ ಜೊತೆ 25 ರನ್ ಸೇರಿಸಿದರು. ಆದರೆ ಇನಿಂಗ್ಸ್ ಮುಗಿಯಲು ಕೊನೆಯ ನಾಲ್ಕು ಓವರ್‌ಗಳು ಬಾಕಿಯಿದ್ದಾಗ ದರ್ಶನ್ ಮಿಸಾಲೆ ಬೌಲಿಂಗ್‌ನಲ್ಲಿ ನಿಕಿಲ್ ಎಲ್‌ಬಿಡಬ್ಲ್ಯು ಆದರು.

19 ವರ್ಷದ ವಿಶಾಲ್ ಅಪಾರ ಏಕಾಗ್ರತೆಯಿಂದ ರನ್ ಗಳಿಸಿದರು. 42.44ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಸೇರಿಸಿದರು. ಚೆಂದದ ಸ್ವೀಪ್ ಮತ್ತು ಡ್ರೈವ್‌ಗಳನ್ನು ಕೌಶಲಪೂರ್ಣವಾಗಿ ಆಡಿದರು.

ಮುಖ್ಯಾಂಶಗಳು

- 238ಎಸೆತಗಳಲ್ಲಿ 140 ರನ್ ಗಳಿಸಿದ ಕರ್ನಾಟಕದ ಆರಂಭಿಕ ಬ್ಯಾಟರ್
- ಸರ್ವಿಸಸ್ ಹಾಗೂ ಪುದುಚೇರಿ ತಂಡಗಳ ಎದುರೂ ಶತಕ ಗಳಿಸಿದ್ದರು
- ಮಯಂಕ್ 50 ರನ್

ಸ್ಕೋರ್ ಕಾರ್ಡ್

ಕರ್ನಾಟಕ: 3ಕ್ಕೆ294 (90 ಓವರ್‌ಗಳಲ್ಲಿ)
ಸಮರ್ಥ್ ಸಿ ಏಕನಾಥ್ ಬಿ ತೆಂಡೂಲ್ಕರ್ 140 (238ಎ, 4X14).
ಮಯಂಕ್ ಎಲ್‌ಬಿಡಬ್ಲ್ಯು ಬಿ ಲಕ್ಷ್ಯ 50 (82ಎ, 4X5, 6X2)
ವಿಶಾಲ್ ಬ್ಯಾಟಿಂಗ್ 73 (172ಎ, 4X9)
ನಿಕಿನ್ ಜೋಸ್ ಎಲ್‌ಬಿಡಬ್ಲ್ಯು ಬಿ ದರ್ಶನ್ 9 (37ಎ, 4X1)
ಮನೀಷ್ ಬ್ಯಾಟಿಂಗ್ 8 (14ಎ, 4X1)
ಇತರೆ: 14 (ಬೈ 4, ಲೆಗ್‌ಬೈ 5, ವೈಡ್ 2, ನೋಬಾಲ್ 3)

ವಿಕೆಟ್ ಪತನ: 1-116 (ಮಯಂಕ್ ಅಗರವಾಲ್; 30.5), 2-259 (ಆರ್. ಸಮರ್ಥ್; 74.4), 3-284 (ನಿಕಿನ್ ಜೋಸ್; 85.1)

ಬೌಲಿಂಗ್: ಲಕ್ಷ್ಯ ಗರ್ಗ್ 15-1-48-1, ಅರ್ಜುನ್ ತೆಂಡೂಲ್ಕರ್ 13-2-30-1, ಫೆಲಿಕ್ಸ್ ಅಲೆಮಾವೊ 12-0-55-0, ದರ್ಶನ್ ಮಿಸಾಲ್ 32-4-73-1, ಮೋಹಿತ್ ರೆಡ್ಕರ್ 14-0-55-0, ಸಿದ್ದೇಶ್ ಲಾಡ್ 1-0-8-0, ಸುಯಶ್ ಪ್ರಭುದೇಸಾಯಿ 3-0-16-0

2022 ಹಿನ್ನೋಟ

ಫುಟ್‌ಬಾಲ್: ಏರಿಳಿತದ ವರ್ಷ



ಎಎಫ್‌ಸಿ ಏಷ್ಯಾಕಪ್‌ಗೆ ಅರ್ಹತೆ ಪಡೆದ ಸಂಭ್ರಮದಲ್ಲಿ ಭಾರತ ತಂಡ

ಭಾರತದ ಫುಟ್‌ಬಾಲ್ 2022ರಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದೆ. ಭಾರತ ತಂಡ ಬಲಿಷ್ಠ ಎದುರಾಳಿಗಳ ವಿರುದ್ಧ ಗೆಲ್ಲಲು ವಿಫಲವಾದರೂ, ಫಿಫಾ ರ್‍ಯಾಂಕಿಂಗ್‌ನಲ್ಲಿ ತನಗಿಂತ ಕೆಳಗಿನ ಸ್ಥಾನಗಳಲ್ಲಿರುವ ತಂಡಗಳನ್ನು ಮಣಿಸಲು ಹೆಚ್ಚು ಕಷ್ಟಪಡಲಿಲ್ಲ. ಈ ವರ್ಷ ನಡೆದಿದ್ದ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಬಹರೇನ್, ಬೆಲಾರಸ್, ಜೋರ್ಡಾನ್‌ನಂತಹ ತಂಡಗಳ ವಿರುದ್ಧ ಸೋತಿದ್ದರೆ ಕಾಂಬೋಡಿಯಾ, ಅಫ್ಗಾನಿಸ್ತಾನ ಮತ್ತು ಹಾಂಗ್‌ಕಾಂಗ್ ವಿರುದ್ಧ ಗೆದ್ದಿದೆ. ಭಾರತ ತಂಡ ನೀಡಿದ ಪ್ರದರ್ಶನಕ್ಕಿಂತಲೂ, ಫುಟ್‌ಬಾಲ್‌ನ ಆಡಳಿತ ನೋಡಿಕೊಳ್ಳುವ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಸಾಕಷ್ಟು ಸುದ್ದಿಮಾಡಿತು.

ಏಷ್ಯಾಕಪ್‌ಗೆ ಅರ್ಹತೆ

ಈ ವರ್ಷ ಭಾರತ ತಂಡದ ಅತಿದೊಡ್ಡ ಸಾಧನೆಯೆಂದರೆ 2023 ರಲ್ಲಿ ನಡೆಯಲಿರುವ ಎಎಫ್‌ಸಿ ಏಷ್ಯಾ ಕಪ್‌ಗೆ ಅರ್ಹತೆ ಪಡೆದದ್ದು. ಸುನಿಲ್ ಚೆಟ್ರಿ ಬಳಗ ಅರ್ಹತಾ ಸುತ್ತಿನಲ್ಲಿ ಗಮನಾರ್ಹ ಪ್ರದರ್ಶನ ನೀಡಿತು. 2019ರ ಏಷ್ಯಾಕಪ್‌ನಲ್ಲಿ ಆಡಿದ್ದ ಭಾರತ, ಇದೇ ಮೊದಲ ಬಾರಿ ಸತತ ಎರಡು ಬಾರಿ ಅರ್ಹತೆ ಪಡೆದ ಸಾಧನೆ ಮಾಡಿತು. ಎಎಫ್‌ಸಿ ಏಷ್ಯಾ ಕಪ್ ಮುಂದಿನ ವರ್ಷ ಕತಾರ್‌ನಲ್ಲಿ ನಡೆಯಲಿದ್ದು, ಒಟ್ಟು 24 ತಂಡಗಳು ಪಾಲ್ಗೊಳ್ಳಲಿವೆ.

ಚೌಬೆ ನೂತನ ಅಧ್ಯಕ್ಷ



ಫಿಫಾ ಮಾರ್ಗಸೂಚಿಯಂತೆ ಸೆಪ್ಟೆಂಬರ್‌ನಲ್ಲಿ ಎಐಎಫ್‌ಎಫ್ ಚುನಾವಣೆ ನಡೆದಿತ್ತು. ಅಧ್ಯಕ್ಷರಾಗಿ ಕಲ್ಯಾಣ್ ಚೌಬೆ ಮತ್ತು ಉಪಾಧ್ಯಕ್ಷರಾಗಿ ಎನ್.ಎ. ಹ್ಯಾರಿಸ್ ಆಯ್ಕೆಯಾಗಿದ್ದರು. 85 ವರ್ಷಗಳ ಇತಿಹಾಸದಲ್ಲಿ ಫೆಡರೇಷನ್‌ಗೆ ಇದೇ ಮೊದಲ ಬಾರಿಗೆ ಮಾಜಿ ಆಟಗಾರರೊಬ್ಬರು ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಅಧ್ಯಕ್ಷ ಸ್ಥಾನಕ್ಕೆ ನಡೆದ ಪೈಪೋಟಿಯಲ್ಲಿ ಚೌಬೆ 33–1 ಮತಗಳಿಂದ ಭಾರತ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ಅವರನ್ನು ಸೋಲಿಸಿದ್ದರು.

ಎಐಎಫ್‌ಎಫ್ ಅಮಾನತು

ಆಡಳಿತದಲ್ಲಿ ತಲೆದೋರಿರುವ ಗೊಂದಲವನ್ನು ನಿಗದಿತ ಗಡುವಿನೊಳಗೆ ಬಗೆಹರಿಸದ ಕಾರಣ ಮಂದೊಡ್ಡಿ ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಆಗಸ್ಟ್‌ನಲ್ಲಿ ಎಐಎಫ್‌ಎಫ್‌ಅನ್ನು ಅಮಾನತು ಮಾಡಿತ್ತು. ಇದರಿಂದ ಅಂತರರಾಷ್ಟ್ರೀಯಮಟ್ಟದಲ್ಲಿ ಭಾರತ ಮುಜುಗರ ಅನುಭವಿಸುವಂತಾಗಿತ್ತು. ಸುಪ್ರೀಂಕೋರ್ಟ್‌ನ ಮಧ್ಯಪ್ರವೇಶ ಹಾಗೂ ಫಿಫಾ ಷರತ್ತುಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದ ಬಳಿಕ ಅಮಾನತು ತೆರವುಗೊಂಡಿತ್ತು.

ಮಹಿಳಾ ವಿಶ್ವಕಪ್‌ಗೆ ಆತಿಥ್ಯ

ಫಿಫಾ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಟೂರ್ನಿಯನ್ನು ಭಾರತ ಯಶಸ್ವಿಯಾಗಿ ಆಯೋಜಿಸಿತ್ತು. ಅಕ್ಟೋಬರ್ 11ರಿಂದ 30ರವರೆಗೆ ನಡೆದಿದ್ದ ಟೂರ್ನಿಯ ಪಂದ್ಯಗಳು ಭುವನೇಶ್ವರ, ಗೋವಾ ಮತ್ತು ನವೀ ಮುಂಬೈನಲ್ಲಿ ಆಯೋಜನೆಯಾಗಿದ್ದವು. ಚೊಚ್ಚಲ ವಿಶ್ವಕಪ್ ಆಡಿದ್ದ ಭಾರತ ತಂಡ ಲೀಗ್ ಹಂತದ ಎಲ್ಲ ಮೂರೂ ಪಂದ್ಯಗಳಲ್ಲಿ ಸೋತಿತ್ತು. ಸ್ಪೇನ್ ಚಾಂಪಿಯನ್ ಆಗಿದ್ದರೆ, ಕೊಲಂಬಿಯಾ ರನ್ನರ್ಸ್ ಅಪ್ ಆಗಿತ್ತು.

ಅರ್ಜೆಂಟೀನಾಗೆ ಕಿರೀಟ



ಜಾಗತಿಕ ಫುಟ್‌ಬಾಲ್‌ನಲ್ಲಿ ಫಿಫಾ ವಿಶ್ವಕಪ್ ಟೂರ್ನಿ ಈ ವರ್ಷದ ‘ಹೈಲೈಟ್’ ಆಗಿತ್ತು. ಕತಾರ್‌ನಲ್ಲಿ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿ ಫ್ರಾನ್ಸ್ ತಂಡವನ್ನು ಮಣಿಸಿದ್ದ ಅರ್ಜೆಂಟೀನಾ ಕಿರೀಟ ಮುಡಿಗೇರಿಸಿಕೊಂಡಿತ್ತು. ಲಯೊನೆಲ್ ಮೆಸ್ಸಿ ತಮ್ಮ ಐದನೇ ಪ್ರಯತ್ನದಲ್ಲಿ ಮಿರುಗುವ ಟ್ರೋಫಿಗೆ ಮುತ್ತಿಕ್ಕಿ, ಕೋಟ್ಯಾಂತರ ಅಭಿಮಾನಿಗಳಲ್ಲಿ ಪುಳಕ ಉಂಟುಮಾಡಿದ್ದರು.

ಕ್ರಿಕೆಟ್ ಟೆಸ್ಟ್: ಲಥಾಮ್–ಕಾನ್ವೆ ಉತ್ತಮ ಜತೆಯಾಟ

ಕರಾಚಿ (ಎಪಿ): ಟಾಮ್ ಲಥಾಮ್ ಮತ್ತು ಡೆವೊನ್ ಕಾನ್ವೆ ಅವರ ಅಜೇಯ ಅರ್ಧಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ಪಾಕಿಸ್ತಾನಕ್ಕೆ ದಿಟ್ಟ ಉತ್ತರ ನೀಡಿದೆ.

ಕರಾಚಿ ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಮಂಗಳವಾರದ ಆಟದ ಅಂತ್ಯಕ್ಕೆ ನ್ಯೂಜಿಲೆಂಡ್, ವಿಕೆಟ್ ನಷ್ಟವಿಲ್ಲದೆ 165 ರನ್ ಗಳಿಸಿದೆ. ಲಥಾಮ್ (ಅಜೇಯ 78, 126 ಎ.) ಮತ್ತು ಕಾನ್ವೆ (ಅಜೇಯ 82, 156 ಎ.) ಅವರು ಮೂರನೇ ದಿನಕ್ಕೆ ಬ್ಯಾಟಿಂಗ್ ಕಾಯ್ದಿರಿಸಿದ್ದಾರೆ.

ಕಿವೀಸ್‌ನ ಆರಂಭಿಕ ಬ್ಯಾಟರ್‌ಗಳು ಪಾಕ್ ತಂಡದ ವೇಗ ಮತ್ತು ಸ್ಪಿನ್ ದಾಳಿಯನ್ನು ಸಮರ್ಥವಾಗಿ ಎದುರಿಸಿದರು. ಮೊದಲ ಇನಿಂಗ್ಸ್ ಹಿನ್ನಡೆ ತಪ್ಪಿಸಲು ನ್ಯೂಜಿಲೆಂಡ್ ಇನ್ನೂ 273 ರನ್ ಗಳಿಸಬೇಕು. ಕಾನ್ವೆ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ 19ನೇ ಇನಿಂಗ್ಸ್‌ನಲ್ಲಿ 1,000 ರನ್ ಪೂರೈಸಿದ ಸಾಧನೆ ಮಾಡಿದರು.

ಸಲ್ಮಾನ್ ಶತಕ: ಇದಕ್ಕೂ ಮುನ್ನ 5 ವಿಕೆಟ್‌ಗಳಿಗೆ 317ರನ್‌ಗಳಿಂದ ಮಂಗಳವಾರ ಆಟ ಮುಂದುವರಿಸಿದ ಪಾಕಿಸ್ತಾನ 438 ರನ್‌ಗಳಿಗೆ ಆಲೌಟಾಯಿತು. ಆಘಾ ಸಲ್ಮಾನ್ (103 ರನ್, 155 ಎ.) ಶತಕ ಗಳಿಸಿದರು. ಬಾಬರ್ ಅಜಂ (161) ಅವರು ಹಿಂದಿನ ದಿನದ ಮೊತ್ತಕ್ಕೆ ಯಾವುದೇ ರನ್ ಸೇರಿಸದೆ ವಿಕೆಟ್ ಒಪ್ಪಿಸಿದರು.



ಅರ್ಧಶತಕ ಗಳಿಸಿದ ಡೆವೊನ್ ಕಾನ್ವೆ ಸಂಭ್ರಮಿಸಿದರು –ಎಪಿ/ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ 130.5 ಓವರ್‌ಗಳಲ್ಲಿ 438 (ಬಾಬರ್ ಅಜಂ 161, ಆಘಾ ಸಲ್ಮಾನ್ 103, ಟಿಮ್ ಸೌಥಿ 69ಕ್ಕೆ 3, ಇಶ್ ಸೋಧಿ 87ಕ್ಕೆ 2) ನ್ಯೂಜಿಲೆಂಡ್ 47 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 165 (ಟಾಮ್ ಲಥಾಮ್ ಬ್ಯಾಟಿಂಗ್ 78, ಡೆವೊನ್ ಕಾನ್ವೆ ಬ್ಯಾಟಿಂಗ್ 82)

ಕ್ರಿಕೆಟ್: ಆಸ್ಟ್ರೇಲಿಯಾ ತಂಡಕ್ಕೆ ಇನಿಂಗ್ಸ್ ಮುನ್ನಡೆ

100ನೇ ಟೆಸ್ಟ್: ವಾರ್ನರ್ 200

ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಅವರು ದ್ವಿಶತಕ ಸಾಧನೆಯ ಮೂಲಕ ತಮ್ಮ 100ನೇ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು ಸ್ಮರಣೀಯವನ್ನಾಗಿಸಿಕೊಂಡರು.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ವಾರ್ನರ್ ಭರ್ತಿ 200 ರನ್ ಗಳಿಸಿದರು. ಮೆಲ್ಬರ್ನ್‌ನಲ್ಲಿ ತಾಪಮಾನ ಹೆಚ್ಚಿದ್ದರಿಂದ ಬಳಲಿದ ಅವರು ದ್ವಿಶತಕ ಪೂರೈಸಿದ ಬಳಿಕ ಪೆವಿಲಿಯನ್‌ಗೆ ಮರಳಿದರು.

ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡ ಮೂರು ವಿಕೆಟ್‌ಗಳಿಗೆ 386 ರನ್ ಗಳಿಸಿದ್ದು, 197 ರನ್‌ಗಳ ಮುನ್ನಡೆ ಸಾಧಿಸಿದೆ.

ಒಂದು ವಿಕೆಟ್‌ಗೆ 45 ರನ್‌ಗಳಿಂದ ಮಂಗಳವಾರ ಆಟ ಮುಂದುವರಿಸಿದ್ದ ಆಸ್ಟ್ರೇಲಿಯಾ ತಂಡ ಮಾರ್ನಸ್ ಲಾಬುಷೇನ್ (14) ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ವಾರ್ನರ್ ಅವರು ಸ್ಟೀವ್ ಸ್ಮಿತ್ (85) ಅವರೊಂದಿಗೆ ಮೂರನೇ ವಿಕೆಟ್‌ಗೆ 239 ರನ್ ಸೇರಿಸಿ ತಂಡಕ್ಕೆ ಆಸರೆಯಾದರು.

254 ಎಸೆತಗಳನ್ನು ಎದುರಿಸಿದ ವಾರ್ನರ್ 16 ಬೌಂಡರಿ ಮತ್ತು ಎರಡು ಸಿಕ್ಸರ್ ಹೊಡೆದರು. ಟೆಸ್ಟ್‌ನಲ್ಲಿ 2020ರ ಜನವರಿ ಬಳಿಕ ಅವರು ಮೂರಂಕಿಯ ಗಡಿ ದಾಟಿದ್ದು ಇದೇ ಮೊದಲು. ಇಂಗ್ಲೆಂಡ್‌ನ ಜೋ ರೂಟ್ ಅವರೂ ತಮ್ಮ 100ನೇ ಟೆಸ್ಟ್‌ನಲ್ಲಿ ದ್ವಿಶತಕ ಗಳಿಸಿದ ಸಾಧನೆ ಮಾಡಿದ್ದರು.



ದ್ವಿಶತಕ ಗಳಿಸಿದ ಡೇವಿಡ್ ವಾರ್ನರ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ಎನ್ರಿಕ್‌ಗೆ ಬಡಿದ ಸ್ಪೈಡರ್‌ಕ್ಯಾಮ್

ದಕ್ಷಿಣ ಆಫ್ರಿಕಾ ತಂಡದ ವೇಗದ ಬೌಲರ್ ಎನ್ರಿಕ್ ನಾರ್ಕಿಯಾ ಅವರು ಫೀಲ್ಡಿಂಗ್ ಮಾಡುತ್ತಿದ್ದಾಗ ಸ್ಪೈಡರ್‌ಕ್ಯಾಮ್ ಬಡಿದು ನೆಲಕ್ಕುರುಳಿದ ಘಟನೆ ಎರಡನೇ ದಿನದಾಟದ ವೇಳೆ ನಡೆಯಿತು. ಸ್ಪೈಡರ್‌ಕ್ಯಾಮ್ ವೇಗವಾಗಿ ಅವರ ಭುಜಕ್ಕೆ ಬಡಿದಾಗ, ಆಯತಪ್ಪಿ ನೆಲಕ್ಕೆ ಬಿದ್ದರು. ಅದೃಷ್ಟವಶಾತ್ ಅವರಿಗೆ ಗಂಭೀರ ಗಾಯ ಆಗಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಪಂದ್ಯದ ಪ್ರಸಾರ ಹಕ್ಕು ಹೊಂದಿರುವ ಫಾಕ್ಸ್ ಸ್ಪೋರ್ಟ್ಸ್, ನಾರ್ಕಿಯಾ ಹಾಗೂ ದಕ್ಷಿಣ ಆಫ್ರಿಕಾ ತಂಡದ ಕ್ಷಮೆ ಕೇಳಿದೆ.

8,000 ರನ್: ವಾರ್ನರ್ ಇದೇ ವೇಳೆ ಟೆಸ್ಟ್‌ನಲ್ಲಿ 8 ಸಾವಿರ ರನ್ ಪೂರೈಸಿದರು. ಮಾರ್ಕ್ ವಾ (8,029) ಅವರನ್ನು ಹಿಂದಿಕ್ಕಿ ಟೆಸ್ಟ್‌ನಲ್ಲಿ ಅತಿಹೆಚ್ಚು ರನ್ ಗಳಿಸಿದ ಆಸ್ಟ್ರೇಲಿಯಾದ ಬ್ಯಾಟರ್‌ಗಳ ಪಟ್ಟಿಯಲ್ಲಿ ಏಳನೇ ಸ್ಥಾನಕ್ಕೇರಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 68.4 ಓವರ್‌ಗಳಲ್ಲಿ 189. ಆಸ್ಟ್ರೇಲಿಯಾ 91 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 386 (ಡೇವಿಡ್ ವಾರ್ನರ್ ಗಾಯಗೊಂಡು ನಿವೃತ್ತಿ 200, ಸ್ಟೀವ್ ಸ್ಮಿತ್ 85, ಟ್ರ್ಯಾವಿಸ್ ಹೆಡ್ ಬ್ಯಾಟಿಂಗ್ 48, ಅಲೆಕ್ಸ್ ಕೇರಿ ಬ್ಯಾಟಿಂಗ್ 9, ಕಗಿಸೊ ರಬಾಡ 94ಕ್ಕೆ 1)

ವಿಶ್ವ ಚೆಸ್: ಹಿಜಾಬ್ ಇಲ್ಲದೇ ಸ್ಪರ್ಧಿಸಿದ ಇರಾನ್ ಮಹಿಳೆ

ದುಬೈ (ರಾಯಿಟರ್ಸ್): ಇರಾನ್ ದೇಶದ ಚೆಸ್ ಆಟಗಾರ್ತಿಯೊಬ್ಬರು ಅಂತರರಾಷ್ಟ್ರೀಯ ಟೂರ್ನಿಯೊಂದರಲ್ಲಿ ಹಿಜಾಬ್ ಧರಿಸದೇ ಸ್ಪರ್ಧಿಸಿದರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕಳೆದ ಕೆಲವು ತಿಂಗಳುಗಳಿಂದ ಇರಾನ್‌ನಲ್ಲಿ ಹಿಜಾಬ್ ಕಡ್ಡಾಯ ನಿಯಮ ವಿರೋಧಿಸಿರುವ ಮಹಿಳೆಯರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಪ್ರತಿಭಟನೆಗೆ ಬೆಂಬಲ ಸೂಚಿಸಿ ಸಾರಾ ಖಾದೀಮ್ ಅವರು ಫಿಡೆ ವಿಶ್ವ ರ್‍ಯಾಪಿಡ್ ಹಾಗೂ ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ಹಿಜಾಬ್ ಇಲ್ಲದೇ ಭಾಗವಹಿಸಿದರು ಎಂದು ವರದಿಯಾಗಿದೆ.

ಅಲ್ಮಾಟಿಯಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಅವರು ಆಡುತ್ತಿದ್ದಾರೆ. ಅವರು ವಿಶ್ವ ರ್‍ಯಾಂಕಿಂಗ್‌ನಲ್ಲಿ 804ನೇ ಸ್ಥಾನದಲ್ಲಿದ್ದಾರೆ.

ಬ್ಯಾಸ್ಕೆಟ್‌ಬಾಲ್: ರಾಜ್ಯ ತಂಡಕ್ಕೆ ಕಂಚು

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡದವರು ಇಂದೋರ್‌ನಲ್ಲಿ ನಡೆದ 37ನೇ ರಾಷ್ಟ್ರೀಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಮೂರು ಮತ್ತು ನಾಲ್ಕನೇ ಸ್ಥಾನವನ್ನು ನಿರ್ಣಯಿಸಲು ಮಂಗಳವಾರ ನಡೆದ ಪಂದ್ಯದಲ್ಲಿ ಕರ್ನಾಟಕ 73–72 ರಲ್ಲಿ ರಾಜಸ್ತಾನ ತಂಡವನ್ನು ಮಣಿಸಿತು. ವಿರಾಮದ ವೇಳೆ ರಾಜ್ಯ ತಂಡ 37–40 ರಲ್ಲಿ ಹಿನ್ನಡೆಯಲ್ಲಿತ್ತು.

ಕರ್ನಾಟಕದ ಪರ ಆದ್ಯಾ ನಾಗಲಿಂಗ 20, ಯಶಸ್ವಿನಿ 16 ಮತ್ತು ನಿಧಿ ಉಮೇಶ್ 16 ಪಾಯಿಂಟ್ಸ್ ತಂದಿತ್ತರು.

ಸಂತೋಷ್ ಟ್ರೋಫಿ: ಕರ್ನಾಟಕ ಗೆಲುವಿನ ಓಟ

ಬೆಂಗಳೂರು: ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಕರ್ನಾಟಕ ತಂಡದ ಗೆಲುವಿನ ಓಟ ಮುಂದುವರಿದಿದೆ.

ನವದೆಹಲಿಯಲ್ಲಿ ಮಂಗಳವಾರ ನಡೆದ ರೋಚಕ ಪಂದ್ಯದಲ್ಲಿ ಕರ್ನಾಟಕ 3–2 ಗೋಲುಗಳಿಂದ ಲಡಾಖ್ ವಿರುದ್ಧ ಗೆದ್ದಿತು. ಪ್ರಬಲ ಪೈಪೋಟಿ ಕಂಡುಬಂದ ಪಂದ್ಯದ 9ನೇ ನಿಮಿಷದಲ್ಲಿ ಮೊಹಮ್ಮದ್ ಇಲ್ಯಾಸ್ ಅವರು ಲಡಾಖ್‌ಗೆ ಮುನ್ನಡೆ ತಂದಿತ್ತರು.

ಆರಂಭದಲ್ಲೇ ಹಿನ್ನಡೆ ಅನುಭವಿಸಿದ ಕರ್ನಾಟಕ, ಮರುಹೋರಾಟ ನಡೆಸಿತು. 27ನೇ ನಿಮಿಷದಲ್ಲಿ ಅಭಿಷೇಕ್ ಶಂಕರ್ ಪವಾರ್ ಗೋಲು ಗಳಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು. ಆ ಬಳಿಕ ಆಕ್ರಮಣಕಾರಿ ಆಟ ಮುಂದುವರಿಸಿದ ಕರ್ನಾಟಕ ತಂಡ ಜೇಕಬ್ ಜಾನ್ (54ನೇ ನಿ.) ಮತ್ತು ರಾಬಿನ್ ಯಾದವ್ (80ನೇ ನಿ.) ತಂದಿತ್ತ ಗೋಲುಗಳ ನೆರವಿನಿಂದ 3–1 ರಲ್ಲಿ ಮುನ್ನಡೆ ಗಳಿಸಿತು.

ಪಂದ್ಯ ಕೊನೆಗೊಳ್ಳಲು ಕೆಲವೇ ಸೆಕೆಂಡುಗಳು ಇರುವಾಗ ಸ್ಟಾನ್ಜಿನ್ ಗಿಲಿಕ್ (90+3ನೇ ನಿ.) ಅವರು ಲಡಾಖ್ ಪರ ಎರಡನೇ ಗೋಲು ಗಳಿಸಿ ಸೋಲಿನ ಅಂತರ ತಗ್ಗಿಸಿದರು.

ಕರ್ನಾಟಕ ತಂಡ ಗುರುವಾರ ನಡೆಯಲಿರುವ ತನ್ನ ಮುಂದಿನ ಪಂದ್ಯದಲ್ಲಿ ತ್ರಿಪುರ ವಿರುದ್ಧ ಪೈಪೋಟಿ ನಡೆಸಲಿದೆ.



ಕರ್ನಾಟಕ (ಎಡ) ಮತ್ತು ಲಡಾಖ್ ತಂಡಗಳ ಆಟಗಾರರ ನಡುವಿನ ಪೈಪೋಟಿ

ಚೀನಾ: ಜ.8ರಿಂದ ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲಿನ ನಿರ್ಬಂಧ ತೆರವು

ಬೀಜಿಂಗ್ (ಪಿಟಿಐ): ಕೋವಿಡ್‌ಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಸಡಿಲಿಸಿರುವ ಚೀನಾವು, ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ವಿಧಿಸಲಾಗಿದ್ದ ನಿರ್ಬಂಧಗಳನ್ನು ಜನವರಿ 8ರಿಂದ ತೆರವು ಮಾಡುವುದಾಗಿ ಘೋಷಿಸಿದೆ.

ಸರ್ಕಾರದ ವಿರುದ್ಧ ರಾಷ್ಟ್ರವ್ಯಾಪಿ ನಡೆದಿದ್ದ ಪ್ರತಿಭಟನೆಯ ಹಿನ್ನೆಲೆಯಲ್ಲಿ ಚೀನಾ ಈ ಪ್ರಮುಖ ನಿರ್ಧಾರ ಕೈಗೊಂಡಿದೆ. ಇದೇ ವೇಳೆ, ಓಮೈಕ್ರಾನ್‌ನ ಉಪತಳಿ ಬಿಎಫ್.7 ಸೋಂಕಿನ ಪ್ರಕರಣಗಳ ಸಂಖ್ಯೆಯಲ್ಲಿ ದಿಢೀರ್ ಹೆಚ್ಚಳ ಕಂಡುಬರುತ್ತಿರುವ ಸಂದರ್ಭದಲ್ಲಿ, ಚೀನಾವು ಈ ಕ್ರಮ ಕೈಗೊಂಡಿದೆ.

ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ಎರಡು ವಾರಗಳ ಪ್ರತ್ಯೇಕ ವಾಸದ ನಿಯಮವನ್ನು ಚೀನಾ ವಿಧಿಸಿತ್ತು. ನಂತರ ಇದು ಐದು ದಿನಗಳಿಗೆ ಕಡಿತಗೊಂಡಿತು.



ಸದ್ಯ ಮೂರು ದಿನಗಳವರೆಗೆ ಪ್ರತ್ಯೇಕ ವಾಸ ಇರಬೇಕಾದ ನಿಯಮ ಇದೆ.

ಲಸಿಕೆ ಪಡೆಯಲು ನಿರಾಕರಿಸುತ್ತಿರುವ ಹಿರಿಯ ನಾಗರಿಕರು: ದೇಶದಲ್ಲಿ ಕೋವಿಡ್ ಪ್ರಕರಣದಲ್ಲಿ ಏರಿಕೆ ಕಂಡುಬಂದಿದ್ದರಿಂದ ಚೀನಾ ಸರ್ಕಾರವು ಮನೆ ಮನೆಗೆ ತೆರಳಿ ಲಸಿಕೆ ನೀಡುತ್ತಿದೆ. ಆದರೆ, ಹಿರಿಯ ನಾಗರಿಕರು ಲಸಿಕೆ ಪಡೆದುಕೊಳ್ಳಲು ನಿರಾಕರಿಸುತ್ತಿದ್ದಾರೆ.

ಜ್ವರ ಬರುವುದು, ರಕ್ತ ಹೆಪ್ಪುಗಟ್ಟುವುದು ಸೇರಿದಂತೆ ಲಸಿಕೆಯಿಂದ ಆರೋಗ್ಯದ ಹಲವು ಅಡ್ಡ ಪರಿಣಾಮಗಳಾಗುತ್ತವೆ ಎನ್ನುವ ಹಿರಿಯ ನಾಗರಿಕರು ಲಸಿಕೆಯನ್ನು ಪಡೆದುಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಕಡ್ಡಾಯ ಪರೀಕ್ಷೆ ಜಪಾನ್

ಟೋಕಿಯೊ (ಎಪಿ): ಚೀನಾದಿಂದ ಬರುವ ಎಲ್ಲಾ ಪ್ರಯಾಣಿಕರಿಗೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಲಾಗುವುದು ಎಂದು ಜಪಾನ್ ಮಂಗಳವಾರ ಹೇಳಿದೆ.

ಹೊಸ ವರ್ಷಾಚರಣೆ ಸಂಭ್ರಮದಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆಯಾಗಲಿದೆ. ಈ ಕಾರಣದಿಂದ ಜಪಾನ್ ಈ ಕಠಿಣ ನಿರ್ಧಾರ ಕೈಗೊಂಡಿದೆ ಎಂದು ಮೂಲಗಳು ಹೇಳಿವೆ.

26 ರೋಹಿಂಗ್ಯಾ ನಿರಾಶ್ರಿತರ ಸಾವು

ಪಿದ್ಯೆ (ಇಂಡೋನೆಷ್ಯಾ) (ಎಪಿ): ಇಂಡೋನೆಷ್ಯಾದಲ್ಲಿ ಸುರಕ್ಷಿತ ನೆಲೆ ಅರಸಿ ವಲಸೆ ಹೊರಟಿದ್ದ ರೋಹಿಂಗ್ಯಾ ಸಮುದಾಯದ ನಿರಾಶ್ರಿತರಲ್ಲಿ 26 ಜನರು ಒಂದು ತಿಂಗಳು ಕಾಲ ಅಪಾಯಕಾರಿ ರೀತಿಯಲ್ಲಿ ಸಮುದ್ರಯಾನ ಮಾಡಿ, ನಿರ್ಜಲೀಕರಣದಿಂದ ದುರಂತ ಸಾವು ಕಂಡಿದ್ದಾರೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ ಮಂಗಳವಾರ ಹೇಳಿದೆ.

ಅಚೆಯ ಪಿದ್ಯೆ ಜಿಲ್ಲೆಯ ಕರಾವಳಿ ಹಳ್ಳಿಯ ತೀರದಲ್ಲಿ ಸೋಮವಾರ ಮರದ ದೋಣಿಯಿಂದ ಇಳಿದ 185 ಪ್ರಯಾಣಿಕರಲ್ಲಿ ಮಹಿಳೆಯರು ಮತ್ತು ಮಕ್ಕಳು ನಿತ್ರಾಣಗೊಂಡಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿದ ವಿಡಿಯೊಗಳಲ್ಲಿ ಅನೇಕರು ಸಹಾಯಕ್ಕಾಗಿ ಮೊರೆ ಇಡುತ್ತಿದ್ದ, ರೋದಿಸುತ್ತಿದ್ದ ದೃಶ್ಯಗಳು ಹೃದಯ ಹಿಂಡುವಂತಿವೆ ಎಂದು ಹೇಳಿದೆ.

ಉಕ್ರೇನ್ ನಿಶ್ಶಸ್ತ್ರೀಕರಣ ಅಗತ್ಯ: ಲಾವ್ರೊವ್

ಕೀವ್ (ಎಪಿ): ‘ಉಕ್ರೇನ್ ಸ್ವತಃ ನಿಶ್ಶಸ್ತ್ರೀಕರಣ ಹೊಂದಬೇಕು ಇಲ್ಲವೇ ಅದನ್ನು ನಮ್ಮ ಸೇನಾ ಪಡೆಗಳೇ ನಿಶ್ಶಸ್ತ್ರೀಕರಣಗೊಳಿಸಲಿವೆ’ ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೈ ಲಾವ್ರೊವ್ ಮಂಗಳವಾರ ಹೇಳಿದ್ದಾರೆ.

‘ರಷ್ಯಾಕ್ಕೆ ಸೇನಾ ಬೆದರಿಕೆಯೊಡ್ಡುವುದು ಕೊನೆಯಾಗಬೇಕು. ನಮ್ಮ ಪ್ರಮುಖ ಬೇಡಿಕೆಯಾದ ‘ನಿಶ್ಶಸ್ತ್ರೀಕರಣ’ ಮತ್ತು ‘ನಾಜಿವಾದ ರಹಿತ’ ದೇಶವಾಗಿ ಉಳಿಯುವುದನ್ನು ಉಕ್ರೇನ್ ಪೂರೈಸಲೇಬೇಕು. ಇಲ್ಲದಿದ್ದರೆ ರಷ್ಯಾ ಸೇನೆಯೇ ಈ ಸಮಸ್ಯೆಯನ್ನು ಪರಿಹರಿಸಲಿದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

‘ಫೆ.24 ರಂದು ಪ್ರಾರಂಭವಾದ ಸಂಘರ್ಷವು ಎಷ್ಟು ಕಾಲ ಮುಂದುವರಿಯಲಿದೆ ಎಂಬುದು ಕೀವ್ ಮತ್ತು ವಾಷಿಂಗ್ಟನ್ ನಿರ್ಧಾರದ ಮೇಲೆ ನಿಂತಿದೆ. ಚೆಂಡು ಈಗ ಆ ಬದಿಯಲ್ಲಿದೆ. ಅವರು ಯಾವುದೇ ಕ್ಷಣದಲ್ಲಿ ನಿರರ್ಥಕ ಪ್ರತಿರೋಧವನ್ನು ನಿಲ್ಲಿಸಬಹುದು’ ಎಂದು ಲಾವ್ರೊವ್ ಅವರು ರಷ್ಯಾದ ಸರ್ಕಾರಿ ಸುದ್ದಿ ಸಂಸ್ಥೆ ‘ಟಾಸ್’ಗೆ ತಿಳಿಸಿದ್ದಾರೆ.

ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಅವರು ‘ನಮ್ಮ ಸರ್ಕಾರ ಮಾತುಕತೆ ಮೂಲಕ ಯುದ್ಧ ಕೊನೆಗೊಳಿಸಲು ಬಯಸಿದೆ. ಆದರೆ, ರಷ್ಯಾ ಇದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ’ ಎಂದು ಹೇಳಿಕೆ ನೀಡಿದ ಬೆನ್ನಲೇ ಲಾವ್ರೊವ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ರಷ್ಯಾ ವಿರುದ್ಧ ಜಯ ಸಾಧಿಸುವುದು ಅಮೆರಿಕ ಮತ್ತು ನ್ಯಾಟೊ ಗುರಿಯಾಗಿದೆ. ಯುದ್ಧಭೂಮಿಯಲ್ಲಿ ನಮ್ಮ ರಾಷ್ಟ್ರವನ್ನು ಗಣನೀಯವಾಗಿ ದುರ್ಬಲಗೊಳಿಸಲು ಅವರು ಯೋಜಿಸಿದ್ದಾರೆ’ ಎಂದು ಲಾವ್ರೊವ್ ಹೇಳಿದರು.



ಸೈನಾ ನೆಹ್ವಾಲ್

ಆಯ್ಕೆ ಪ್ರಕ್ರಿಯೆಗೆ ಸೈನಾ ಲಭ್ಯ

ನವದೆಹಲಿ (ಪಿಟಿಐ): ಒಲಿಂಪಿಯನ್ ಸೈನಾ ನೆಹ್ವಾಲ್ ಮುಂದಿನ ಫೆಬ್ರುವರಿಯಲ್ಲಿ ನಡೆಯಲಿರುವ ಏಷ್ಯನ್ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಆಡಲು ಲಭ್ಯರಿದ್ದಾರೆ.

ಭಾರತ ತಂಡದ ಆಯ್ಕೆಯನ್ನು ಜ. 2 ಮತ್ತು 3ರಂದು ನಡೆಸಲಾಗುತ್ತಿದ್ದು ಸೈನಾ ಫಿಟ್ ಆಗಿದ್ದಾರೆಂದು ಮೂಲಗಳು ತಿಳಿಸಿವೆ. 14 ಆಟಗಾರರ ತಂಡವನ್ನು ಆಯ್ಕೆ ಮಾಡಲಾಗುವುದು.

ಮಹಿಳಾ ಸಿಂಗಲ್ಸ್‌ನಲ್ಲಿ ಸೈನಾ ಅವರಲ್ಲದೇ ಮಾಳವಿಕಾ ಬನ್ಸೊದ್ ಮತ್ತು ಆಕರ್ಷಿ ಕಶ್ಯಪ್ ಅವರನ್ನೂ ಟ್ರಯಲ್ಸ್‌ಗೆ ಆಹ್ವಾನಿಸಲಾಗಿದೆ. ಪುರುಷರ ವಿಭಾಗದಲ್ಲಿ ಅರ್ಜುನ್, ಧ್ರುವ ಕಪಿಲಾ, ಕೃಷ್ಣಪ್ರಸಾದ್ ಗಾರ್ಗ್, ವಿಷ್ಣುವರ್ಧನ ಗೌಡ ಮತ್ತು ಇಶಾನ್ ಭಟ್ನಾಗರ್ ಟ್ರಯಲ್ಸ್ ನೀಡಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್, ಎಚ್.ಎಸ್. ಪ್ರಣಯ್, ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ನೇರಪ್ರವೇಶ ಗಿಟ್ಟಿಸಿದ್ದಾರೆ.

ಖೇಲೊ ಇಂಡಿಯಾ: ಗೋವಿಂದರಾಜ್ ಐಒಎ ಪ್ರತಿನಿಧಿ



ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕೆ.ಗೋವಿಂದರಾಜ್ ಅವರು ಮುಂದಿನ ವರ್ಷ ನಡೆಯಲಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್ ತಾಂತ್ರಿಕ ಸಮಿತಿಗೆ ಐಒಎ ಪ್ರತಿನಿಧಿಯಾಗಿ ನಾಮನಿರ್ದೇಶನಗೊಂಡಿದ್ದಾರೆ.

ಅವರು ಸಮಿತಿಯ ಕೊ–ಚೇರ್‌ಮನ್ ಆಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಐದನೇ ಆವೃತ್ತಿಯ ಖೇಲೋ ಇಂಡಿಯಾ ಕ್ರೀಡಾಕೂಟ ಜ.30 ರಿಂದ ಫೆ.11ರ ವರೆಗೆ ಮಧ್ಯಪ್ರದೇಶದಲ್ಲಿ ನಡೆಯಲಿದೆ.

ವಾಲಿಬಾಲ್: ಕೇರಳ ತಂಡಗಳಿಗೆ ಪ್ರಶಸ್ತಿ

ಬೆಂಗಳೂರು: ಕೇರಳದ ಕೆಎಸ್‌ಇಬಿ ಪುರುಷ ಮತ್ತು ಮಹಿಳೆಯರ ತಂಡಗಳು ಇಲ್ಲಿ ನಡೆದ 'ವಾಜಪೇಯಿ ಕಪ್' ರಾಷ್ಟ್ರ-ಮಟ್ಟದ ವಾಲಿಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದವು.

ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘವು ವಾಜಪೇಯಿ ಜನ್ಮದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಟೂರ್ನಿಯ ಪುರುಷರ ವಿಭಾಗದ ಫೈನಲ್‌ನಲ್ಲಿ ಕೆಎಸ್‌ಇಬಿ ಮತ್ತು ಕರ್ನಾಟಕ ತಂಡಗಳು ಪೈಪೋಟಿ ನಡೆಸಿದವು. ಸ್ಕೋರ್ 25–22, 25–27 ಆಗಿದ್ದಾಗ ಮಳೆ ಬಂದ ಕಾರಣ ಪಂದ್ಯ ಸ್ಥಗಿತಗೊಂಡಿತು. ಉತ್ತಮ ಪಾಯಿಂಟ್ ಆಧಾರದಲ್ಲಿ ಕೆಎಸ್‌ಇಬಿ ಚಾಂಪಿಯನ್ ಆಯಿತು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಕೆಎಸ್‌ಇಬಿ 25–17, 25–14 ರಲ್ಲಿ ಕೇರಳ ಪೊಲೀಸ್ ತಂಡವನ್ನು ಮಣಿಸಿತು.

ಪುರುಷರ ವಿಭಾಗದ ಚಾಂಪಿಯನ್ ತಂಡ ₹ 1.25 ಲಕ್ಷ, ರನ್ನರ್ ಅಪ್ ₹ 1.25 ಲಕ್ಷ ಹಾಗೂ ಮಹಿಳಾ ವಿಭಾಗದ ಚಾಂಪಿಯನ್ ತಂಡ ₹ 75 ಸಾವಿರ ನಗದು ಬಹುಮಾನ ಗಳಿಸಿತು.